

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆ ೮೫

ಸಂಚಯ ಗ್ಯಾಲರಿ



ಎಂ.ಎಸ್.ಮೂರ್ತಿ ಅವರ ಕಲಾಕೃತಿ

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೧೯ ■ ಸಂಚಿಕೆ : ೨(೮೫)
ಮಾರ್ಚ್-ಏಪ್ರಿಲ್ ೨೦೧೦

ನೀವು ಕರುಣಾಳುಗಳು
ಈ ಸಂತೆಯಲ್ಲಿ ನನಗೊಂದು ಅಂಗಡಿ ಹಾಕಿ
ಕಣ್ಣೀರು ಮಾರುವ ಕೆಲಸ ಕೊಟ್ಟಿದ್ದೀರಿ
ನಿಮಗೆ ಚಿರಋಣಿ

ಎಸ್.ಕೆ. ಹನುಮಂತಯ್ಯ

ಸಂಪಾದಕ: ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ, ೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪

email: prahlad118@yahoo.com

ಮುಖಪುಟದ ಚಿತ್ರ:
ರಮೇಶ್ ಸೋಗೆಮನೆ
ಒಳಚಿತ್ರಗಳು:
ಎಸ್.ಎಫ್. ಹುಸೇನಿ
ರಮೇಶ್ ಸೋಗೆಮನೆ
ಮುಖಪುಟ, ಪುಟ ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಚಂದಾವಿವರ | ● ವಾರ್ಷಿಕ ಚಂದಾ : ರೂ. ೨೫೦/- ● ಎರಡು ವರ್ಷಕ್ಕೆ : ರೂ. ೫೦೦/-

ublished with Financial Assistance from the Central Institute of Indian Languages (Ministry of luman Resource Development, Department of Higher Education, Govt of India), Manasagangotri, lysore-570006 vide sanction letter 53-4(2)/2008-09/KAN/LM/GRNT dated March 30, 2010 under e scheme of Grant-in-Aid.

ಈ ಸಂಚಿಕೆಯಲ್ಲಿ...



ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ,


ಬೆಂಗಳೂರಿನಲ್ಲಿ ಕಟ್ಟಡಗಳಿಗೆ ಬರವೆಲ್ಲಿ? ನೆಲ ಬಗೆದು ನಿಂತ ಮನುಷ್ಯನ ಅಹಂಕಾರದ ಪ್ರತೀಕಗಳಂತೆ ಫಳಫಳ ಕನ್ನಡಿ ಹೊದ್ದ ಅವುಗಳು ಬೆಳೆಯುತ್ತಲೇ ಇವೆ. ಗುಡಿಸಿಲುಗಳೂ ಕಡಿಮೆ ಇಲ್ಲ. ಈಚೆಗೆ ಚೂರುಪಾರು ಅಭಿವೃದ್ಧಿ ಕಂಡುಕೊಂಡು ಶೀಟುಮನೆಗಳಾಗಿ ರೈಲು ಹಾದಿಯ ಇಬ್ಬದಿಯಲ್ಲೋ ಸ್ಲಮ್ಮುಗಳ ದಟ್ಟಣೆಯಲ್ಲೋ ಇದ್ದೇ ಇವೆ. ಆದರೆ ನಾವು ಕೆಲವು ಅಕ್ಷರ ಮಿತ್ರರು ಜೊತೆಗೂಡಿ ಒಂದು ಗುಡಿಸಲು ಕಟ್ಟುತ್ತಿದ್ದೇವೆ. ಅದಕ್ಕೆ 'ನುಡಿ ಗುಡಿಸಲು' ಎಂದು ಹೆಸರಿಟ್ಟಿದ್ದೇವೆ. ಈ ನುಡಿ ಗುಡಿಸಲು ಒಂದರವತ್ತು ಅಥವಾ ಎಪ್ಪತ್ತು ಜನ ಕೂರಬಹುದಾದ ನೆರಳು. ಸೆಗಣಿ ಸಾರಿಸಿದ ನೆಲ, ಆಗಾಗ ರಂಗವಲ್ಲಿ, ಕೆಲವು ಸಲ ಹಸಿರು ತೋರಣವೂ ಕಣ್ಣಿಗೆ ಮುದ ನೀಡಲಿದೆ. ಇದರಲ್ಲಿ ವಾರದ ಕೊನೆಯ ದಿನ ಪ್ರತಿ ಶನಿವಾರ ಒಬ್ಬ ಲೇಖಕ – ಅವನ ಮಾತು-ಕೃತಿಗಳು ಜೀವ ಪಡೆಯಲಿವೆ. ನಿಮಗೂ ಗೊತ್ತು ನಮ್ಮ ಸಾಹಿತ್ಯದ ಕಾರ್ಯಕ್ರಮಗಳ ನೀರಸತೆ–ಏಕತಾನತೆ; ಸ್ವಾಗತ, ನಿರೂಪಣೆ, ಪ್ರಸ್ತಾವನೆ... ಇದರ ಜೊತೆಗೆ ಅಭಿನಂದನೆ... ಇನ್ನು ಪುಸ್ತಕ ಬಿಡುಗಡೆ ಮೊದಲಾದ ಕಾರ್ಯಕ್ರಮಗಳಲ್ಲಿ ತಿಂಡಿ, ಕಾಫಿ ಆಮಿಷ ಎಲ್ಲದರಲ್ಲೂ ಲೆಕ್ಕಾಚಾರ ಹಣ್ಣಿಗಿಂತ ಸಿಪ್ಪೆಯ ಹಾವಳಿಯೇ ಹೆಚ್ಚು. ಬಿಡುವು ಮಾಡಿಕೊಂಡು ದೂರ ದಾರಿ ಕ್ರಮಿಸಿ ಕಾರ್ಯಕ್ರಮದಿಂದ ಒಂದಷ್ಟು ಭಾವ-ಬುದ್ಧಿಗೆ ಆಹಾರ ಸಿಗಬಹುದೆಂದು ಕೊಂಡು ಹೋದವರು ಶಾಪ ಹಾಕುವ ಹಾಗೆ ಭಾಷಣಗಳ ಅನಿಯಂತ್ರಿತ ಕೊರೆತ; ಸಾಹಿತ್ಯದ ಕಾರ್ಯಕ್ರಮ ಅಂದರೆ ಅದು ಅಮೋಘ ಕೊರೆತಾಮೃತ. ಇಂಥಾ ಜಾಡುಗಳನ್ನು ಬಿಡಿಸಿಕೊಂಡು ನಿರೂಪಕರ ತಲೆಹರಟೆ, ಔಪಚಾರಿಕ ಭಾರಗಳಿಂದ ಮುಕ್ತವಾದ ಶನಿವಾರ ಸಂಜೆ ಎರಡೇ ಗಂಟೆಗಳಲ್ಲಿ ನಮ್ಮ ಕೇಳುವ ಹುಮ್ಮಸ್ಸು, ಕೂರುವ ತಾಳ್ಮೆ ಎರಡೂ ಗಟ್ಟಿಯಾದ ಸ್ಥಿತಿಯಲ್ಲೇ ಇನ್ನಷ್ಟು ಇರಬೇಕಿತ್ತು ಅನ್ನಿಸುವ ಹಾಗೆ ಸಾಹಿತ್ಯ ಸಂಜೆಗಳನ್ನು ಆಯೋಜಿಸಲಾಗಿದೆ.

ಏಪ್ರಿಲ್ ೩ರ ಶನಿವಾರ ಸಂಜೆ ಕವಿ ಕಂಬಾರರು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಅವರಿಗೂ ಕಿಕ್ಕಿರಿದು ನಿಂತು ತುಟಿಪಿಟಿಕ್ಕೆನ್ನದೆಕವಿತೆ ಕೇಳಿದ ನೂರಾರು ಮಂದಿಯ ಬಗ್ಗೆ ಅಚ್ಚರಿಯಾಯ್ತು. ಹಿರಿಯರಾದ ಕಂಬಾರರ ಕವಿತೆ ಕೇಳಲು ಬೆಳಗೆರೆ ಕೃಷ್ಣಶಾಸ್ತ್ರಿಗಳು ಬಂದದ್ದು ಕಾರ್ಯಕ್ರಮದ ಘನತೆ ಹೆಚ್ಚಿಸಿತು. ನಂತರ ಮೂರು ವಾರಗಳಲ್ಲಿ ಬಿಳಿಗೆರೆ ಕೃಷ್ಣಮೂರ್ತಿ, ಎಸ್.ಜಿ. ಸಿದ್ಧರಾಮಯ್ಯ, ಪ್ರತಿಭಾ ನಂದಕುಮಾರ್ ತಂತಮ್ಮ ಕವಿತೆಗಳನ್ನು ಓದಿದರು. ಬಿಳಿಗೆರೆ ಕೃಷ್ಣಮೂರ್ತಿ ತಮ್ಮ ನೀರ ಹಾಡುಗಳನ್ನು ಹಾಡಿ ನೆರೆದವರ ಮನಸ್ಸು ಗೆದ್ದರೆ ಎಸ್.ಜಿ. ಸಿದ್ಧರಾಮಯ್ಯ ತಮ್ಮ ದೇಸೀ ಸತ್ವದ ಕವಿತೆಗಳಿಂದ ನೆನಪು-ವರ್ತಮಾನದ ತವಕಗಳನ್ನು ನಿರೂಪಿಸಿದರು. ಪ್ರತಿಭಾ ತಮ್ಮ ಯಾವತ್ತಿನ ಶೈಲಿಯಲ್ಲಿ ನೀನ್ಯಾಕೋ, ನಿನ್ನ ಹಂಗ್ಯಾಕೋ ಅನ್ನುವ ಧಾಟಿಯಲ್ಲಿ ಕವಿತೆಗಳನ್ನು ಓದಿ ಕೇಳುಗರನ್ನು ಅಚ್ಚರಿಗೊಳಿಸಿದರು.

ಕೆಲವರ ಪ್ರಶ್ನೆ ಇಂಥವಕ್ಕೆ ಜನ ಬರ್ತಾರ?

ನನ್ನ ಉತ್ತರ; ಒಳ್ಳೆಯ ಕಾರ್ಯಕ್ರಮಕ್ಕೆ ಜನ ಯಾಕೆ ಬರುವುದಿಲ್ಲ, ಮಾಮೂಲಿ ಜಾಡಿನದಕ್ಕಿಂತ ಉತ್ತಮವಾದ ಕಾರ್ಯಕ್ರಮ ಅವರಿಗೆ ಇಷ್ಟವಾಗುತ್ತದೆ. ಕಂಬಾರರ ಕವಿತೆ ಕೇಳಿಸಿಕೊಂಡ ಒಬ್ಬರು ಬಂದು ಎಷ್ಟೋ ವರ್ಷಗಳಿಂದ ಇಂಥದ್ದೊಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಕಾದಿದ್ದೆವು. ಬಹುಕಾಲ ಇದು ನೆನಪಾಗಿ ಉಳಿಯುವಂಥದ್ದು ಎಂದರು. ಓದುವ ಕವಿಗಳಿಗೂ, ಕೇಳುವ ಕಿವಿಗಳಿಗೂ ಎರಡಕ್ಕೂ ಮಧುರ ಮಧುರ. ಇದರ ಜೊತೆಗೆ ಬೆಂಗಳೂರಿನಂಥ ಊರಿನಲ್ಲಿ ಯಾವ್ಯಾವುದೋ ಕಾರ್ಯಕ್ರಮಗಳು ಜಗಮಗಿಸುವ ಪಬ್ಬುಗಳು ಶನಿವಾರದ ಸಂಜೆಗಳಲ್ಲಿ ರಂಗೇರುವುದಾದರೆ ಶುದ್ಧ ಸಾಹಿತ್ಯ ಪ್ರೀತಿಯ ಇಂಥದ್ದೊಂದು ಪ್ರಯೋಗ ಯಾಕೆ ನಡೆಯಬಾರದು. ಜನ ಬರುತ್ತಾರೆ ಅದರ ಸತ್ವ ಅವರನ್ನು ತಟ್ಟುತ್ತದೆ- ಎನ್ನುವ ಪ್ರಾಮಾಣಿಕ ಪ್ರಯತ್ನ. ನೀವು ಬೆಂಗಳೂರಿಗರಾದರೆ ಪ್ರತಿವಾರ ಬನ್ನಿ. ಹೊರ ಊರಿನವರಾದರೆ ಆದಾಗ, ಬೆಂಗಳೂರಿಗೆ ಬಂದಾಗ, ಶನಿವಾರ ಸಂಜೆ ತಪ್ಪದೇ ಬನ್ನಿ. ಇಲ್ಲಾ ನಿಮ್ಮೂರಿನಲ್ಲೂ ಇಂಥದ್ದೊಂದು ಕಾರ್ಯಕ್ರಮವನ್ನು ಆರಂಭಿಸಿ. ಹತ್ತಾದರೆ ಹತ್ತು ನಾಲ್ಕಾದರೆ ನಾಲ್ಕು ಜನ ಕವಿತೆ ಕೇಳಲಿಕ್ಕೆ, ಪುಸ್ತಕದ ಕುರಿತು ನಿರುಮ್ಮಳ ಹರಟುವುದಕ್ಕೆ ಗೊಡವೆಗಳ್ಯಾಕೆ? ಮನಸ್ಸೊಂದಿರಬೇಕು. ಸಾಹಿತ್ಯ ಹರಡುವುದು, ಆಸಕ್ತಿ ಮೂಡುವುದು ಹೀಗೇ ಅಲ್ಲವೇ? ಹುಬ್ಬು ಏರಿದ ಸೆಮಿನಾರುಗಳು, ಓದೇ ಇರದ ಪುಸ್ತಕ ಬಿಡುಗಡೆಗಳು, ಇಂಥವುಗಳ ಜಾಡು ಬಿಟ್ಟು ಇನ್ನಾದರೂ ನಾವು ಕಲಿಯಬೇಕು. Small is beautiful ಅಂತ ನಂಬಬೇಕು.

ನಿಮ್ಮ
ಸಂಪಾದಕ



ಇಂಡಿಯಾ ತನ್ನ ಮುಕ್ತ ಸಂಸ್ಕೃತಿ ಮರೆಯುತ್ತಿದೆಯೆ?

ಮೂಲ ಭಾಷಣ: **ಸಲ್ಮಾನ್ ರಶ್ದಿ**
ಕನ್ನಡಕ್ಕೆ: **ಬಿ.ಎಸ್. ಜಯಪ್ರಕಾಶ ನಾರಾಯಣ**

ಸಮಕಾಲೀನ ಸಾಹಿತ್ಯದಲ್ಲಿ ನನಗೆ ತುಂಬಾ ಆಪ್ತವೆನಿಸುವ ಒಂದು ಕ್ಷಣವಿದೆ. ಅದು ಅಮೆರಿಕದ ಕಾದಂಬರಿಕಾರ ಮತ್ತು ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಸಾಲ್ ಬೆಲ್ಲೋ ಬರೆದಿರುವ 'ದಿ ಡೀನ್ಸ್ ಡಿಸೆಂಬರ್' ಕಾದಂಬರಿಯಲ್ಲಿ. ಈ ಕಾದಂಬರಿಯಲ್ಲಿ ಡೀನ್ ಆಲ್ಬರ್ಟ್ ಕೋರ್ಡ್ ಎಂಬ ವ್ಯಕ್ತಿ ಶಿಕಾಗೋ ವಿಶ್ವವಿದ್ಯಾಲಯದ ಒಬ್ಬ ವಿದ್ವಾಂಸ. ಈತ ತನ್ನ ಜೀವನದ ಒಂದು ಘಟ್ಟದಲ್ಲಿ ರೊಮೇನಿಯಾ ದೇಶಕ್ಕೆ ಭೇಟಿ ಕೊಡ್ತಾನೆ. ಇವನ ಹೆಂಡತಿ ಆ ದೇಶದವಳು. ಅವರಿಬ್ಬರೂ ಒಂದು ಕೌಟುಂಬಿಕ ಕರ್ತವ್ಯದ ಮೇಲೆ, ಕೊರೆಯುವ ಚಳಿಗಾಲದಲ್ಲಿ ಆ ದೇಶಕ್ಕೆ ಹೋಗ್ತಾರೆ. ಇದು ಇವತ್ತಿನ ರೊಮೇನಿಯಾ ಅಲ್ಲ. ಆಗಿನ್ನೂ ರೊಮೇನಿಯಾದಲ್ಲಿ ಕಮ್ಯುನಿಸ್ಟರ ಆಡಳಿತ ನಡೀತಿರುತ್ತೆ. ಆಗ ಆ ದೇಶದಲ್ಲಿ ವಿಪರೀತ ನಿರ್ಬಂಧಗಳು ಬೇರೆ! ಜತೆಗೆ ಇಡೀ ದೇಶಕ್ಕೆ ದೇಶವೇ ಅಸಹಾಯಕವಾಗಿತ್ತು. ಅಲ್ಲಿ ಯಾರಿಗೂ ಯಾವ ಭರವಸೆಯು ಇರಲಿಲ್ಲ. ಈ ಡೀನ್ ಆಲ್ಬರ್ಟ್ ಒಂದು ದಿನ ತನ್ನ ಹೆಂಡತಿ ಸಂಬಂಧಿಕರ ಅಪಾರ್ಟ್‌ಮೆಂಟ್‌ನ ಕಿಟಕಿಯ ಹತ್ತಿರ ನಿಂತು, ಆಚೆ ಕಣ್ಣಿಗೆ ಬೀಳುತ್ತಿರುವ ಒಂದು ಉದ್ಯಾನವನ್ನು ನೋಡ್ತಾ ಇರ್ತಾನೆ. ಆ ಉದ್ಯಾನವೆಲ್ಲ ಆಗ ಹಿಮಪಾತದಿಂದಾಗಿ ಬೆಳ್ಳಗಾಗಿರುತ್ತೆ. ಅಲ್ಲೇ ಒಂದಿಷ್ಟು ದೂರದಲ್ಲಿ ಒಂದು ನಾಯಿ ಸಿಕ್ಕಾಪಟ್ಟೆ ಬೊಗಳ್ತಾ ಇರುತ್ತೆ. ಇದನ್ನು ಡೀನ್ ಆಲ್ಬರ್ಟ್ ಕೇಳಿಸ್ಕೊತಾನೆ. ಆ ನಾಯಿ ಒಂದೇ ಸಮನೆ ಬೊಗಳ್ತಾನೆ ಇರುತ್ತೆ. ಎಷ್ಟು ಹೊತ್ತಾದರೂ ಅದು ಬೊಗಳೋದನ್ನೇ ನಿಲ್ಲಿಸೋದಿಲ್ಲ. ಇದು ಸಾಲ್‌ಬೆಲ್ಲೋನ ಕಾದಂಬರಿಯ ನಾಯಿಯಾದ್ದರಿಂದ ನಾಯಿ ಹೀಗ್ಯಾಕೆ ಒಂದೇ ಸಮನೆ ಬೊಗಳ್ತಾನೇ ಇದೆ ಅನ್ನೋ ವಿವರಣೆ ಡೀನ್ ಆಲ್ಬರ್ಟ್ ಕೊಡಬೇಕಾಗುತ್ತೆ. ಕೊನೆಗೆ ಅವನು,

'ನಾಯಿ ವಿನಾ ಕಾರಣ ಬೊಗಳ್ತಾ ಇಲ್ಲ, ಅದು ತನ್ನ ಶ್ವಾನತ್ವದ ಅನುಭವಗಳ ಮಿತಿಯ ವಿರುದ್ಧ ಹೀಗೆ ಪ್ರತಿಭಟಿಸ್ತಾ ಇದೆ.... ಇಷ್ಟೇ ಅಲ್ಲ ಈ ಜಗತ್ತನ್ನು ಇನ್ನೊಂದಿಷ್ಟು ಮುಕ್ತವಾಗಿಡಿ ಅಂತಾ ಅದು ಹೇಳ್ತಾ ಇದೆ' ಅನ್ನೋ ತೀರ್ಮಾನಕ್ಕೆ ಬರ್ತಾನೆ!

ಈ ಜಗತ್ತನ್ನು ಇನ್ನೊಂದಿಷ್ಟು ಮುಕ್ತವಾಗಿಡಿ! ಈ ವಾಕ್ಯವನ್ನು ಓದಿದಾಗ ನನಗೆ ಕೂಡಲೇ ಒಂದು ಅಂಶ ಹೊಳೆಯಿತು. ನನಗೆ ಆ ಕ್ಷಣದಲ್ಲಿ ಅನಿಸಿದ್ದೇನೆಂದರೆ, 'ಇದು ಕಲೆಯ ನಿಜವಾದ ಉದ್ದೇಶ ಮತ್ತು ಅದರ ಸ್ವಭಾವ ಕುರಿತ ಬಹಳ ಒಳ್ಳೇ ವ್ಯಾಖ್ಯಾನ' ಅಂತ. ಕಲೆ ಶಾಬ್ದಿಕವಾಗಿರಲಿ, ದೃಶ್ಯ ರೂಪದಲ್ಲಿರಲಿ, ಸಂಗೀತವಾಗಿರಲಿ, ನಾಟಕವಾಗಿರಲಿ, ಸಿನಿಮಾ ಆಗಿರಲಿ- ಅವುಗಳಲ್ಲಿ ತೊಡಗಿಕೊಂಡಿರುವ ಕಲಾವಿದರು ಜೀವನದುದ್ದಕ್ಕೂ ಹೆಣಗಾಡೋದು ಇದೇ ಕೆಲಸಕ್ಕೆ. ಇದರಲ್ಲಿ ಅವರು ಎಷ್ಟರ ಮಟ್ಟಿಗೆ ಯಶಸ್ವಿಯಾಗ್ತಾರೆ ಅನ್ನೋದು ಅವರವರ ಪ್ರತಿಭೆಯ ಮೇಲೆ ನಿಂತಿದೆ. ದೊಡ್ಡ ಕಲಾವಿದರು ಈ ಜಗತ್ತನ್ನು ವಿಸ್ತರಿಸಿದ ದೊಡ್ಡ ಯಶಸ್ಸನ್ನು ಕಾಣ್ತಾರೆ; ಸ್ವಲ್ಪ ಕೆಳಮಟ್ಟದ ಕಲಾವಿದರಾದರೆ ಅದಕ್ಕೆ ತಕ್ಕ ಯಶಸ್ಸು ಕಾಣ್ತಾರೆ. ಹಾಗೆಯೇ ಕೆಟ್ಟ ಕಲಾವಿದನಾದರೆ ಆತನ ಪ್ರಯತ್ನಗಳೆಲ್ಲ ಸೋಲುತ್ತವೆ ಅಷ್ಟೆ. ಆದರೆ ಎಲ್ಲಾ ಕಲೆಗಳೂ ಈ ಜಗತ್ತಿನ ಎಲ್ಲೆಕಟ್ಟುಗಳನ್ನು ಇನ್ನೊಂದಿಷ್ಟು ವಿಸ್ತರಿಸಲು ಪ್ರಯತ್ನಿಸ್ತಾ ಇರುತ್ತವೆ. ಇದಕ್ಕಾಗಿ ಅವರು ತಾವು ಏನನ್ನು ಕಲ್ಪಿಸಿಕೊಳ್ಳೋದು ಸಾಧ್ಯ, ಏನನ್ನು ಚಿಂತಿಸೋದು ಸಾಧ್ಯ, ಏನನ್ನು ಅರಿತುಕೊಳ್ಳಲು ಸಾಧ್ಯ, ಏನನ್ನು ಭಾವಿಸಿಕೊಳ್ಳೋಕೆ ಸಾಧ್ಯ ಅನ್ನೋದನ್ನೆಲ್ಲ ಯೋಚಿಸಿ, ಕೊನೆಗೆ ಅದೇ ಆಗಿಬಿಡ್ತಾರೆ.

ಇದರ ಅರ್ಥ ಇಷ್ಟೆ. ನೀವು ತುಂಬಾ ಸುರಕ್ಷಿತವಾದ ಜಾಗದಲ್ಲಿದ್ದುಕೊಂಡು ಈ ಎಲ್ಲೆಕಟ್ಟುಗಳನ್ನು ಮೀರಲು ಸಾಧ್ಯವಿಲ್ಲ, ಮುಂಚೂಣಿಯಲ್ಲಿ ನಿಲ್ಲಬೇಕು.... ನಿಂತು ಅಲ್ಲೇ ಹೋರಾಡಬೇಕು. ಹಾಗೆಂದ ಮಾತ್ರಕ್ಕೆ ಮಧ್ಯಮ ಮಾರ್ಗಗಳೇ ಇಲ್ಲ ಅಂತೇನಿಲ್ಲ. ಎಲ್ಲ ಬಗೆಯ ಕಲೆಗಳ ಜನಪ್ರಿಯ ರೂಪಗಳಲ್ಲೂ -ಅದು ಪುಸ್ತಕ, ಸಿನಿಮಾ ಯಾವುದೇ ಬಗೆಯ ಪ್ರದರ್ಶನವಿರಬಹುದು- ಇಂಥ ಸುರಕ್ಷಿತ ತಾಣಗಳು ಇದ್ದೇಇವೆ. ಈ ಜನಪ್ರಿಯ ರೂಪಗಳ ಉದ್ದೇಶ ಮನರಂಜನೆ ಮಾತ್ರ. ನನ್ನನ್ನೂ ಸೇರಿ ಕೆಲವೊಮ್ಮೆ ನಾವೆಲ್ಲರೂ ಮನೋರಂಜನೆಯನ್ನು ಬಿಟ್ಟು ಬೇರೇನನ್ನೂ ಇಷ್ಟಪಡೋದಿಲ್ಲ. ಅದು ಮೈನವಿರೇಳಿಸುವ ಸಿನಿಮಾ ಇರಬಹುದು, ಇಲ್ಲವೇ ಯಾವುದೋ ಸಂಗೀತ ಇರಬಹುದು. ಅವೆಲ್ಲ ನಮ್ಮನ್ನು ರಂಜಿಸಬೇಕು ಅಷ್ಟೇ ನಮಗೆ ಮುಖ್ಯವಾಗಿ ಬಿಡುತ್ತೆ. ಯಾವಾಗಲೂ ನಮಗೆ ಭರ್ಜರಿ ಊಟವನ್ನೇ ಮಾಡೋದು ಸಾಧ್ಯವಿಲ್ಲ, ಕೆಲವೊಮ್ಮೆ ಯಾವುದೋ ಒಂದು ಸಣ್ಣ ತಿಂಡಿಯೇ ತುಂಬಾ ತೃಪ್ತಿ ಕೊಟ್ಟುಬಿಡುತ್ತೆ, ಆದರೆ ನಿಜವಾದ ಕಲೆ ಅನ್ನೋದು ಭಾಷಿಕವಾಗಿ, ತಾಂತ್ರಿಕವಾಗಿ, ನೈತಿಕವಾಗಿಯೂ ಒಂದು ತುದಿಯನ್ನು ಮುಟ್ಟಲು ನೋಡ್ತಾ ಇರುತ್ತೆ.

ಆದರೆ ಹೀಗೆ ಎಲ್ಲೆಕಟ್ಟನ್ನು ಹಿಂದಕ್ಕೆ ತಳ್ಳೋದು ಅಥವಾ ಮೀರುವ ಕ್ರಿಯೆ, ಅದರಲ್ಲಿ ರಿಸ್ಕ್ ಇದ್ದೇಇರುತ್ತೆ. ಏಕೆಂದರೆ, ಎಲ್ಲೆಕಟ್ಟಿನ ಒಳಗೆ ಯಾವಾಗಲೂ ಅದರ ಕಾವಲುಗಾರರು ಇದ್ದೇ ಇರುತ್ತಾರೆ. ಇದರಲ್ಲಿ ಹಲವರು ತಾವಾಗಿಯೇ ಕೆಲಸ ಮಾಡ್ತಾ ಇರ್ತಾರೆ. ಇವರಿಗ್ಯಾರಿಗೂ ಎಲ್ಲೆಕಟ್ಟುಗಳು ಮತ್ತಷ್ಟು ವಿಸ್ತರಿಸೋದು ಬೇಕಾಗಿರೋಲ್ಲ. ಇವರು ಯಾವಾಗಲೂ ಕಲೆಯ ವಿಸ್ತಾರಕ್ಕೆ ವಿರುದ್ಧವಾಗಿಯೇ ಯೋಚಿಸ್ತಾ ಇರ್ತಾರೆ ಅನ್ನೋದು ವಾಸ್ತವ. ಇವರಿಗೆ ತಾವು ಮತ್ತಷ್ಟು, ಮಗದಷ್ಟು ಚಾಚಿಕೊಳ್ಳುವ ಆಸೆಯೇ ಇರೋದಿಲ್ಲ, ಬದಲಿಗೆ ತಾವು ಹೇಗೆ ಕುಬ್ಜರಾಗಲು, ಸಂಕುಚಿತರಾಗಲು ಸಾಧ್ಯ ಅನ್ನೋದನ್ನೇ ಯೋಚಿಸ್ತಾ ಇರ್ತಾರೆ. ಇವರಿಗೆ ಯಾವುದೇ ವಿಷಯದ ಮೇಲೆ ವಿಶಾಲ ದೃಷ್ಟಿಕೋನದ ಚರ್ಚೆ ಬೇಕಿಲ್ಲ,

ಈ ಶಕ್ತಿಗಳು ತುಂಬಾ ಬಲವುಳ್ಳವು. ಕಲಾವಿದನೊಬ್ಬನ ಪ್ರಯತ್ನಗಳನ್ನು ಹೇಗಾದರೂ ಮಾಡಿ ಸದ್ದಡಗಿಸಿ, ಹಿನ್ನಡೆ ಉಂಟುಮಾಡುವುದೇ ಇವುಗಳ ಕೆಲಸವಾಗಿರುತ್ತೆ. ಇಂಥಾ ಕೆಲಸಗಳಿಂದ ಕಲಾವಿದನ ಮೇಲೆ ತುಂಬಾ ಭಯಾನಕವಾದ ಪರಿಣಾಮಗಳಾಗುತ್ತೆ. ಆದರೆ ಕಲೆಯ ವಿಷಯದಲ್ಲಿ ನಾವು ಒಂದು ಸತ್ಯವನ್ನು ತಿಳ್ಕೋಬೇಕು. ಕಲಾವಿದ ಕ್ಷಣಿಕ; ಕಲೆ ಶಾಶ್ವತ. ಉದಾಹರಣೆಗಳನ್ನು ನೋಡಿ. ರಷ್ಯಾವನ್ನು ಆಳುತ್ತಿದ್ದ ಸ್ಟಾಲಿನ್‌ಗೆ ಖ್ಯಾತ ಕವಿ ಮ್ಯಾಂಡಲ್‌ಸ್ಟ್ಯಾಮ್‌ನನ್ನು ಕಂಡರೆ ಆಗ್ತಾ ಇರಲಿಲ್ಲ. ಹೀಗಾಗಿ ಸ್ಟಾಲಿನ್ ಆತನನ್ನು ಕೊಲ್ಲಿಸಿದ. ಆದರೆ ಮ್ಯಾಂಡಲ್‌ಸ್ಟ್ಯಾಮ್‌ನ ಕಾವ್ಯ ಇವತ್ತಿಗೂ ಜೀವಂತವಾಗಿದೆ. ಸಾಮ್ರಾಟನಾಗಿ ಆಳಿದ ಆಗಸ್ಟಸ್ ಕೂಡ ಹೀಗೆಯೇ ಮಾಡಿದ. ಅವನು ಹೆಸರಾಂತ ಕವಿ ಓವಿಡ್‌ಗೆ ದೇಶಭ್ರಷ್ಟತೆಯ ಶಿಕ್ಷೆ ವಿಧಿಸಿ, ಕಪ್ಪು ಸಮುದ್ರದ ಹತ್ತಿರ ಇರೋ ಟಾಮಿಸ್ ಪಟ್ಟಣಕ್ಕೆ ಅಟ್ಟಿದ. ಆದರೆ ಇವತ್ತಿಗೂ ಓವಿಡ್‌ನ ಕವಿತೆಗಳು ಅಜರಾಮರವಾಗಿವೆ. ಇನ್ನೊಬ್ಬ ಪ್ರಸಿದ್ಧ ಕವಿ ಲೋರ್ಕಾಗೆ ಕೂಡ ಇದೇ ದುರ್ಗತಿ ಬಂತು. ಫ್ರಾಂಕೋ ಫಲಾಂಗ್‌ನ ಸುತ್ತ ಠಳಾಯಿಸುತ್ತಿದ್ದ ಗೂಂಡಾಗಳು ಲೋರ್ಕಾನನ್ನು ಬರ್ಬರವಾಗಿ ಕೊಂದು ಹಾಕಿದರು. ಆದರೆ ಲೋರ್ಕಾನ ಕಾವ್ಯವೇನೂ ಸಾಯಲಿಲ್ಲ. ಇದರಿಂದೆಲ್ಲ ಒಂದು ಸಂಗತಿ ಸ್ಪಷ್ಟವಾಗುತ್ತೆ. ಇತಿಹಾಸ ಚಕ್ರದ ಒಂದು ಗಳಿಗೆಯಲ್ಲಿ ಹೀಗೆ ದಂಡನೆಗೆ ಒಳಗಾದ ಕಲೆ, ಅದೇ ಸಂದರ್ಭದಲ್ಲಿ ಭವಿಷ್ಯದ ತಲೆಮಾರುಗಳ ಅಸ್ತಿತ್ವವನ್ನೂ ಚೆನ್ನಾಗಿ ವ್ಯಾಖ್ಯಾನಿಸುತ್ತಿರುತ್ತೆ. ಇದಕ್ಕೆ ಉದಾಹರಣೆಯಾಗಿ ಚಿತ್ರಕಲೆಯಲ್ಲಿ ಬಂದ ಇಂಪ್ರೆಷನಿಸ್ಟ್ ಕಲಾವಿದರನ್ನು ನೋಡಬಹುದು. ಇಂಪ್ರೆಷನಿಸ್ಟ್ ಕಲಾವಿದರು ಮೊದಲಿಗೆ ಬಂದಾಗ ಎಲ್ಲರೂ ಅವರನ್ನು ನೋಡಿ ಆಡಿಕೊಂಡರು. ಯಾರು ಪರಿಪೂರ್ಣವಾಗಿ ಚಿತ್ರಿಸಲಾರದೆ ತಮ್ಮ ಕಲೆಯ ವಸ್ತುವಿನ ಬಗ್ಗೆ ಒಂದು ಅಪರಿಪೂರ್ಣ ಭಾವನೆ ಹುಟ್ಟಿಸುತ್ತಾರೋ ಅವರನ್ನು ಗೇಲಿ ಮಾಡಲೆಂದೇ 'ಇಂಪ್ರೆಷನಿಸಂ' ಎಂಬ ಪದವನ್ನು ಠಂಕಿಸಲಾಯಿತು. ೧೮೭೪ನೇ ಇಸವಿಯಲ್ಲಿ ಇಂಥದೊಂದು ಕಲಾಕೃತಿಯ ಬಗ್ಗೆ ಬಂದ ವಿಮರ್ಶೆಯಲ್ಲಿ, 'ಇಲ್ಲಿರುವ ವಾಲ್‌ಪೇಪರ್ ತನ್ನ ಮೂಲ ಅವಸ್ಥೆಯಲ್ಲೇ ಪರಿಪೂರ್ಣವಾಗಿದೆ. ಈ ಕಲೆಯಲ್ಲಿ ಹೇಳಿಕೊಳ್ಳುವಂಥದ್ದು ಏನೂ ಇಲ್ಲ....' ಎಂದು ಬರೆಯಲಾಗಿತ್ತು. ಆದರೆ, ಇದಾದ ಮೇಲೆ ನೂರು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ ಇಡೀ ಯೂರೋಪಿನ ಎಲ್ಲ ಕಡೆ ಇಂಪ್ರೆಷನಿಸಂ ಕಲೆಯೇ ಕೇಂದ್ರಬಿಂದುವಾಯಿತು. ಇಷ್ಟೇ ಅಲ್ಲ, ಬಹಳ ದೊಡ್ಡ ದೊಡ್ಡ ಮ್ಯೂಸಿಯಮ್ಮುಗಳಲ್ಲಿ ಇಂಪ್ರೆಷನಿಸ್ಟ್ ಕಲಾವಿದರ ಚಿತ್ರಗಳೇ ರಾರಾಜಿಸತೊಡಗಿದವು. ಪಾಲ್ ಸಿಮೋನ್ ಒಂದು ಕಡೆ ಹಾಡಿರುವಂತೆ, 'ಒಬ್ಬನ ಪಾಲಿನ ನೆಲವೇ ಇನ್ನೊಬ್ಬನ ಪಾಲಿನ ಅಟ್ಟಣಿಗೆ'. ಕಲೆಯಲ್ಲೂ ಯಾವುದೋ ಒಂದು ಕಾಲದವರು ತೀವ್ರವಾಗಿ ಖಂಡಿಸಿದ್ದನ್ನು, ಇನ್ನೊಂದು ಕಾಲದವರು ತುಂಬಾ ಪ್ರೀತಿಯಿಂದ ಅನುಭವಿಸ್ತಾರೆ.

ನಾನು ನನ್ನ ಜೀವನದಲ್ಲಿ ಸ್ಫೂರ್ತಿಯನ್ನು ಪಡೆದಿರೋದು ನಾನು ಹುಟ್ಟಿದ ಉದಾರವಾದಿ ಮತ್ತು ಮುಕ್ತ ಮನಸ್ಸಿನ ಕುಟುಂಬದಿಂದ. ಇದು ಅನೇಕ ಸಂಸ್ಕೃತಿಗಳು ಒಟ್ಟಾಗಿದ್ದ ಮತ್ತು ಉತ್ತೇಜನಕಾರಿಯಾಗಿ ಬೆಳೆಯುತ್ತಿದ್ದ ಸ್ವಾತಂತ್ರ್ಯೋತ್ತರ ಭಾರತದ ಕುಟುಂಬವಾಗಿತ್ತು. ನನ್ನ ಆಲೋಚನಾ ಕ್ರಮವನ್ನು ರೂಪಿಸುವಲ್ಲಿ ನಮ್ಮ ಕುಟುಂಬ ದೊಡ್ಡ ಪಾತ್ರವನ್ನೇ ನಿರ್ವಹಿಸಿದೆ. ನಮ್ಮ ತಂದೆಯ ಕಡೆಯಿಂದ ಹೇಳುವುದಾದರೆ, ಅನೇಕ ತಲೆಮಾರುಗಳ ಪೂರ್ವಜರು ಬಾಳಿ ಬದುಕಿದ್ದೆಲ್ಲ ಹಳೆ ದೆಹಲಿಯ ಪ್ರಸಿದ್ಧ ಬಲ್ಲಿಮಾರನ್ ಮೊಹಲ್ಲಾದಲ್ಲಿ. ಮಿರ್ಜಾ ಗಾಲಿಬ್ ಇದ್ದದ್ದು ಇದೇ ಮೊಹಲ್ಲಾದಲ್ಲೇ. ನಮ್ಮ ತಂದೆ ಕೂಡ ಗಾಲಿಬ್‌ನ ಕಾವ್ಯವನ್ನು ತಮ್ಮ ತಲೆಯಲ್ಲಿ ತುಂಬಿಕೊಂಡೇ ಬೆಳೆದರು. ನಮ್ಮ ವಂಶದ ಹೆಸರು 'ರಶ್ದಿ' ಅಲ್ಲ. ನಮ್ಮ ತಂದೆಯ ತಂದೆ ಹೆಸರು ಖ್ವಾಜಾ ಮಹಮದ್ ದಿನ್ ಖಲೀಕಿ ದೆಹ್ಲವಿ ಅಂತ. ನನ್ನ ಹೆಸರಿಗೆ ರಶ್ದಿ ಅಂತ ಸರಳೀಕರಿಸಿದ್ದು ನಮ್ಮ ತಂದೆ. ಅವರಿಗೆ ಹೆಸರಾಂತ ಪುಸ್ತಕವಾದ 'ತಹಾಫತ್-

ಅಲ್-ತಹಾಫತ್' ಅನ್ನು ಬರೆದ ಮುಸ್ಲಿಂ ತತ್ವಜ್ಞಾನಿ ಇಬಿನ್ ರಶ್ದ್‌ನನ್ನು ಕಂಡರೆ ತುಂಬಾ ಮೆಚ್ಚುಗೆ. ಅವನು ತನ್ನ ಪುಸ್ತಕದಲ್ಲಿ ಘಜಲಿ ಎಂಬುವರು ಪ್ರತಿಪಾದಿಸುತ್ತಿದ್ದ ಕಟ್ಟರ್ ಪಂಥೀಯ ತತ್ವಜ್ಞಾನವನ್ನು ತೀವ್ರವಾಗಿ ಖಂಡಿಸಿದ್ದಾನೆ. ಈ ಘಜಲಿ ಅರಿಸ್ಟಾಟಲ್ ಮತ್ತು ಇಬಿನ್ ಸೀನಾ ಮುಂತಾದವರು ಹೇಳುತ್ತಿರುವ ತತ್ವಜ್ಞಾನವೆಲ್ಲ ಇಸ್ಲಾಂ ಧರ್ಮಕ್ಕೆ ವಿರುದ್ಧ ಎಂದು ಪ್ರತಿಪಾದಿಸಿದ. ಇಬಿನ್ ರಶ್ದ್ ಇದನ್ನೆಲ್ಲ ಖಂಡಿಸಿ, ಮನುಷ್ಯ ಚಿಂತನೆಯ ಘನತೆಯನ್ನು ಎತ್ತಿಹಿಡಿದ. ಅಂದರೆ ಆತ ಕಡು ಧಾರ್ಮಿಕತೆಯನ್ನು ನಿರಾಕರಿಸಿ, ಮುಕ್ತ ಸ್ಥಿತಿಯನ್ನು ಎತ್ತಿಹಿಡಿದ. ಈ ಪ್ರಖರ ವಾದ ಇವತ್ತಿಗೂ ನಡೀತಾನೇ ಇದೆ.

ಇದನ್ನೇ ಬೇರೆ ಶಬ್ದಗಳಲ್ಲಿ ಹೇಳೋದಾದರೆ, ನಾನು ಹುಟ್ಟಿದ್ದೇ ವಾದ ಮತ್ತು ಚರ್ಚೆಗಳಲ್ಲಿ ನಂಬಿಕೆ ಇದ್ದ ಕುಟುಂಬದಲ್ಲಿ. ಇಂಥ ಕುಟುಂಬದಲ್ಲಿ ಹುಟ್ಟಿದ ನಾನು, ಯಾವುದೇ ಒಂದು ವಿಚಾರ ಕುರಿತು ಅಸಮ್ಮತಿಯೇ ಮುಕ್ತ ಸಮಾಜದ ಸಾಕ್ಷಿ ಅನ್ನೋ ನಂಬಿಕೆಯಲ್ಲಿ ಬೆಳೆದೆ. ನಾನು ಈಗಾಗಲೇ ಹೇಳಿರುವ ಒಂದು ಮಾತನ್ನು ಈಗ ಮತ್ತೆ ಇಲ್ಲಿ ಹೇಳಲು ಇಷ್ಟಪಡ್ತೀನಿ. ಚಿಂತನೆಯ ಸ್ವಾತಂತ್ರ್ಯ ಅನ್ನೋದು ಚಹಾ ಕೂಟವಲ್ಲ. ಎಲ್ಲರೂ ಸುಮ್ಮನೆ ಅತಿಯಾದ ವಿನಯದಿಂದ ಕೂತುಕೊಂಡು, ಬಹಳ ಜಾಣತನದಿಂದ ಬೆಣ್ಣೆಯಿಂದ ಕೂದಲು ತೆಗೆದಂತೆ ಹರಟೆ ಹೊಡೆಯೋದಲ್ಲ. ನಿಜವಾದ ಬೌದ್ಧಿಕ ಸ್ವಾತಂತ್ರ್ಯವೆಂದರೆ ಅದೊಂದು ಸಾಹಸಮಯವಾದ ವಿದ್ಯಮಾನ. ಕಲಾವಿದರಿಗೆ ಬೇಕಾದ ಕಲಾತ್ಮಕ ಸ್ವಾತಂತ್ರ್ಯ ಬರೋದು ಕೂಡ ಇಂಥ ನಿಜವಾದ ಬೌದ್ಧಿಕ ಸ್ವಾತಂತ್ರ್ಯದಿಂದಲೇ. ದಿಟ್ಟವಾಗಿ ಅಸಮ್ಮತಿಯನ್ನು ವ್ಯಕ್ತಪಡಿಸೋದೇ ಇದರ ಪ್ರಮುಖ ಲಕ್ಷಣ. ಮುಕ್ತವಾದ ಸಮಾಜವು ಇಂಥ ಚರ್ಚೆಗಳಿಗೆಲ್ಲ ಬೇಕಾದ ವೇದಿಕೆಗಳನ್ನು ಸೃಷ್ಟಿಸುತ್ತದೆ. ಅಷ್ಟೇ ಅಲ್ಲ ಆ ವಾಗ್ವಾದಗಳಲ್ಲಿ ಪಾಲ್ಗೊಂಡಿರುವ ಎಲ್ಲರ ಹಕ್ಕುಗಳನ್ನೂ ಅದು ರಕ್ಷಿಸುತ್ತದೆ. ಎಲ್ಲ ಬಗೆಯ ಸ್ಫೂರ್ತಿ ಮತ್ತು ಸವಾಲುಗಳಿಗೂ ಜಾಗವಿದೆ; ಜತೆಗೆ ಅಲ್ಲಿ ಸಮ್ಮತಿಗೂ ಜಾಗವಿರುತ್ತದೆ; ನಿರಾಕರಣೆಗೂ ಜಾಗವಿರುತ್ತದೆ.

ನಮ್ಮ ಅಜ್ಜ-ಅಂದರೆ ತಾಯಿಯ ತಂದೆ- ಡಾ. ಅತಾವುಲ್ಲಾ ಬಟ್ ಕೂಡ ನನಗೆ ಇದನ್ನೆಲ್ಲ ತಮ್ಮ ಧಾರ್ಮಿಕ ದೃಷ್ಟಿಕೋನದಿಂದ ಕಲಿಸಿದರು. ನನ್ನ ಈ ಅಜ್ಜ ನಮ್ಮ ತಂದೆಯಂತಲ್ಲ. ಅವರಿಗೆ ದೇವರು-ಧರ್ಮ ಎಂದರೆ ಶ್ರದ್ಧೆ ಜಾಸ್ತಿ. ತಮ್ಮ ಇಡೀ ಬದುಕಿನುದ್ದಕ್ಕೂ ಪ್ರತಿದಿನವೂ ಐದು ಸಲ ನಮಾಜು ಸಲ್ಲಿಸುತ್ತಿದ್ದ ಅವರು, ಮೆಕ್ಕಾಗೆ ಯಾತ್ರೆ ಕೂಡ ಹೋಗಿಬಂದಿದ್ದರು. ಅವರ ವ್ಯಕ್ತಿತ್ವದಲ್ಲಿ ಕೋಮಲತೆ, ಸಹಿಷ್ಣುತೆ ಮತ್ತು ತಾಳ್ಮೆ ಎಲ್ಲಾ ಇತ್ತು. ಇಂಥಾ ಅಜ್ಜ ತಮ್ಮ ಮೊಮ್ಮಕ್ಕಳೆಲ್ಲ ಅಗಾಧವಾಗಿ ಬೆಳೆಯಬೇಕೆಂದು ಬಯಸಿದ್ದರು. ಅವರ ಸಮ್ಮುಖದಲ್ಲಿ ನಾವು ಮೊಕ್ತಾ ಕೂತುಕೊಂಡು ಮನಸ್ಸಿಗೆ ಬಂದಿದ್ದನ್ನೆಲ್ಲ ಮಾತನಾಡಬಹುದಾಗಿತ್ತು. ಚಿಕ್ಕ ಹುಡುಗನೊಬ್ಬ ಅವರ ಹತ್ತಿರ ಹೋಗಿ, 'ಬಾಬಾಜಾನ್, ನನಗೆ ದೇವರ ಮೇಲೆ ನಂಬಿಕೆ ಇಲ್ಲ' ಎಂದು ಹೇಳಬಹುದಿತ್ತು. ಈ ಮಾತನ್ನು ಕೇಳಿಸಿಕೊಳ್ಳುತ್ತಿದ್ದ ನಮ್ಮ ಅಜ್ಜ, 'ಆಹಾ, ಹಾಗೇನು? ಬಾ ಇಲ್ಲಿ, ನನ್ನ ಪಕ್ಕ ಕೂತುಕೊಂಡು ನೀನು ಅದ್ಹೇಗೆ ಇಂಥ ಮೂರ್ಖ ನಿರ್ಧಾರಕ್ಕೆ ಬಂದೆ ಅನ್ನೋದನ್ನ ತಿಳಿಸು' ಎನ್ನುತ್ತಿದ್ದರು. ಅವರ ಧ್ವನಿ ಜೋರಾಗಿರುತ್ತಿತ್ತು ಅನ್ನೋದು ನಿಜ. ಆದರೆ ಅದರ ಜತೆಯಲ್ಲೇ ಅವರ ಕಣ್ಣುಗಳಲ್ಲಿ ಮಿಂಚೂ ಇರ್‍ತಾ ಇತ್ತು. ಇಲ್ಲಿ ಸಲಿಗೆ ಅಂದ್ರೆ ತೆರೆದ ಮನಸ್ಸು ಅಂತಾ ಅರ್ಥ. ಹಾಗೆಯೇ ಈ ಜಗತ್ತನ್ನು ಇನ್ನಷ್ಟು ಮುಕ್ತವಾಗಿಡಲಿಕ್ಕೆ ನಾವು ಪ್ರಯತ್ನಿಸ್ತಾ ಇದ್ವಿ. ಮುಕ್ತ ಸಮಾಜ ಎಂದರೆ ಏನು ಅನ್ನೋದೆಲ್ಲ ಆಗಿನ್ನೂ ನಮಗೆ ಗೊತ್ತಿರ್‍ಲಿಲ್ಲ.

ನಮ್ಮದು ಆಧುನಿಕ ಮುಸ್ಲಿಂ ಕುಟುಂಬ. ಅದಕ್ಕಿಂತ ಹೆಚ್ಚಾಗಿ ನಮ್ಮದು ಭಾರತೀಯ ಮನೆತನವಾಗಿತ್ತು. ನಾನು ಹುಟ್ಟಿದ್ದು ಬಾಂಬೆಯಲ್ಲಿ. ಈ ವಿಷಯ ಕೆಲವರಿಗೆ ಗೊತ್ತಿದೆ. ನಾನು ಹುಟ್ಟಿದ್ದು

ನಮಗೆ ಸ್ವಾತಂತ್ರ್ಯ ಬರುವ ಎಂಟು ವಾರಗಳಿಗೆ ಮೊದಲು. ಆಗ ನಮ್ಮ ತಂದೆ-ತಾಯಿ ಪಾಕಿಸ್ತಾನಕ್ಕೆ ಹೋಗುವುದನ್ನು ಇಷ್ಟಪಡಲಿಲ್ಲ. ಅವರಿಗೆ ತಮ್ಮನ್ನು ತಾವು 'ಮುಸ್ಲಿಂ' ಎಂದು ಗುರುತಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ 'ಭಾರತೀಯ' ಎಂಬುದನ್ನು ಅವರು ಒಪ್ಪಿದ್ದರು. ಇಂಥಾ ನಮ್ಮ ತಂದೆ-ತಾಯಿ ತುಂಬಾ ನೇರ ಸ್ವಭಾವದವರು. ಆಗ ಬಾಂಬೆಯಲ್ಲಿ ಕೋಮುಭಾವನೆ ಕೂಡ ದಟ್ಟವಾಗಿತ್ತು. ಆದರೆ, ನಾವು ಅದಕ್ಕೆ ವಿರುದ್ಧವಾದ ಉದಾರ ಜೀವನಕ್ರಮದಿಂದ ಬದುಕಿದೆವು. ನಮ್ಮ ತಂದೆಗೆ ತುಂಬಾ ನಿಕಟರಾಗಿದ್ದ ಇಬ್ಬರು ಗೆಳೆಯರಿದ್ದರು. ಅದರಲ್ಲಿ ಒಬ್ಬರು ಹಿಂದೂ; ಇನ್ನೊಬ್ಬರು ಯಹೂದಿ. ಇನ್ನು ನನ್ನ ಬಾಲ್ಯದ ಗೆಳೆಯರ ಗುಂಪಿನಲ್ಲಿ ಉತ್ತರ ಭಾರತ ಹಾಗೂ ದಕ್ಷಿಣ ಭಾರತದ ಹುಡುಗರೂ ಇದ್ದರು. ಅವರೆಲ್ಲರ ಮಾತೃಭಾಷೆ ಉರ್ದುವಿನಿಂದ ಇಂಗ್ಲಿಷಿನವರೆಗೆ, ತಮಿಳಿನಿಂದ ಹಿಡಿದು ಗುಜರಾತಿಯವರೆಗೆ, ಮರಾಠಿಯಿಂದ ಹಿಡಿದು ಮಲಯಾಳಂವರೆಗೆ ಇತ್ತು. ಆಗಲೂ ಬಾಂಬೆಯನ್ನು ಬಾಮ್ ಬಹಿಯಾ, ಬಾಂಬೈ, ಮುಂಬೈ ಎಂದೆಲ್ಲ ಕರೆಯುತ್ತಿದ್ದರು. ಅದು ಈಗಲೂ ಹಾಗೆಯೇ ಇದೆ. ಇಂಥ ಬಾಂಬೆ ಯಾವತ್ತೂ ಅದು ಯಾವುದೋ ಒಂದು ನಿರ್ದಿಷ್ಟ ಭಾಷೆಯ, ಭಾರತೀಯತೆಯ ಯಾವುದೋ ಒಂದು ನಿರ್ದಿಷ್ಟ ಬಗೆಯನ್ನು ಮಾತ್ರ ಒಪ್ಪಿಕೊಳ್ಳಲಿಲ್ಲ. ಪ್ರಪಂಚದ ಎಲ್ಲಾ ಮಹಾನಗರಗಳಂತೆಯೇ ಬಾಂಬೆ ಕೂಡ ಎಲ್ಲರನ್ನೂ ತನ್ನ ಕಡೆಗೆ ಸೆಳೆಯುತ್ತದೆ. ಕೊನೆಗೆ ಹೀಗೆ ಬಂದವರೆಲ್ಲ 'ಬಾಂಬೆತನ'ವನ್ನು ಮೈಗೂಡಿಸಿಕೊಂಡು ಕೊನೆಗೆ ಎಲ್ಲರೂ ಜತೆಗೂಡಿ ಬಾಂಬೆಯ ಗುಣವನ್ನು ವ್ಯಾಖ್ಯಾನಿಸ್ತಾರೆ. ಪ್ರಪಂಚದ ಮಹಾನ್ ನಗರಗಳೆಲ್ಲ ಮುಕ್ತವಾಗಿರುವಂಥ ನಗರಗಳೇ. ಇಂಥ ನಗರಗಳನ್ನು ಯಾವುದೋ ಮೂಲೆಗೆ ತಳ್ಳಲು ಪ್ರಯತ್ನಿಸುವುದರಿಂದ ಅಂಥಾ ನಗರಗಳ ಮಹಾನತೆ ನಾಶವಾಗುತ್ತವೆ.

ಅನೇಕ ದೇಶ ಮತ್ತು ಸಂಸ್ಕೃತಿಗಳನ್ನೆಲ್ಲ ನೋಡಿದೆ. ನನ್ನ ಬದುಕು ನನ್ನನ್ನು ಹಾಗೆ ಎಲ್ಲೆಲ್ಲಿಗೋ ಕರಕೊಂಡು ಹೋಯ್ತು. ನಾನು ನನ್ನ ಕೃತಿಗಳಲ್ಲಿ ಸಾಂಸ್ಕೃತಿಕ ಮುಕ್ತತೆಯನ್ನೇ ಎತ್ತಿಹಿಡಿಯಲು ಪ್ರಯತ್ನಿಸಿರುವೆ. ನಾನು ಇದರ ಬಗ್ಗೆ ಮಾತನಾಡಲೆಂದೇ ಇಂದು ಇಲ್ಲಿಗೆ ಬಂದಿದ್ದೀನಿ. ನನಗೆ ಬಹಳ ಮುಖ್ಯವಾದ ಸಂಗತಿ– ಇದು ನನಗೆ ಸಿಕ್ಕಿದ್ದು ಭಾರತದಿಂದ, ಭಾರತೀಯರಿಂದ. ನಮ್ಮ ಗತಕಾಲದ -ಪುರಾತನ ಭಾರತದಲ್ಲಿ ಇದರ ಬೇರುಗಳಿವೆ. ಇದನ್ನು ಭಾರತದ ಎಲ್ಲಾ ಸಮುದಾಯಗಳೂ ಬಹಳ ಗೌರವದಿಂದ ಕಾಣುತ್ತವೆ. ಇದೇನೂ ಭಾರತಕ್ಕೆ ಯಾರೋ ಹೊರಗಿನವರು ಕೊಟ್ಟದ್ದಲ್ಲ. ಇದು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗ. ಇದನ್ನು ನಾವು ಉಳಿಸಿಕೊಳ್ಳಲೇಬೇಕು. ಇಲ್ಲದಿದ್ರೆ, ನಾವು ನಮ್ಮತನದಲ್ಲಿನ ಬಹಳ ಮುಖ್ಯವಾದ, ತುಂಬಾ ಮೌಲಿಕವಾದ ಗುಣವನ್ನ ಕಳಕೊಳ್ತೀವಿ.

ಭಾರತೀಯ ಸಂಸ್ಕೃತಿಯನ್ನು ಬಹಳ ವಿಶಾಲವಾಗಿ ವ್ಯಾಖ್ಯಾನಿಸಲಾಗಿದೆ. ಇವತ್ತು ಈ ಸಂಸ್ಕೃತಿಯನ್ನು ನಮ್ಮ ಗಡಿಯಾಚೆ ಜಗತ್ತಿನ ಎಲ್ಲಾ ಕಡೆ ಬಹಳ ದೊಡ್ಡದಾಗಿ, ವೈಭವದಿಂದ ಆಚರಿಸಲಾಗುತ್ತಿದೆ. ಪ್ರಾಯಶಃ ಭಾರತೀಯ ಸಂಸ್ಕೃತಿಗೆ ಇಷ್ಟೊಂದು ದೊಡ್ಡ ಮನ್ನಣೆ ಯಾವತ್ತೂ ಸಿಕ್ಕಿರಲಿಲ್ಲ. ಇವತ್ತು ಯಾರಾದರೂ ಏನನ್ನೇ ನೋಡಲಿ, ಅದರಲ್ಲಿ ಒಂದಾದರೂ ಭಾರತೀಯ ಅಂಶವನ್ನು ಎಲ್ಲರೂ ಸೇರಿ ಆಸ್ವಾದಿಸುತ್ತಿರೋದು ಕಣ್ಣಿಗೆ ಬೀಳುತ್ತೆ. ನಾನು ಇಲ್ಲಿಗೆ ಜಾರ್ಜಿಯಾದಲ್ಲಿರುವ ಎಮೋರಿ ಯೂನಿವರ್ಸಿಟಿಯಿಂದ ಬಂದೆ. ಅಲ್ಲೊಂದು ಮ್ಯೂಸಿಯಂ ಇದೆ. ಅದರ ಹೆಸರು ಕಾರ್ಲೋಸ್ ಮ್ಯೂಸಿಯಂ ಅಂತ. ಅಲ್ಲಿ ಭಾರತದ ಪುರಾತನ ಪಡಪೆ, ವಸ್ತುಗಳನ್ನು ಅಚ್ಚುಕಟ್ಟಾಗಿ ಜೋಡಿಸಿಟ್ಟು . ಪ್ರದರ್ಶನಕ್ಕಿಟ್ಟಿದ್ದಾರೆ. ಇನ್ನು ಪಾಶ್ಚಾತ್ಯ ದೇಶಗಳ ವಸ್ತ್ರವಿನ್ಯಾಸಕಾರರನ್ನೇ ತೆಗೆದುಕೊಳ್ಳಿ. ಅವರೆಲ್ಲ ಇವತ್ತು ಭಾರತದ ವಸ್ತ್ರ ಪರಂಪರೆಯ ಕಡೆಗೆ, ಬಣ್ಣಗಳ ಬಗೆಗೆ, ಇಲ್ಲಿರುವ ನೇಯ್ಗೆಯವರು ಹೊಂದಿರುವ

ಅಸಾಧಾರಣ ಕೌಶಲ್ಯಗಳ ಕಡೆಗೆ ತಿರುಗುತ್ತಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಅವರ ಸಂಗೀತಕ್ಕೆ ಭಾರತದಲ್ಲಿ ಇರುವಷ್ಟೇ ಬೇಡಿಕೆ ಹಾಲಿವುಡ್‌ನಲ್ಲೂ ಇದೆ. ಭಾರತದ ನಟ-ನಟಿಯರಾದ ಅನಿಲ್ ಕಪೂರ್, ಐಶ್ವರ್ಯಾ ರೈ ಮುಂತಾದವರೆಲ್ಲ ಬಾಲಿವುಡ್ ಜಗತ್ತಿನಾಚೆಯೂ ನೆಲೆಯೂರುತ್ತಿದ್ದಾರೆ. ನಾವೀಗ ನ್ಯೂಯಾರ್ಕ್‌ನ ಮಲ್ಟಿಪ್ಲೆಕ್ಸ್‌ಗಳಲ್ಲಿ ಕೂತು ಭಾರತದ ಹೊಸಹೊಸ ಸಿನಿಮಾಗಳನ್ನೆಲ್ಲ ನೋಡಬಹುದು. ಹಾಗೆಯೇ 'ತ್ರೀ ಈಡಿಯಟ್ಸ್' ಸಿನಿಮಾವನ್ನು ಅಲ್ಲಿನ ಫಾರ್ಟಿ ಸೆಕೆಂಡ್ ಸ್ಟ್ರೀಟ್‌ನಲ್ಲಿ ನೋಡಬಹುದು.

ಭಾರತೀಯ ಸಾಹಿತ್ಯದ ಬಗ್ಗೆ ಸಂಕ್ಷಿಪ್ತವಾಗಿ ಮಾತಾಡೋದು ಅಂದ್ರೆ ನನಗೆ ಯಾವಾಗಲೂ ಹೆಮ್ಮೆಯ ವಿಚಾರ. ಕಳೆದ ಮೂವತ್ತು-ಮೂವತ್ತೈದು ವರ್ಷಗಳಲ್ಲಿ ಭಾರತೀಯ ಲೇಖಕರ ಪ್ರವಾಹ ವಿಶ್ವ ಸಾಹಿತ್ಯ ಲೋಕದಲ್ಲಿ ತನ್ನದೇ ಛಾಪು ಮೂಡಿಸಿದೆ. ಈ ಅಚ್ಚರಿಯ ಬೆಳವಣಿಗೆಯನ್ನು ನಾವು ೧೯೫೦, ೬೦ ಮತ್ತು ೭೦ರ ದಶಕದಲ್ಲಿ ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಕಂಡುಬಂದ ಸಾಹಿತ್ಯದ ಉಬ್ಬರಕ್ಕೆ ಮಾತ್ರ ಹೋಲಿಸಬಹುದು. ಇದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಇದನ್ನು ಹೋಲಿಸೋದು ಸಾಧ್ಯವೇ ಇಲ್ಲ. ನನ್ನ ಅನುಭವವನ್ನೇ ಹೇಳೋದಾದ್ರೆ, ನನ್ನ 'ಮಿಡ್‌ನೈಟ್ಸ್ ಚಿಲ್ಡ್ರನ್' ಮತ್ತು ಅದರ ನಂತರ ಬಂದ ಕೃತಿಗಳಿಗೆ ಭಾರತದಲ್ಲಿ ತುಂಬು ಹೃದಯದ ಸ್ವಾಗತವೇ ಸಿಕ್ಕಿತು. ಭಾರತದಲ್ಲಿ ನನ್ನ ಸಾಹಿತ್ಯ ಕೃತಿಗಳಿಗೆ ಸಿಕ್ಕಿದ ಈ ಆದರ, ನನಗೆ ಸಿಕ್ಕಿರುವ ಬುಕರ್ ಪ್ರಶಸ್ತಿಗಳಿಗಿಂತ ದೊಡ್ಡದು. ನನ್ನ ಕೃತಿಗಳನ್ನು ಬಿಟ್ಟು ಹೇಳೋದಾದ್ರೆ ಅರುಂಧತಿ ರಾಯ್ ಅವರಿಂದ ಹಿಡಿದು ಅರವಿಂದ ಅಡಿಗರವರೆಗೆ, ವಿಕ್ರಮ್ ಸೇಥ್ ಅವರಿಂದ ಹಿಡಿದು ವಿಕ್ರಮಚಂದ್ರ ಅವರವರೆಗೆ, ಅಮಿತಾವ್ ಘೋಷ್ ಅವರಿಂದ ಹಿಡಿದು ಅಮಿತ್ ಚೌಧುರಿ ಅವರವರೆಗೆ, ರಾಣಾ ದಾಸ್‌ಗುಪ್ತ ಅವರಿಂದ ಹಿಡಿದು ಅಲ್ತಾಫ್ ಟೈರ್‌ವಾಲಾ ಅವರವರೆಗಿನ ಕಥನಗಳು ಜಗತ್ತಿನ ಮಾನವ ಕಥನದಲ್ಲಿ, ವಿಶ್ವ ಸಾಹಿತ್ಯದಲ್ಲಿ ಜಾಗ ಪಡೆದಿವೆ.

ಇತ್ತೀಚಿನ ಕೆಲವರ್ಷಗಳಿಂದ ದೃಶ್ಯಕಲೆಯಲ್ಲೂ ಅಂತಾರಾಷ್ಟ್ರೀಯ ಕಲಾ ಮಾರುಕಟ್ಟೆಯಲ್ಲಿ ಭಾರತದ ಕಲಾವಿದರು ಮುಂದಿದ್ದಾರೆ. ಸದ್ಯಕ್ಕೆ ಸಮಕಾಲೀನ ಭಾರತೀಯ ಕಲೆಯು ಚೀನಾದ ಸಮಕಾಲೀನ ಕಲೆಯ ಜೊತೆಗೆ ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತಾ, ಯಾವ ಆಕರ್ಷಣೆಯೂ ಇರದ 'ಉದ್ರೇಕ'ದ ತಂತ್ರವನ್ನು ಅನುಸರಿಸಬೇಕಾಗಿದೆ. ಭಾರತದ ಕಲಾವಿದರು ಮಾಡಿರುವ ಸಾಧನೆ ಹಣಕ್ಕಿಂತ ಬಹಳ ದೊಡ್ಡದು. ಭಾರತೀಯ ಕಲಾವಿದರು ಆಧುನಿಕ ದೃಶ್ಯಕಲಾ ಪ್ರಪಂಚದಲ್ಲಿ ತಮ್ಮದೇ ಆದ ಒಂದು ದೃಶ್ಯಪಟಲವನ್ನು ಸೃಷ್ಟಿಸಿಕೊಂಡಿದ್ದಾರೆ. ಇದು ಪಾಶ್ಚಾತ್ಯ ಜಗತ್ತಿನಿಂದ ಯಥಾವತ್ತಾಗಿ ಎರವಲು ಪಡೆದಿದ್ದೂ ಅಲ್ಲ ; ಹಾಗೆಯೇ ಇದು ಭಾರತೀಯ ದೃಶ್ಯಕಲಾ ಪರಂಪರೆಗೆ ಕೂಡ ಅತಿಯಾಗಿ ಜೋತು ಬಿದ್ದಿಲ್ಲ. ಭೂಪೇನ್ ಕಾಕರ್, ಅರ್ಪಿತಾ ಸಿಂಗ್, ಕಿಶನ್ ಖನ್ನಾ, ನವಜೋತ್ ಅಲ್ತಾಫ್, ಪುಷ್ಪಮಾಲಾ ಮತ್ತು ಇನ್ನೂ ಅನೇಕ ಕಲಾವಿದರ ಕಲಾಕೃತಿಗಳಲ್ಲಿ ಅಸಾಧಾರಣವಾದ ಸ್ವೋಪಜ್ಞತೆ (ಒರಿಜಿನಾಲಿಟಿ) ಮತ್ತು ಶಕ್ತಿ ಇದೆ. ಇವರೆಲ್ಲರ ಕಲಾಕೃತಿಗಳಲ್ಲಿ ಮತ್ತು ಇವರೆಲ್ಲರಿಗಿಂತ ಇನ್ನೂ ಹೆಚ್ಚು ಸಮಕಾಲೀನರಾಗಿರುವ ಸುಬೋಧ್ ಗುಪ್ತ ಹಾಗೂ ಇವರಿಗಿಂತ ಹಿಂದಿನ ತಲೆಮಾರಿನವರಾದ ರಾಜಾ, ಸೂಜಾ, ಗ್ಯಾಂಡೆ, ಇದೇ ಸಾಲಿನಲ್ಲಿ ಮುಖ್ಯ ಕಲಾವಿದ ಮಖಬೂಲ್ ಫಿದಾ ಹುಸೇನ್ ಕೂಡಾ ಬರುತ್ತಾರೆ. ಅವರ ಕಲಾಕೃತಿಗಳಲ್ಲೆಲ್ಲ ಭಾರತೀಯ ಮತ್ತು ಪಾಶ್ಚಾತ್ಯ ದೃಶ್ಯಕಲಾ ಸಂಪ್ರದಾಯಗಳ ನಡುವೆ ತುಂಬಾ ಸಂಕೀರ್ಣವಾದ ಸಂವಾದ ನಡೆಯುತ್ತಿದೆ. ಹೀಗೆ ಎಲ್ಲದಕ್ಕೂ ತೆರೆದುಕೊಳ್ಳೋದು ಒಂದು ಮತ್ತೊಂದರ ಗಡಿ ವಿಸ್ತರಿಸೋದು ಮುಕ್ತ ಸಮಾಜದ ಗುಣ. ಹೊಸದೆನ್ನಬಹುದಾದು ಹುಟ್ಟೋದು ಇಲ್ಲೇ!

ಹೀಗೆ ಭಾರತ ಅಂತಾರಾಷ್ಟ್ರೀಯ ಮಟ್ಟದಲ್ಲಿ ತುಂಬಾ ಗಮನಾರ್ಹವಾಗಿ ಬೆಳೆಯುತ್ತಿರುವುದಕ್ಕೆ ಸಮಾನಾಂತರವಾಗಿ ಭಾರತೀಯ ಸಂಸ್ಕೃತಿಯ ಬೆಳಗುವಿಕೆ ಎಲ್ಲಾ ಭಾರತೀಯರಿಗೂ ಹೆಮ್ಮೆ ಹುಟ್ಟಿಸುವಂಥ ವಿಚಾರ. ಆದರೆ ನಾನು ಹುಸೇನ್ ಬಗ್ಗೆ ಪ್ರಸ್ತಾಪಿಸುವಾಗ ಕೆಲವು ಕಹಿ ಸಂಗತಿಗಳನ್ನು ಅನಿವಾರ್ಯವಾಗಿ ಪ್ರಸ್ತಾಪಿಸಬೇಕು. ಭಾರತ ತನ್ನ ಮುಕ್ತ ಮನಸ್ಥಿತಿಯ ಸಂಸ್ಕೃತಿಯನ್ನು ಇತಿಹಾಸವನ್ನು ತಾನೇ ಮರೆಯುತ್ತಿದೆಯಾ? ಅಂಥದೊಂದು ಸಂಸ್ಕೃತಿಗೆ ತೆರೆ ಎಳೆಯುತ್ತಿದೆಯಾ? ಹೀಗೆ ಮಾಡುವ ಮೂಲಕ ಮುಕ್ತತೆಯ ನಂಬಿಕೆಯುಳ್ಳವರನ್ನು, ನಿರ್ಬಂಧಿಸುವವರ ವಾಚಾಳಿತನ ಸ್ಥಾಪಿತಗೊಳ್ಳುತ್ತಿದೆಯಾ?

ಹುಸೇನ್ ಅವರಿಗೆ ಸಂಬಂಧಿಸಿದ ವಿಚಾರಗಳನ್ನು ನಾನು ಸ್ಪಷ್ಟವಾಗಿ ಹೇಳಬೇಕು. ಹುಸೇನ್ ಗಡೀಪಾರಾಗಿದ್ದು, ಅವರ ಪ್ರೀತಿಯ ತಾಯ್ನಾಡಿನಲ್ಲೇ ಅವರ ಜೀವಕ್ಕೆ ಅಪಾಯ ಬಂದಿದ್ದು, ಅವರ ವಿರುದ್ಧ ಅಶ್ಲೀಲತೆಯ ಪ್ರಕರಣಗಳನ್ನು ದಾಖಲಿಸಿದ್ದು, ಸರಕಾರದ ದುರ್ಬಲ ಪ್ರತಿಕ್ರಿಯೆ. ಕೊನೆಗೆ ಅವರು ಖತಾರ್ ದೇಶದ ಪೌರತ್ವ ಪಡೆದುಕೊಳ್ಳಲು ಒಪ್ಪಿಕೊಂಡಿದ್ದು, ಅವರು ಭಾರತ ಪೌರತ್ವ ಕಳೆದುಕೊಂಡಿದ್ದು ಇವೆಲ್ಲವೂ ತುಂಬಾ ನಾಚಿಕೆಗೇಡಿನ ಸಂಗತಿಗಳು. ಹಾಗೆಯೇ ಹುಸೇನ್ ಅವರಿಗೆ ಇದರಿಂದೆಲ್ಲ ಬಂದ ದುರವಸ್ಥೆ ಇದೆಯಲ್ಲ, ಅದು ನಮ್ಮೆಲ್ಲರಿಗೂ ಅಗೌರವ ತರುವಂಥದ್ದು. ಇಂಥ ಹುಸೇನ್ ಈಗ ಯಾವುದೋ ಬೇರೆ ದೇಶದಲ್ಲಿ ಭಾರತದ ಕಲಾ ಪರಂಪರೆಯ ಆಸ್ತಿಯಾಗಬೇಕಾಗಿದ್ದ ಅವರ ಕಲಾಕೃತಿಗಳ ಮ್ಯೂಸಿಯಮ್ಮನ್ನು ಕಟ್ಟಲು ಹೊರಟಿದ್ದಾರೆ. ಅವುಗಳನ್ನು ಈ ದೇಶ ಕಳೆದುಕೊಳ್ಳುತ್ತೆ. ಇದು ದುರಂತದ ಇನ್ನೊಂದು ಮುಖ. ಇವೆಲ್ಲಕ್ಕಿಂತ ತುಂಬಾ ಅಸಹ್ಯ ಹುಟ್ಟಿಸುವ ವಿಚಾರವೆಂದರೆ, ಹುಸೇನ್ ವಿರುದ್ಧ ಬಳಸುತ್ತಿರುವ ಕೆಟ್ಟ ಭಾಷೆ. ಹುಸೇನ್ ಬಗ್ಗೆ ಇಂಟರ್‌ನೆಟ್‌ನಲ್ಲಿ ಬರುತ್ತಿರುವ ಟೀಕೆಗಳಲ್ಲಿ, ಸುದ್ದಿ ಮಾಧ್ಯಮಗಳ ವರದಿ/ ವಿಮರ್ಶೆಗಳಲ್ಲೆಲ್ಲ ಇಂಥ ಕೆಟ್ಟ ಭಾಷೆಯನ್ನು ನೋಡಬಹುದು. ಹುಸೇನ್ ವಿರುದ್ಧ ಇಂಥ ಕೀಳು ಭಾಷೆಯಂತೂ ಸುದ್ದಿ ಮಾಧ್ಯಮಗಳಲ್ಲಿ ಮೇಲಿಂದ ಮೇಲೆ ಕಾಣ್ತಾ ಇರುತ್ತೆ.

ಇಂಥ ಭಾಷೆಗೆ ನಿಜಕ್ಕೂ ಅಭಿರುಚಿ ಇಲ್ಲ. ನಾನು ಆ ಮಾತುಗಳನ್ನೆಲ್ಲ ಉಲ್ಲೇಖಿಸಲು ಹೋಗೋದಿಲ್ಲ. ವೃದ್ಧಾಪ್ಯದಲ್ಲಿರುವ ಹುಸೇನ್ ಅವರನ್ನ ಅಪಹಾಸ್ಯ ಮಾಡಲಾಗುತ್ತಿದೆ. ಕುಂಚವನ್ನು ಹಿಡಿದುಕೊಂಡರೆ ಸಾಕು, ತಮ್ಮ ಆತ್ಮದ ಆಳದಿಂದ ಕಲಾಕೃತಿಗಳನ್ನು ಅರಳಿಸುವ ಹುಸೇನ್ ಅವರ ವಿರುದ್ಧ ಹೊಲಸು ಅಶ್ಲೀಲತೆಯ ಆರೋಪ ಹೊರಿಸಲಾಗಿದೆ. ತಮ್ಮ ಜೀವಮಾನವನ್ನೆಲ್ಲ ಕಲೆಗೋಸ್ಕರ ತೇಯ್ದಂತಹ ಒಬ್ಬ ವ್ಯಕ್ತಿಯನ್ನು ಶುದ್ಧ ಅಪ್ರಯೋಜಕ ಎಂಬಂತೆ ಬಿಂಬಿಸುತ್ತಿದ್ದೇವೆ. ಅವರು ತಾವಾಗಿಯೇ ಹೇರಿಕೊಂಡ ಮೌನಕ್ಕೆ 'ಹೇಡಿತನ' ಎಂದು ಕರೆಯಲಾಗುತ್ತಿದೆ. ಅವರು ತಮ್ಮ ರಾಷ್ಟ್ರೀಯತೆಯನ್ನು ಬದಲಾಯಿಸಿಕೊಳ್ಳಲು ಹೊರಟಿರುವುದನ್ನು ಹಲವರು 'ಬಹಳ ಒಳ್ಳೆಯದಾಯ್ತು' ಎನ್ನುತ್ತಿದ್ದಾರೆ. ಇದು ಖಂಡಿತವಾಗಿಯೂ ನಾನು ಅಗಾಧವಾಗಿ ಪ್ರೀತಿಸುವಂತಹ ಭಾರತದಿಂದ ಬರುತ್ತಿರುವ ಮಾತುಗಳಲ್ಲ. ಈಗ ಮುಂಚೂಣಿಯಲ್ಲಿರುವ 'ಇನ್ನೊಂದು ಭಾರತ'ದಿಂದ ಕೇಳಿಸುತ್ತಿರುವ ಮಾತುಗಳು. ಇದು ಬಹಿರಂಗವಾಗಿಯೇ ಡಂಗುರ ಹೊಡೆದುಕೊಂಡು, ಸಿಕ್ಕಾಪಟ್ಟೆ ಹೆಮ್ಮೆಯಿಂದ ಬೀಗುತ್ತಿರುವ ಕೋಮುವಾದಿ ಭಾರತ! ಇಂಥ ಭಾರತ ದಿನದಿಂದ ದಿನಕ್ಕೆ ಶಕ್ತಿಶಾಲಿಯಾಗಿ ಕಾಣಿಸಿಕೊಳ್ಳುತ್ತಿರುವುದು ನಿಜಕ್ಕೂ ಕಳವಳಕಾರಿ ಸಂಗತಿ. ಇಲ್ಲಿಂದ ನಮ್ಮ ದಿನನಿತ್ಯದ ಬದುಕಿನ ತನಕ ದ್ವೇಷ ಹಬ್ಬುತ್ತಿರುವುದು ನಿಜಕ್ಕೂ ಕಳವಳದ ವಿಷಯ.

ಈ ಚರ್ಚೆಗೆ ಏನನ್ನಾದರೂ ಪೂರಕವಾಗಿ ಸೇರಿಸೋದಾದರೆ ಒಂದು ವಿಷಯ ಇದೆ. ಡೆನ್ಮಾರ್ಕಿನ ಪತ್ರಿಕೆಗಳಲ್ಲಿ ಬಂದ ಪ್ರವಾದಿ ಮಹಮದ್ ವ್ಯಂಗ್ಯಚಿತ್ರಗಳಿಂದಾಗಿ ಹುಟ್ಟಿಕೊಂಡ ವಿವಾದವನ್ನು ನಾವು ಮತ್ತೆ ನೆನಪು ಮಾಡಿಕೊಳ್ಳೋದಾದರೆ, ಇಲ್ಲಿ ಎರಡು ಬೇರೆಬೇರೆ ವಿಷಯಗಳಿವೆ (ಆ ವ್ಯಂಗ್ಯಚಿತ್ರಗಳಂತ

ಎಂ.ಎಫ್ ಹುಸೇನರ ಕಲಾಕೃತಿಗಳು ತುಂಬಾ ಮೇಲ್ಮಟ್ಟದಲ್ಲಿವೆ). ಇದರಲ್ಲಿ ಮೊದಲನೆಯದು- ಹುಸೇನರು ರಚಿಸಿರುವ ಹಿಂದೂ ದೇವತೆಗಳ ಕಲಾಕೃತಿಗಳ ಬಗ್ಗೆ ನಮಗೆ ಏನನ್ನಿಸುತ್ತೆ? ಅವನ್ನು ನಾವು ಇಷ್ಟಪಡುತ್ತೀವಾ, ಇಲ್ಲವಾ? ಅದರಿಂದ ನಮಗೆ ಸೌಂದರ್ಯಾನುಭೂತಿ ಸಿಗುತ್ತದೋ ಅಥವಾ ಮನಸ್ಸಿಗೆ ನೋವಾಗುತ್ತಿದೆಯಾ? ಎರಡನೆಯ ವಿಚಾರ- ಈ ಕಲಾಕೃತಿಗಳನ್ನು ಬಹಿರಂಗವಾಗಿ ಪ್ರದರ್ಶಿಸಬಹುದೋ ಅಥವಾ ಇಲ್ಲವೋ?

ಈ ಪ್ರಶ್ನೆಗಳಿಗೆ ಹತ್ತಾರು ಥರದ ಉತ್ತರಗಳಿವೆ. ಅಂದರೆ, ಈ ಕಲಾಕೃತಿಗಳು ಕೆಲವರಿಗೆ ಹಿಡಿಸಲೂಬಹುದು; ಕೆಲವರಿಗೆ ಹಿಡಿಸದೆಯೂ ಇರಬಹುದು. ಇವುಗಳಿಂದ ಕೆಲವರಿಗೆ ನೋವೂ ಆಗಬಹುದು; ಕೆಲವರಿಗೆ ಸಂತೋಷವೂ ಸಿಗಬಹುದು. ಜನ ಕೊಡುವ ಈ ಉತ್ತರಗಳಲ್ಲಿ ತಮಗೆ ಅನಿಸಿದ್ದನ್ನು ನೇರವಾಗಿ ಹೇಳ್ತಾರೆ. ಇದೇ ಕಲೆಯಲ್ಲಿ ಅಡಗಿರುವ ಆಪತ್ತು. ನೀವು ನಿಮ್ಮ ಕಲ್ಪನೆಯ ಕೃತಿಗಳನ್ನು ರಚಿಸುತ್ತೀರಿ. ನಂತರ ಅದನ್ನು ಸಾರ್ವಜನಿಕರ ಅವಗಾಹನೆಗೆ ಒಪ್ಪಿಸಿ ಬಿಡ್ತೀರಿ. ಆ ಕಲಾಕೃತಿಗಳನ್ನು ನೋಡಿದ ಜನ ಕೂಡ ತಮ್ಮ ಪ್ರತಿಕ್ರಿಯೆಗಳನ್ನು ಹೇಳ್ತಾರೆ. ಕೆಲವೊಮ್ಮೆ ಜನರ ಪ್ರತಿಕ್ರಿಯೆ ಎರಡು ಧ್ರುವಗಳಂತಾಗಿಬಿಡುತ್ತೆ. ಕೆಲವೊಮ್ಮೆ ಇದೇ ಕಲೆಯ ಬೆಲೆ! ಇನ್ನು 'ಈ ಕಲಾಕೃತಿಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಬಹುದಾ?' ಎನ್ನುವ ಪ್ರಶ್ನೆ. ಇದು ಡೆನ್ಮಾರ್ಕಿನ ಪತ್ರಿಕೆಗಳಲ್ಲಿ ಬಂದ ವ್ಯಂಗ್ಯಚಿತ್ರಗಳ ಸಂದರ್ಭದಲ್ಲಿ ಇನ್ನೊಂದು ರೀತಿಯ ಅರ್ಥ ಪಡೆದುಕೊಳ್ಳುತ್ತೆ. ಅಂದರೆ, 'ಈ ವ್ಯಂಗ್ಯಚಿತ್ರಗಳನ್ನು ಪ್ರಕಟಿಸಬಹುದಾ ಅಥವಾ ಪ್ರಕಟಿಸಬಾರದಾ?' ಎನ್ನುವ ಪ್ರಶ್ನೆಯಾಗುತ್ತೆ. ಇದಕ್ಕೂ ಕೂಡ 'ಹೌದು' ಮತ್ತು 'ಇಲ್ಲ' ಎನ್ನುವಂಥ ಎರಡೂ ಬಗೆಯ ಉತ್ತರಗಳೂ ತೀಕ್ಷ್ಣವಾಗಿಯೇ ಬರುತ್ತವೆ. ನಾನೀಗ, ಸ್ವಾತಂತ್ರ್ಯದ ಸ್ವಭಾವವನ್ನು ಕುರಿತ ನನ್ನ ಮೂಲವಿಚಾರಕ್ಕೆ ವಾಪಸ್ ಆಗ್ತೀನಿ. ಸ್ವಾತಂತ್ರ್ಯ ಎಂದರೆ ಅದೊಂದು ವಾಗ್ವಾದ. ಇದರಲ್ಲಿ ಕೆಲವೊಮ್ಮೆ ನೀವು ಸೋಲುತ್ತೀರಿ ಅನ್ನೋದು ನಿಜ. ಸಾರ್ವಜನಿಕರು ಬಳಸುವ ಅಸಹ್ಯಕರವಾದ ಭಾಷೆಯ ಬಗ್ಗೆ ನಾವು ಇಲ್ಲಿ ತಕರಾರು ಎತ್ತಬಹುದಾದರೂ, ಅವರು ತಮಗೆ ತೀವ್ರವಾಗಿ ಅನ್ನಿಸಿದ್ದನ್ನು ವ್ಯಕ್ತಪಡಿಸಲು ಯಾವ ತಕರಾರೂ ಇಲ್ಲಿ ಇರಬಾರದು. ಕಲೆಯ ಕೆಲಸ ಯಾವುದೆಂದರೆ, ಒಂದು ಸಮಾಜದಲ್ಲಿ ಅದು ವಾಗ್ವಾದವನ್ನು ಪ್ರಚೋದಿಸಬೇಕು. ಅದರಿಂದ ಆ ಸಮಾಜ ಆಗ ತನ್ನನ್ನು ತಾನೇ ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತೆ. ಆ ಮೂಲಕ ಆ ಸಮಾಜ ಪ್ರಗತಿ ಹೊಂದುತ್ತೆ (ಆದರೆ ಹುಸೇನ್ ಅವರ ಪ್ರಕರಣದಲ್ಲಿ ಇದು ಬೇರೆ ತರಹ ಆಗಿದೆ. ಇಲ್ಲಿ ವಾಗ್ವಾದವು ಪ್ರತಿಗಾಮಿಯೂ ಆಗಿರಬಹುದು. ಏಕೆಂದರೆ, ಅಲ್ಲಿನ ಸಮಾಜವು ತನ್ನನ್ನು ತಾನು ತನ್ನ ಹಿಂದಿನ ಸ್ಥಿತಿಗಿಂತ ಇನ್ನೂ ಕೀಳುಮಟ್ಟದಲ್ಲಿ ಪರಿಭಾವಿಸಿಕೊಂಡಿರುತ್ತದೆ).

ನಾನು ಎರಡು ವಿಚಾರಗಳನ್ನು ಪ್ರಸ್ತಾಪಿಸಿದೆ. ಇದರಲ್ಲಿ ಮೊದಲನೇ ವಿಚಾರಕ್ಕೆ ಸಂಬಂಧಿಸಿದಂತೆ ಪರ ಮತ್ತು ವಿರೋಧ ಎರಡೂ ತೀವ್ರವಾಗಿವೆ. ಇದನ್ನೇನೂ ನಾವು ಬಗೆಹರಿಸಬೇಕಾದ ಅಗತ್ಯವಿಲ್ಲ. ದಿನಪತ್ರಿಕೆಗಳಲ್ಲಿರುವ ಚಿತ್ರ ಸಂಪಾದಕರು (ಪಿಕ್ಚರ್ ಎಡಿಟರ್ಸ್), ತಮ್ಮ ಪತ್ರಿಕೆಯಲ್ಲಿ ಇವತ್ತು ಯಾವ ಫೋಟೋಗಳನ್ನು ಹಾಕಬಹುದು ಅನ್ನೋದನ್ನು ನಿರ್ಧರಿಸ್ತಾರೆ. ಆದರೆ, ಯಾವುದೇ ಇಬ್ಬರು ಸಂಪಾದಕರು ಈ ವಿಷಯದಲ್ಲಿ ಒಂದೇ ತರಹದ ತೀರ್ಮಾನವನ್ನು ತೆಗೆದುಕೊಳ್ಳೋದಿಲ್ಲ. ಉದಾಹರಣೆಗೆ ಈ ಚಿತ್ರಗಳಲ್ಲಿ ಒಂದನ್ನೂ ಕೆಲವು ಸಂಪಾದಕರು ಡೆನ್ಮಾರ್ಕಿನಲ್ಲಿ ಪ್ರಕಟವಾದ ವ್ಯಂಗ್ಯಚಿತ್ರಗಳನ್ನೇ ಪ್ರಕಟಿಸದೆಯೇ ಇರಬಹುದು. ಇನ್ನು ಕೆಲವರು ಕೆಲವೇ ಕೆಲವು ಚಿತ್ರಗಳನ್ನು ಮಾತ್ರ ಪ್ರಕಟಿಸುವ ಮನಸ್ಸು ಮಾಡಬಹುದು. ಇನ್ನೂ ಒಂದಿಷ್ಟು ಜನ ಈ ಎಲ್ಲಾ ವ್ಯಂಗ್ಯಚಿತ್ರಗಳನ್ನೂ ಪ್ರಕಟಿಸಿಬಿಡಬಹುದು. ಹುಸೇನ್ ಅವರ

ವಿಷಯದಲ್ಲೂ ಹೀಗೆಯೇ ಆಗಬಹುದು. ಕೆಲವರು ಹುಸೇನರು ರಚಿಸಿರುವ ಹಿಂದೂ ದೇವತೆಗಳ ಒಂದೇ ಒಂದು ಕಲಾಕೃತಿಯನ್ನೂ ಪ್ರದರ್ಶಿಸುವುದು ಬೇಡ ಎನ್ನಬಹುದು; ಇನ್ನು ಕೆಲವರು ಕೆಲವನ್ನು ಮಾತ್ರ ಪ್ರದರ್ಶಿಸಲು ಒಪ್ಪಿ, ಉಳಿದವನ್ನು ನಿರಾಕರಿಸಬಹುದು. ಇನ್ನೂ ಕೆಲವರು ಹುಸೇನರ ಎಲ್ಲಾ ಕಲಾಕೃತಿಗಳಿಗೂ ಸಕಾರಾತ್ಮಕವಾಗಿ ಸ್ಪಂದಿಸಬಹುದು. ಇದನ್ನೇ ಚುಟುಕಾಗಿ ಹೀಗೆ ಹೇಳಬಹುದು- ಜನರು ತಮಗೆ ಅನಿಸಿದ್ದನ್ನೇ ಆಲೋಚಿಸುತ್ತಾರೆ; ತಾವು ಭಾವಿಸಿಕೊಂಡಿದ್ದನ್ನೇ ಅನುಭವಿಸುತ್ತಾರೆ. ಕೊನೆಗೆ ತಮಗೆ ಏನನ್ನಿಸಿತೋ ಅದನ್ನೇ ಹೇಳ್ತಾರೆ. ಇದು ಯಾವುದೇ ಮುಕ್ತ ಸಮಾಜದಲ್ಲಿ ಸಾಮಾನ್ಯವಾಗಿ ನಡೆಯುವ ವಿದ್ಯಮಾನ. ಆದರೆ ನಾನು ಪ್ರಸ್ತಾಪಿಸಿದ ಪೈಕಿ ಎರಡನೆಯ ವಿಚಾರದ ಕಡೆಗೆ ನಾವು ಗಂಭೀರವಾಗಿ ಗಮನಹರಿಸಬೇಕಾಗಿದೆ.

ಎರಡನೆಯ ವಿಚಾರ ಯಾವುದು ಅಂದ್ರೆ, ಅದು ಹಿಂಸೆ. ಅದು ನಿಜವಾದ ಹಿಂಸಾಚಾರವೂ ಆಗಿರಬಹುದು ಅಥವಾ ಹಿಂಸೆಯ ಬೆದರಿಕೆಯೂ ಆಗಿರಬಹುದು. ಇದನ್ನು ಬಿಟ್ಟರೆ ಹಿಂಸೆಯ ಅವಳಿ-ಜವಳಿಯಂತಿರುವ ಕಿರುಕುಳ ಮತ್ತು ಉಪಟಳಗಳೂ ಆಗಬಹುದು. ಈ ಪ್ರಶ್ನೆಗೆ ಎರಡು ಆಯಾಮಗಳು ಅನ್ನೋದು ಇಲ್ಲವೇ ಇಲ್ಲ. ಯಾವಾಗ ಹಿಂಸೆಯ ಬೆದರಿಕೆ ಬರುತ್ತೋ, ಈ ಸಮಾಜದ ಮೇಲೆ ಯಾವುದೇ ವಿಚಾರಕ್ಕೆ ಸಂಬಂಧಪಟ್ಟಂತೆ ಬೆದರಿಕೆ ಹಾಕಿಯೋ ಅಥವಾ ಬಲಪ್ರಯೋಗ ಮಾಡಿಯೋ ಒಂದು ನಿರ್ದಿಷ್ಟ ನಿಲುವನ್ನೇ, ಒಂದು ನಿಶ್ಚಿತ ಅಭಿಪ್ರಾಯವನ್ನೇ ಹೇರಲು ಯಾರಾದರೂ ಹೊರಟಿದ್ದಾರೆ ಎಂದರೆ ಅದನ್ನು ನಾವು ಅಚಲ ನಿಲುವನ್ನೂ ತಾಳಿಯೂ, ದೃಢ ನಿರ್ಧಾರದಿಂದ ಪ್ರತಿರೋಧಿಸಬೇಕು. ಇದನ್ನು ಬಿಟ್ಟು ಹಿಂಸಾಚಾರ ನಡೆಸುವವರನ್ನು ಓಲೈಸಲು ಹೋದರೆ ಎಡವಟ್ಟಾಗುತ್ತದೆ. ಹಿಂಸೆಗೆ ಶರಣಾಗುವುದರಿಂದ ನಮ್ಮ ನೈತಿಕ ಸ್ತರವೇ ಹರಿದು ಹೋಗುತ್ತೆ. ಅದು ಹೇಡಿತನ. ಡೆನ್ಮಾರ್ಕಿನ ಪತ್ರಿಕೆಗಳಲ್ಲಿ ಬಂದ ವ್ಯಂಗ್ಯಚಿತ್ರಗಳಿಗೆ ವಿರುದ್ಧವಾಗಿ ವ್ಯಕ್ತವಾದ ಭಾರೀ ಹಿಂಸಾಚಾರಕ್ಕೆ ಸರಿಯಾದ ಉತ್ತರ ಏನೆಂದರೆ, ಆ ವ್ಯಂಗ್ಯಚಿತ್ರಗಳನ್ನೆಲ್ಲ ಪ್ರಪಂಚದ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟಿಸಿಬಿಡಬೇಕು. ಇಸ್ಲಾಂ ಧರ್ಮಕ್ಕೆ ಅವಮಾನಿಸುವುದು ಉದ್ದೇಶವಲ್ಲ- ಹಿಂಸಾಚಾರ ಯಾವಾಗಲೂ ತಿರುಗುಬಾಣವಾಗುತ್ತದೆ ಅನ್ನೋದನ್ನು ಸಾಬೀತುಪಡಿಸಲು. ಇದೇ ರೀತಿ ನಮಗೆ ಯಾರಾದರೂ ಬೆದರಿಕೆ ಹಾಕಿದರೂ ಅಷ್ಟೇ, ಅದಕ್ಕೆ ಹೆದರದೆ ಅಚಲವಾಗಿ ನಿಂತು ಅದನ್ನು ಪ್ರತಿರೋಧಿಸಬೇಕು. ಅಂಥ ಶಕ್ತಿಗಳನ್ನು ಕಾಲು ಕೀಳುವಂತೆ ಮಾಡಬೇಕು.

ಇದನ್ನು ಬಿಟ್ಟು ಹಿಂಸೆಗೆ ಶರಣಾಗಿ, ಅದಕ್ಕೆ ಬಲಿಯಾದವರನ್ನೇ 'ಇಷ್ಟಕ್ಕೆಲ್ಲಾ ನೀನೇ ಕಾರಣ' ಅಂತಾ ದೂಷಿಸೋದು ಇದೆಯಲ್ಲ- ಅದು ಎಲ್ಲಕ್ಕಿಂತ ಅಸಹ್ಯವಾದ ಸಂಗತಿ. ಅದನ್ನು ನೈತಿಕವಾಗಿಯೂ ಸಮರ್ಥಿಸಿಕೊಳ್ಳೋದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಅದೊಂದು ಆಘಾತ ಹುಟ್ಟಿಸುವಂಥ ಅನ್ಯಾಯದ ಹೆಜ್ಜೆ. ಆದರೆ ಎಂ.ಎಫ್ ಹುಸೇನ್ ಅವರ ಪ್ರಕರಣದಲ್ಲಿ ಆಗ್ತಾ ಇರೋದೇ ಹೀಗೆ.

'ಡೆಕ್ಕನ್ ಹೆರಾಲ್ಡ್'ನಲ್ಲಿ ಇತ್ತೀಚೆಗೆ ಬಂದ ಒಂದು ಸಂಪಾದಕೀಯದ ಕೆಲವು ಸಾಲುಗಳು ಹೀಗಿವೆ- 'ದೇಶದಲ್ಲಿ ಎಲ್ಲೆಡೆಯೂ ಹಿಂಸೆಯ ಅಲೆ ಹಬ್ಬುತ್ತಿದೆ. ಇಲ್ಲಿ ಯಾರೂ ಕಲೆಯನ್ನು ಅದರಲ್ಲಿರುವ ಯೋಗ್ಯತೆಯ ಆಧಾರದ ಮೇಲೆ ನಿರ್ಧರಿಸುತ್ತಿಲ್ಲ..... ಕಲೆ, ರಾಜಕೀಯ ಮತ್ತು ಸಮಾಜಕ್ಕೆಲ್ಲ ಕೋಮಿನ ಬಣ್ಣ ಹಚ್ಚುವುದು ತುಂಬಾ ಅಪಾಯಕಾರಿಯಾದ ಪ್ರವೃತ್ತಿ..... ಇಂಥ ಸಂದರ್ಭದಲ್ಲಿ ಸರಕಾರವು, ಎಂ. ಎಫ್ ಹುಸೇನರು ಭಾರತಕ್ಕೆ ಬರುವುದಾದರೆ ಅವರಿಗೆ ಸ್ವಾಗತ ಇದೆ ಎನ್ನುತ್ತಿದೆ. ಅದು ಇದರಾಚೆಗೂ ಹೋಗಬೇಕು. ಹುಸೇನ್ ಮತ್ತು ಹುಸೇನರ ಕಲಾಕೃತಿಗಳೆರಡೂ ಭಾರತದಲ್ಲಿ ಸುರಕ್ಷಿತ ಎಂದು ಸಾಬೀತು

ಆಗಬೇಕು. ಇಡೀ ಸಮಾಜಕ್ಕೇ ಈ ಹೊಣೆಗಾರಿಕೆ ಇದೆ....'.ಕಲೆ ಮತ್ತು ಕಲಾವಿದರನ್ನು ರಕ್ಷಿಸುವ ಹೊಣೆಗಾರಿಕೆ ಇಡೀ ಸಮಾಜದ ಮೇಲಿದೆ. 'ಡೆಕ್ಕನ್ ಹೆರಾಲ್ಡ್' ಇದನ್ನು ಸರಿಯಾಗಿಯೇ ಹೇಳಿದೆ. ನಾನು ಈಗ ಮತ್ತೆ ಆ ಅಂಶಕ್ಕೇ ವಾಪಸ್ಸಾಗ್ತೀನಿ.

ಸರಕಾರ ಸರಿಯಾದ ಕ್ರಮಕ್ಕೈಗೊಳ್ಳಬೇಕು ಎನ್ನುವ ಆಗ್ರಹಕ್ಕೆ ನಾನೂ ಸಹ ನನ್ನ ದನಿಯನ್ನು ಸೇರಿಸಲು ಇಷ್ಟಪಡ್ತೀನಿ. ಹಿಂಸೆಯ ಬರ್ಬರತೆ ಮತ್ತು ಹಿಂಸೆಯನ್ನು ಹುಟ್ಟುಹಾಕುವ ಬೆದರಿಕೆಗಳೇನೇ ಇರಲಿ, ಅದ್ಯಾವುದಕ್ಕೂ ಜಗ್ಗದೆ ಹುಸೇನರ ಕಲಾಕೃತಿಗಳನ್ನು ಪ್ರದರ್ಶಿಸಬೇಕು. ಮತ್ತೆ ಮುಸ್ಲಿಮರನ್ನು ನೋಯಿಸುವ ಉದ್ದೇಶದಿಂದಲ್ಲ. ಬದಲಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಪರವಾಗಿ ತನ್ನ ಬದ್ಧತೆ ಎಷ್ಟೊಂದು ದೊಡ್ಡದು ಎನ್ನುವುದನ್ನು ತೋರಿಸಲಿಕ್ಕೆ ಭಾರತ ಸರಕಾರವು ಈ ಕೆಲಸ ಮಾಡಬೇಕು. ಜೊತೆಗೆ ತುಂಬಾ ಹೆಮ್ಮೆಯಿಂದ, ಕಲಾವಿದರಿಗೆ ಸುರಕ್ಷತೆಯನ್ನು ಒದಗಿಸಿ ಅದನ್ನು ಸಾರಿ ಹೇಳಬೇಕು. ಇದಲ್ಲದೆ ಮಹಾತ್ಮ ಗಾಂಧಿಯ ಈ ನಾಡಿನಲ್ಲಿ ಹಿಂಸೆಗೆ ಯಾವತ್ತೂ ಜಾಗವಿಲ್ಲ ಅನ್ನೋದನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ಭಾರತ ಈ ಕೆಲಸವನ್ನು ಮಾಡಬೇಕು. ಆದರೆ ಈ ಕೆಲಸ ಇಲ್ಲಿಯವರೆಗೂ ಆಗಿಲ್ಲ. ಇದು ನಿಜಕ್ಕೂ ವಿಷಾದಕರ. ಆದರೆ ಈಗಲೂ ಸರಕಾರ ಅಂಥದೊಂದು ಒಳ್ಳೆಯ ಕೆಲಸ ಮಾಡಲಿಕ್ಕೆ ಕಾಲ ಮಿಂಚಿಲ್ಲ. ಈ ಕೆಲಸವನ್ನು ಸರಕಾರ ಮಾಡಿಯೇ ತೀರಬೇಕು.

ಇದಕ್ಕಿಂತ ವಿಷಾದಕರ ಬೆಳವಣಿಗೆಗಳೂ ಈ ದೇಶದಲ್ಲಿ ಆಗ್ತಾ ಇವೆ. ಎಂ.ಎಫ್. ಹುಸೇನರ ಮೇಲೆ ದಾಳಿ ನಡೆಯಿತಲ್ಲವೇ? ಹೀಗೆ ದಾಳಿಗೆ ಒಳಗಾಗಿ ನಲುಗಿರುವವರು ಅವರೊಬ್ಬರೇ ಅಲ್ಲ. 'ಮಿಂಟ್' ಪತ್ರಿಕೆಯಲ್ಲಿ ಸಲೀಲ್ ತ್ರಿಪಾಠಿ ಅವರು ಬರೆದಿರುವ ಒಂದು ಲೇಖನದಲ್ಲಿ ಪ್ರಸ್ತಾಪಿಸಿದಂತೆ ಹೇಳಿರುವ ಪ್ರಕಾರ, 'ದ್ರೌಪದಿ ಅನ್ನೋ ತೆಲುಗು ಕಾದಂಬರಿ ಬರೆದು ಗೌರವ ಪಡೆದ ಯರ್ಲಗಡ್ಡಾ ಲಕ್ಷ್ಮೀಪ್ರಸಾದ್ ಅವರ ವಿರುದ್ಧ ಆಂಧ್ರಪ್ರದೇಶದಲ್ಲಿ ಅನೇಕ ಕಡೆ ಪ್ರತಿಭಟನೆಗಳು ನಡೆದಿವೆ. ಇನ್ನು ಕೆಲವರು ಶಾರುಖ್ ಖಾನ್ ಅವರು ನಟಿಸುತ್ತಿರುವ ಒಂದು ಚಿತ್ರದ ಹೆಸರನ್ನು ಬದಲಾಯಿಸಬೇಕೆಂದು ಪಟ್ಟು ಹಿಡಿದಿದ್ದಾರೆ. ಮಹಾರಾಷ್ಟ್ರದಲ್ಲಿ ಶಿವಸೇನೆಯವರು ಖ್ಯಾತ ಕ್ರಿಕೆಟಿಗ ಸಚಿನ್ ತೆಂಡುಲ್ಕರ್ ಮತ್ತು ಖ್ಯಾತ ಉದ್ಯಮಿ ಮುಖೇಶ್ ಅಂಬಾನಿ ವಿರುದ್ಧ ದನಿಯೆತ್ತಿದ್ದಾರೆ. ಅವರಿಬ್ಬರೂ 'ಮುಂಬಯಿ ಇಡೀ ಭಾರತೀಯರಿಗೆ ಸೇರಿದ್ದು' ಎಂದು ಹೇಳಿದ್ದೇ ಅವರಿಗೆ ಅಪಥ್ಯವಾಗಿದೆ. ಇಂಥ ಕಾಗದದ ಹುಲಿಗಳು ಈಗ ಶಾರುಖ್ ಖಾನ್ ಅವರ 'ಮೈ ನೇಮ್ ಈಸ್ ಖಾನ್' ಸಿನಿಮಾಗೆ ಅಡ್ಡಿಪಡಿಸುವುದಾಗಿ ಘೋಷಿಸಿವೆ....'.

ಇವುಗಳ ಜತೆಗೆ ಬೆಚ್ಚಿ ಬೀಳಿಸುವಂಥ ಇನ್ನೊಂದು ಉದಾಹರಣೆ. ಭಾರತದ ಪ್ರಥಮ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರ ಜೀವನಕ್ಕೆ ಸಂಬಂಧಿಸಿದ ಸಿನಿಮಾದ ವಿರುದ್ಧ ಪ್ರತಿಭಟನೆ. ಈ ಚಿತ್ರದಲ್ಲಿ ನಟಿ ಕೇಟ್ ಬ್ಲ್ಯಾಂಚೆಟ್ ಅವರು ಎಡ್ವಿನಾ ಮೌಂಟ್‌ಬ್ಯಾಟನ್‌ಳ ಪಾತ್ರ ನಿರ್ವಹಿಸುತ್ತಿದ್ದಾರೆ. ಎಡ್ವಿನಾಗೂ ನೆಹರೂಗೂ ಇದ್ದ ಗಾಢ ಸಂಬಂಧ ಎಲ್ಲರಿಗೂ ಗೊತ್ತಿರುವಂಥದೇ! ಅದರಲ್ಲಿ ಮುಚ್ಚುಮರೆ ಏನೂ ಇಲ್ಲ. ಆದರೆ, ಇತಿಹಾಸದಲ್ಲಿ ದಾಖಲಾಗಿರುವಂಥ ಸಂಗತಿಗಳ ಬಗ್ಗೆ ಸಿನಿಮಾ ಮಾಡೋದು ಕೂಡ ಇತ್ತೀಚೆಗೆ ಭಾರತೀಯ ಸೂಕ್ಷ್ಮತೆಗಳಿಗೆ ಹಿಡಿಸ್ತಾ ಇಲ್ಲ. ಇದಾದ ಮೇಲೆ ತಸ್ಲಿಮಾ ನಸ್ರೀನ್ ಅವರ ಅವಸ್ಥೆ ನೆನಪಾಗುತ್ತೆ. ತಸ್ಲಿಮಾಗೆ ಕೊಟ್ಟಿರುವ ವೀಸಾವನ್ನು ನವೀಕರಿಸಲು ಭಾರತ ಸರಕಾರ ಮೀನಾಮೇಷ ಎಣಿಸುತ್ತೆ. ಅತ್ತ ಪುಣೆಯಲ್ಲಿರುವ ವಿಖ್ಯಾತ ಭಂಡಾರ್‌ಕರ್ ಓರಿಯಂಟಲ್ ರೀಸರ್ಚ್ ಇನ್‌ಸ್ಟಿಟ್ಯೂಟಿನ ಮೇಲೆ ಕೆಲವು ಪುಂಡರು ದಾಳಿ ನಡೆಸಿದ್ದಾರೆ. ಇತಿಹಾಸಜ್ಞ ಜೇಮ್ಸ್ ಲೈನ್ ಅವರು ಅಲ್ಲಿ ಶಿವಾಜಿಯ

ಜೀವನಚರಿತ್ರೆಗೆ ಸಂಬಂಧಿಸಿದಂತೆ ಕೆಲವು ಹೊಸ ಸಂಶೋಧನೆ ಮಾಡಿದ್ದೇ ಇದಕ್ಕೆ ಕಾರಣ. ಜೇಮ್ಸ್ ಲೈನ್ ಅವರ ಸಂಶೋಧನೆ 'ಮಹಾರಾಷ್ಟ್ರ ಸೇವಾ ಸಂಘ'ಕ್ಕೆ ಹಿಡಿಸಲಿಲ್ಲ. ಕೂಡಲೇ ಅವರ ಯುವ ವಿಭಾಗವಾದ 'ಸಂಭಾಜಿ ಬ್ರಿಗೇಡ್'ನ ಕೆಲ ಯುವಕರು ಸಂಶೋಧನಾ ಸಂಸ್ಥೆಯ ಮೇಲೆ ಎರಗಿದರು. ಈ 'ಸಂಭಾಜಿ ಬ್ರಿಗೇಡ್' ಮಹಾರಾಷ್ಟ್ರ ಸೇವಾ ಸಂಘದ ಉಗ್ರರಿರುವ ವಿಭಾಗ. ಹೀಗೆ ದಾಳಿ ನಡೆಸುತ್ತಿದ್ದಂತೆಯೇ ಜೇಮ್ಸ್ ಲೈನ್ ಅವರ ಪುಸ್ತಕವನ್ನು ನಿಷೇಧಿಸಲಾಯ್ತು. ಆ ನಿಷೇಧ ಇವತ್ತಿಗೂ ಹಾಗೆಯೇ ಮುಂದುವರಿದಿದೆ.

ಹಾಗಾದರೆ ಜೇಮ್ಸ್ ಲೈನ್ ಮತ್ತು ಪುಣೆಯ ಭಂಡಾರ್‌ಕರ್ ಸಂಶೋಧನಾ ಸಂಸ್ಥೆ ಎರಡೂ ಸಂಭಾಜಿ ಬ್ರಿಗೇಡ್‌ನ ದಾಳಿಗೆ ತುತ್ತಾಗಿದ್ದೇ ಸರಿ ಎಂದು ಭಾರತೀಯರು ನಂಬುತ್ತಾರಾ? ಇಡೀ ಭಾರತವೇ ಭಾರತೀಯರಿಗೆಲ್ಲ ಸೇರಿದ್ದು ಎಂಬ ಸತ್ಯವನ್ನು ಹೇಳಿದ್ದಕ್ಕಾಗಿ ಸಚಿನ್ ತೆಂಡುಲ್ಕರ್ ಮತ್ತು ಮುಖೇಶ್ ಅಂಬಾನಿ ಅವರನ್ನು ನಿಂದಿಸಬೇಕಾ? ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯಾವಳಿಯಲ್ಲಿ ಪಾಕಿಸ್ತಾನದ ಕ್ರಿಕೆಟಿಗರೂ ಇರಬೇಕಾಗಿತ್ತು ಎಂದಿದ್ದಕ್ಕಾಗಿ ನಟ ಶಾರುಖ್ ಖಾನ್ ಅವರತ್ತ ಬೆರಳು ತೋರಿಸಬೇಕಾ? ಆದರೆ, ಇವತ್ತು ಭಾರತದಲ್ಲಿ ಹೆಚ್ಚಿನ ಜನರಿಗೆ ಇವೇ ಸತ್ಯಗಳು ಎನಿಸುತ್ತಿದೆ ಎಂದು ಹೇಳಲು ನನಗೆ ಬೇಜಾರಾಗುತ್ತಿದೆ. ಈಗ ನಾನು ಒಟ್ಟಾರೆಯಾಗಿ ನಾಗರಿಕರ ಜವಾಬ್ದಾರಿ ಹೇಗೆ ಹೆಚ್ಚಿನದು ಎನ್ನುವುದನ್ನು ಹೇಳಲು ಇಷ್ಟಪಡ್ತೀನಿ.

ಈ ಸಂಸ್ಕೃತಿ ಕೇವಲ ಭಾರತಕ್ಕಷ್ಟೇ ಸೀಮಿತವಲ್ಲ. ಆಸ್ಟ್ರೇಲಿಯಾದ ವಿಮರ್ಶಕ ರಾಬರ್ಟ್ ಹ್ಯೂಸ್ ಇದನ್ನು 'ತಕರಾರಿನ ಸಂಸ್ಕೃತಿ' (ಕಲ್ಚರ್ ಆಫ್ ಕಂಪ್ಲೇಂಟ್) ಎನ್ನುತ್ತಾನೆ. ಬ್ರಿಟನ್ ಮತ್ತು ಅಮೆರಿಕದಂಥ ದೇಶಗಳಲ್ಲಿ ಕೂಡ ಇಂಥ ತಕರಾರಿನ ಗುಂಪುಗಳಿವೆ. ಹೀಗೆ ಕ್ಯಾತೆ ತೆಗೆಯುವವರು ಬರೀ ಧಾರ್ಮಿಕ ಗುಂಪಿನವರಷ್ಟೇ ಅಲ್ಲ. ಜನಾಂಗೀಯ ಮತ್ತು ಲೈಂಗಿಕ ಗುಂಪುಗಳೂ ಇಂಥ ಕೆಲಸಕ್ಕಿಳಿದಿವೆ. ತಮಗಾಗದ್ದರ ವಿರುದ್ಧ ಉಗ್ರವಾಗಿ ಪ್ರತಿಭಟಿಸುವ ಈ ಗುಂಪುಗಳು ಕೊನೆಗೆ ತಮ್ಮನ್ನು ತಾವೇ ನಕಾರಾತ್ಮಕವಾಗಿ ಬಿಂಬಿಸಿಕೊಳ್ಳುತ್ತವೆ. ಇತ್ತೀಚಿನ ದಿವಸಗಳಲ್ಲಿ ಯಾವ ಸಂಗತಿಯೂ ನಿಮ್ಮನ್ನು ಹೆಚ್ಚಾಗಿ ಘಾಸಿಗೊಳಿಸುತ್ತಿಲ್ಲ ಎಂದರೆ, 'ಹಾಗಾದರೆ ನೀವ್ಯಾರು?' ಎನ್ನುವ ಪ್ರಶ್ನೆಯನ್ನು ಎದುರಿಸಬೇಕಾಗುತ್ತೆ. ಎಲ್ಲದಕ್ಕೂ ಉಗ್ರವಾಗಿ ಪ್ರತಿಭಟಿಸುವುದೇ ನಮ್ಮ ತಾಕತ್ತೇನು ಅನ್ನೋದನ್ನು ತೋರಿಸುತ್ತೆ ಅನ್ನುವಂಥ ಅಪಾಯಕಾರಿ ಚಿಂತನೆ ನಮ್ಮಲ್ಲೆಲ್ಲ ಬರ್‍ತಾ ಇದೆ. ಆದರೆ ನನ್ನ ಅಭಿಪ್ರಾಯ ಬೇರೆಯೇ ಇದೆ. ಹಿಂಸೆಗೆ ಶರಣಾಗುವುದು ನಿಜಕ್ಕೂ ದೌರ್ಬಲ್ಯ. ನಾವೆಲ್ಲರೂ ಮನುಷ್ಯರಾಗಿ ನೋಡಬೇಕಾಗಿರುವ ಅತ್ಯಂತ ಕೇಡಿನ ಸ್ಥಿತಿ ಇದು.

ಹುಸೇನ್ ವಿರೋಧಿ ನಿಲುವುಗಳ ಆಳದಲ್ಲಿ ಇಂಥ ಉದ್ರೇಕಕಾರಿ ಸಂಸ್ಕೃತಿ ಇದೆ. ಇದು 'ಕಣ್ಣಿಗೆ ಕಣ್ಣು' ಎನ್ನುವಂಥ ಕೆಟ್ಟ ತರ್ಕದ ಮೇಲೆ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತೆ. ಜತೆಗೆ ಎರಡು ತಪ್ಪುಗಳು ಸೇರಿದರೆ ಕೊನೆಗೆ ಅದೇ ಸರಿ ಎನ್ನಿಸಿಕೊಂಡುಬಿಡುತ್ತೆ ಅನ್ನೋ ನಂಬಿಕೆಯೂ ಇಲ್ಲಿ ಕೆಲಸ ಮಾಡುತ್ತೆ. ಇಲ್ಲಿ ನನ್ನದೇ ಒಂದು ಕೃತಿಯನ್ನು ವಾದಕ್ಕಾಗಿ ಹೀಗೆ ನನ್ನದೇ ಉದಾಹರಣೆಯನ್ನು ಕೊಡಬೇಕಾಗಿ ಬಂದಿರೋದಕ್ಕೆ ನನಗೆ ಬೇಜಾರಿದೆ. ನನ್ನ ಸಾಹಿತ್ಯ ಕೃತಿಯನ್ನು ಮುಸ್ಲಿಮರಿಗೆ ನೋವುಂಟುಮಾಡುತ್ತದೆ ಎಂಬ ಕಾರಣಕ್ಕಾಗಿ ಒಪ್ಪಲು ಸಾಧ್ಯವಿಲ್ಲ ಎಂದಾದರೆ, ಎಂ.ಎಫ್. ಹುಸೇನರ ಕಲಾಕೃತಿಗಳೂ ಅದೇ ಗತಿ ಎದುರಿಸಬೇಕಾಗುತ್ತದೆ. ಯಾಕೆಂದರೆ, ಮುಸ್ಲಿಮರ ಭಾವನೆಯಂತೆಯೇ ಹಿಂದೂಗಳ ಭಾವನೆ ಕೂಡ ಅಷ್ಟೇ ಮುಖ್ಯ. ಇದಕ್ಕೆ ನನ್ನಲ್ಲಿ ಎರಡು ಉತ್ತರಗಳಿವೆ. ಮೊದಲನೆಯದಾಗಿ, ಭಾರತದಲ್ಲಿ ನನ್ನ ಸಾಹಿತ್ಯ ಕೃತಿಗೆ ಸಿಕ್ಕಿದ ಉಪಚಾರ ಹಿಂದೆಯೂ ಸರಿಯಾಗಿರಲಿಲ್ಲ ಮತ್ತು ಈಗಲೂ ಸರಿಯಾಗಿಲ್ಲ. ನಾವಿಲ್ಲಿ

ಮೌಲ್ಯದ ಪ್ರಶ್ನೆಯನ್ನು ಬಿಟ್ಟು ಬರೀ ತಂತ್ರದ ವಿಚಾರವಾಗಿ ಮಾತನಾಡಿದರೂ ಸಹ ಒಂದು ಸಂಗತಿ ಸ್ಪಷ್ಟವಾಗುತ್ತೆ. ೧೯೮೮ ಮತ್ತು ೧೯೮೯ರಲ್ಲಿ ನನ್ನ 'ದಿ ಸೆಟಾನಿಕ್ ವರ್ಸಸ್' ಕಾದಂಬರಿಯ ವಿರುದ್ಧ ಬೀದಿಗಿಳಿದವರ ಪೈಕಿ ಅನೇಕರು ಈಗ, 'ನಮ್ಮ ಪ್ರತಿಭಟನೆ ನಮಗೇ ತಿರುಗುಬಾಣವಾಯಿತು ಮತ್ತು ಅದು ದುರ್ಯೋಧನೆಯಿಂದ ಕೂಡಿತ್ತು' ಎನ್ನುವುದನ್ನು ಒಪ್ಪಿಕೊಳ್ತಾರೆ. ಈ ಹಂತದಲ್ಲಿ ಕೂಡ ನಾವು ಮೌಲ್ಯಗಳ ಪ್ರಶ್ನೆಯನ್ನು ಬಿಟ್ಟು ಮಾತನಾಡಿದರೂ ಭಾರತ ಸರಕಾರ ಮಾಡಿದ ತಪ್ಪು ಅರಿವಿಗೆ ಬರುತ್ತೆ. ಪುಸ್ತಕಗಳ ನಿಷೇಧದ ಬಗ್ಗೆ ತಾನೇ ರೂಪಿಸಿರುವ ನಿಯಮಗಳನ್ನು ಕಣ್ಣೆತ್ತಿಯೂ ನೋಡದೆ ನನ್ನ ಕಾದಂಬರಿಯನ್ನು ನಿಷೇಧಿಸಲಾಯಿತು. ಹಾಗೆಯೇ, ನನ್ನ ಕಾದಂಬರಿಯಲ್ಲಿರುವ ಮೌಲ್ಯಗಳನ್ನು ಮರೆತು ಅದರಲ್ಲಿರುವ ವಸ್ತುವಿನ ಬಗ್ಗೆ ಮಾತನಾಡಿದರೂ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ, ನನ್ನ ಕಾದಂಬರಿಯಲ್ಲಿ ಮುಸ್ಲಿಮರನ್ನು ಕೆಲವೊಮ್ಮೆ ಸಹಾನುಭೂತಿಯಿಂದ ನೋಡಲಾಗಿದೆ; ಇನ್ನು ಕೆಲವೊಮ್ಮೆ ನಿಷ್ಠುರವಾಗಿ ನೋಡಲಾಗಿದೆ. ಇದೇ ರೀತಿಯಲ್ಲಿ ನನ್ನ ಕಾದಂಬರಿಯಲ್ಲಿ ಒಳ್ಳೆಯ ಮತ್ತು ಕೆಟ್ಟ ಹಿಂದೂಗಳೂ, ಕ್ರೈಸ್ತರೂ ಮತ್ತು ಯಹೂದಿಗಳೂ ಇದ್ದಾರೆ. ಈ ಅಂಶ ನನ್ನ ಸಾಹಿತ್ಯ ಕೃತಿಗಳನ್ನು ಓದುವ ಯಾರಿಗೇ ಆದರೂ ಕಂಡುಬರುತ್ತೆ. ನಾನು ಯಾವತ್ತೂ ಒಂದು ನಿರ್ದಿಷ್ಟ ಸಮುದಾಯವನ್ನು ಉಗ್ರವಾಗಿ ವಿಡಂಬಿಸುವ ಉದ್ದೇಶ ಇಟ್ಟುಕೊಂಡವನಲ್ಲ. ಈ ಮನುಷ್ಯ ಜೀವನವನ್ನು ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಸ್ಪಷ್ಟವಾಗಿ ನೋಡೋದು ನನ್ನ ಗುರಿ. ನನ್ನ 'ದಿ ಸೆಟಾನಿಕ್ ವರ್ಸಸ್' ಕಾದಂಬರಿಯ ವಿರುದ್ಧ ಭಾರತದಲ್ಲಿ ಉಗ್ರ ಪ್ರತಿಭಟನೆ ಆರಂಭವಾಗಿದ್ದು ಈಗ್ಗೆ ಇಪ್ಪತ್ತೆರಡು ವರ್ಷಗಳ ಹಿಂದೆ. ಈ ಪ್ರತಿಭಟನೆಯ ಕಿಚ್ಚಿಗೆ 'ಇಂಡಿಯಾ ಟುಡೇ' ನಿಯತಕಾಲಿಕದಲ್ಲಿ ಪ್ರಕಟವಾದ ಒಂದು ಪ್ರಚೋದನಕಾರಿ ಲೇಖನ ತುಪ್ಪ ಸುರಿಯಿತು. ಈ ಸಂಗತಿಯನ್ನು ಹೇಳಲು ನನಗೆ ನಿಜಕ್ಕೂ ವಿಷಾದವಾಗ್ತಾ ಇದೆ. ಈ ಸಂಗತಿ ಜನರಿಗೆ ಮತ್ತು ನನ್ನನ್ನು ಇವತ್ತು ಇಲ್ಲಿಗೆ ಆಹ್ವಾನಿಸಿರುವ 'ಇಂಡಿಯಾ ಟುಡೇ' ನಿಯತಕಾಲಿಕದ ಬಳಗಕ್ಕೆ ಸ್ಪಷ್ಟವಾಗಿ ಕಾಣುತ್ತೆ ಅಂದ್ಕೋತೀನಿ. 'ದಿ ಸೆಟಾನಿಕ್ ವರ್ಸಸ್' ಕಾದಂಬರಿಯ ಮೇಲೆ ಭಾರತ ಸರಕಾರ ಹೇರಿದ ನಿಷೇಧ ಆಗಲೂ ತಪ್ಪು; ಈಗಲೂ ತಪ್ಪು . ಆ ಕ್ರಮವನ್ನೇ ಈಗ ಎಂ.ಎಫ್ ಹುಸೇನ್ ಅವರಿಗೆ ಮಾಡುತ್ತಿರುವ ಅನ್ಯಾಯಕ್ಕೆ ಸಮರ್ಥನೆಯಾಗಿ ಬಳಸಿಕೋ ಬಾರದು.

ಇನ್ನು ಎರಡನೇ ವಾದ ಮಹಾತ್ಮ ಗಾಂಧಿಯವರದು. ಅವರು 'ಕಣ್ಣಿಗೆ ಕಣ್ಣು' ಅನ್ನೋ ನೀತಿಯಿಂದ ಕೊನೆಗೆ ಇಡೀ ಜಗತ್ತೇ ಕುರುಡಾಗಿಬಿಡುತ್ತೆ ಅಂದರು. ಹೀಗಾಗಿ ಈ ಹಿಂಸಾತ್ಮಕ ದಾಳಿಗಳು ಮತ್ತು ಪ್ರತಿದಾಳಿಗಳು ಕೊನೆಗಾಣಬೇಕಾದ್ದು ಬಹಳ ಮುಖ್ಯ.

ಆದರೆ ಈ ಅಪಾಯಕಾರಿ ಸಂಗತಿಗಳೆಲ್ಲ ಸದ್ಯದಲ್ಲೇ ಕೊನೆಗೊಳ್ಳುತ್ತವೆ ಎಂದು ಹೇಳುವಂಥ ಯಾವ ಲಕ್ಷಣಗಳೂ ಕಾಣ್ತಾ ಇಲ್ಲ. ಎಲ್ಲರ ಮೇಲೂ ಮುಗಿಬೀಳುವ ಇಂಥ ಕುಪಿತ ಜನ ಸಮುದಾಯಕ್ಕೆ 'ಸೆಂಟರ್ ಫಾರ್ ಇನ್‌ಕ್ವೈರಿ' ಎನ್ನುವಂಥ ಸಂಸ್ಥೆಯ ಅಧ್ಯಕ್ಷ ಇನ್ನಯ್ಯ ನರಿಸೆಟ್ಟಿ ಮತ್ತು ಅವರ ಸಹೋದ್ಯೋಗಿಗಳಾದ ಸುಬ್ಬರಾವ್ ಹಾಗೂ ಮಾಜಾ ಲಕ್ಷ್ಮಯ್ಯ (ಅಲಿಯಾಸ್ ಕ್ರಾಂತಿಕಾರ್) ಅವರು ಸೇರಿ ತಂದಿರುವ 'ಕ್ರೆಸೆಂಟ್ ಓವರ್ ದಿ ವರ್ಲ್ಡ್' ಎಂಬ ಪುಸ್ತಕಕ್ಕೆ ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯ ಮುಸ್ಲಿಮರು ಅದರ ವಿರುದ್ಧ ಬೀದಿಗಿಳಿದರು. ಇಲ್ಲಿ ಇನ್ನೊಂದು ತಕರಾರು ನಾನು ಸ್ಪಷ್ಟಪಡಿಸಬೇಕು. ಯಾಕೆಂದರೆ, ಇವರು ನನ್ನ ಸಾಹಿತ್ಯ ಕೃತಿಯೊಂದರ ಕೆಲವು ಭಾಗಗಳನ್ನು ನನ್ನ ಅನುಮತಿಯಿಲ್ಲದೆಯೇ ತಮ್ಮ ಪುಸ್ತಕದಲ್ಲಿ ಬಳಸಿಕೊಂಡಿದ್ದಾರೆ. ಈ ಪುಸ್ತಕದಲ್ಲಿ ಇವರು ಏನನ್ನು ಬರೆದಿದ್ದಾರೆ ಅನ್ನೋದು ನನಗೆ ಇವತ್ತಿನವರೆಗೂ ಗೊತ್ತಿಲ್ಲ. ಅವರಲ್ಲೇನಾದರೂ ಎಲ್ಲವನ್ನೂ ಬೇರೆಲ್ಲಿಂದಲೋ ಎರವಲು ತೆಗೆದುಕೊಂಡು

ಯಥಾವತ್ತಾಗಿ ಪ್ರಕಟಿಸಿದ್ದಾರಾ ಅಥವಾ ಏನನ್ನಾದರೂ ತಿರುಚಿದ್ದಾರಾ— ಹಾಗೆಯೇ, ಸಂಪಾದಕರು ಅದನ್ನೆಲ್ಲ ಹೇಗೆ ಅದರಲ್ಲಿ ಅಳವಡಿಸಿದ್ದಾರೆ ಅನ್ನೋದು ಗೊತ್ತಾಗಿಲ್ಲ. ಇದೊಂದು ಕೆಟ್ಟ ಬೆಳವಣಿಗೆ. ಇದನ್ನು ನಾನು ಖಂಡಿಸುತ್ತೇನೆ. ಆದರೆ ಜನರು ಹೀಗೆ ಬೀದಿಗಿಳಿಯಲು ಮತ್ತು ಪುಸ್ತಕದ ಪ್ರತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಅದರ ಸಂಪಾದಕನನ್ನು ಬಂಧಿಸಲು ಅವಕಾಶ ಕೊಟ್ಟ ಸ್ಥಳೀಯ ಪೊಲೀಸರ ವರ್ತನೆ ಇನ್ನೂ ಕೆಟ್ಟದ್ದು. ಇಂಡಿಯಾದಲ್ಲಿ ಇವತ್ತು ಪದೇಪದೇ ಕಂಡುಬರುತ್ತಿರುವಂಥ ಬೆಳವಣಿಗೆಯಾಗಿದೆ. ಸಂಸ್ಕೃತಿಯ ವಿಷಯದಲ್ಲಿ ಎಲ್ಲವನ್ನೂ ಸಮೂಹವನ್ನೇ ಆಳ್ತಾ ಇದೆ. ಅಸ್ಮಿತೆಯ ಚಟದ ರಾಜಕಾರಣ ರಾಷ್ಟ್ರೀಯ ಮಟ್ಟದ ವಾಗ್ವಾದಗಳ ಮೇಲೆಲ್ಲ ಯಜಮಾನಿಕೆ ಸಾಧಿಸುತ್ತಿದೆ.

ಈ ವಿಷಯದಲ್ಲಿ ನಾನು, ಅಮರ್ತ್ಯ ಸೇನ್ ಅವರ ಚಿಂತನೆಯ ಕ್ರಮವನ್ನು ಬೆಂಬಲಿಸ್ತೀನಿ. ನಾವೆಲ್ಲರೂ ನಮ್ಮನ್ನು 'ನಾವು ಹಿಂದೂಗಳು' ಅಥವಾ, 'ನಾವು ಮುಸ್ಲಿಮರು' ಎಂದೋ ಗುರುತಿಸಿಕೊಂಡರೆ ಸಮುದಾಯಗಳ ನಡುವೆ ಇದು ಅಪನಂಬಿಕೆಯನ್ನು ಬೆಳೆಯೋ ಸಂಭವ ಹೆಚ್ಚಾಗುತ್ತೆ. ಆದರೆ ವಾಸ್ತವದಲ್ಲಿ ಅಸ್ಮಿತೆ ಅನ್ನೋದು ಏಕವಲ್ಲ; ಅದು ಅನೇಕ. ಈ ಸಂಗತಿ ನಮಗೆಲ್ಲಾ ಗೊತ್ತಿದೆ. ನಮ್ಮಲ್ಲಿ ಯಾರೊಬ್ಬರೂ, ಎಂತಹ ಸಂದರ್ಭದಲ್ಲೂ ಕೇವಲ ಹಿಂದೂ ಅಷ್ಟೇ ಅಲ್ಲ. ಅವನು ಒಬ್ಬ ಬೊಕ್ಕತಲೆಯ ವ್ಯಕ್ತಿ, ಒಬ್ಬ ತಂದೆ, ಒಬ್ಬ ರೈಲ್ವೆ ಉದ್ಯೋಗಿ, ಒಬ್ಬ ಕ್ರಿಕೆಟ್ ಅಭಿಮಾನಿ, ಒಬ್ಬ ಅಸ್ತಮಾ ರೋಗಿ, ಒಬ್ಬ ಚೆಸ್ ಆಟಗಾರ, ಒಬ್ಬ ಸಿನಿಮಾ ಅಭಿಮಾನಿ ಹೀಗೆ ಏನೆಲ್ಲಾ ಆಗಿರುತ್ತಾನೆ. ಅಸ್ಮಿತೆ ಅನ್ನೋದೇ ಹೀಗೆ- ಅದು ಅನೇಕ. ನಮ್ಮೆಲ್ಲರಿಗೂ ನಮ್ಮ ನಮ್ಮ ಅಸ್ಮಿತೆಯ ಬಗ್ಗೆ ಒಂದು ಅನನ್ಯವಾದ ಪ್ರಜ್ಞೆ ಇರುತ್ತೆ. ಹೀಗಾಗಿಯೇ ನಾವು, ನಮ್ಮ ಮಕ್ಕಳೊಂದಿಗೆ ವರ್ತಿಸುವಂತೆಯೇ ನಮ್ಮ ಬಾಸ್‌ಗಳ ಜತೆ ವರ್ತಿಸೋದಿಲ್ಲ. ಇದೇ ರೀತಿಯಲ್ಲಿ ನಾವು ಪ್ರಿಯತಮ/ಪ್ರಿಯತಮೆಯೊಂದಿಗೆ ನಡೆದುಕೊಳ್ಳುವಂತೆ ಗೆಳೆಯ/ಗೆಳತಿಯರ ಜತೆ ನಡೆದುಕೊಳ್ಳೋದಿಲ್ಲ. ಅಂದರೆ, ನಮ್ಮ ವರ್ತನೆ ನಾವಿರುವ ಸಂದರ್ಭಕ್ಕೆ ತಕ್ಕಂತೆ ಬೇರೆಬೇರೆಯಾಗಿರುತ್ತೆ. ಹೀಗೆ ನಾವು ನಮ್ಮ ಅಸ್ಮಿತೆಯನ್ನು ಕರಾರುವಾಕ್ಕಾಗಿ ವ್ಯಾಖ್ಯಾನಿಸಿಕೊಂಡ ತಕ್ಷಣ ಮನುಷ್ಯರಲ್ಲೆಲ್ಲ ಸಾಮಾನ್ಯವಾಗಿರುವ ಸಂಗತಿಗಳು ನಮ್ಮ ಕಣ್ಣಿಗೆ ಬೀಳ್ತಾ ಹೋಗುತ್ತೆ. ಒಬ್ಬನ ಬೋಳುತಲೆ, ಪಿತೃತ್ವ/ಮಾತೃತ್ವ, ಉದ್ಯೋಗ, ಆಟೋಟ, ಕಾಯಿಲೆ-ಕಸಾಲೆ, ಹವ್ಯಾಸಗಳು, ಇಷ್ಟದ ಸಂಗತಿಗಳು ಇವೆಲ್ಲಾ ಇದರಲ್ಲಿ ಬರುತ್ತೆ. ನಮ್ಮೆಲ್ಲರಲ್ಲೂ ಕಂಡುಬರುವ ಇಷ್ಟೊಂದು ಅಂಶಗಳು ಇವೆಯಲ್ಲ, ಇವು ನಿಜಕ್ಕೂ ನಮ್ಮನ್ನು ಒಡೆಯುವಂತಹ/ಬೇರೆಬೇರೆ ಮಾಡುವಂತಹ ಅಂಶಗಳಿಗಿಂತ ದೊಡ್ಡವು. ಆದರೂ ನಾವು ಇಂಥ ಉದಾತ್ತ ಅಂಶಗಳನ್ನೆಲ್ಲ ಮರೀತಾ ಇರೋ ಅಪಾಯದಲ್ಲಿದ್ದೀವಿ. ಆದರೆ ಇದಕ್ಕೆ ಬದಲಾಗಿ ನಮ್ಮನ್ನು ನಾವು ಚಿಕ್ಕಚಿಕ್ಕ ಆವರಣದೊಳಗೆ ಬಂಧಿಸಿಕೊಂಡು, ಅದಕ್ಕೇ ಬೇಲಿ ಹಾಕ್ಕೊಳ್ತಾ ಇದೀವಿ. ಇಷ್ಟೇ ಅಲ್ಲ, ಹೊರಗಡೆ ಇರುವವರೆಲ್ಲ ನಮ್ಮನ್ನು ಮುಗಿಸಿ ಹಾಕ್ತಾರೆ ಅಂತಾ ಚಡಪಡಿಸ್ತೀವಿ.

ಜನರೆಲ್ಲ ಹೀಗೆ ಧರ್ಮ, ಪ್ರಾದೇಶಿಕತೆ, ಭಾಷೆಯ ಹೆಸರಿನಲ್ಲೆಲ್ಲ ಕೂಪಮಂಡೂಕಗಳಾದಾಗ ಅದು ಅಪನಂಬಿಕೆಯನ್ನು ಬೆಳೆಸುತ್ತೆ. ಪರಸ್ಪರ ಸಹಕಾರದ ಗುಣ ಮಾಯವಾಗುತ್ತೆ. ಸೋವಿಯತ್ ಒಕ್ಕೂಟವೆಂಬ ಉಕ್ಕಿನ ಪರದೆ ಮತ್ತು ಬರ್ಲಿನ್ ಗೋಡೆಗಳೆರಡೂ ಕುಸಿದ ಮೇಲೆ ನಾವು ಈ ಪ್ರವೃತ್ತಿಯನ್ನು ಬಹಳ ಬೃಹತ್ ಸ್ವರೂಪದಲ್ಲಿ ನೋಡ್ತಾ ಇದೀವಿ. ಹಠಾತ್ತಾಗಿ ಸಿಕ್ಕಿದ ಸ್ವಾತಂತ್ರ್ಯವನ್ನು ಕಂಡು ಎಚ್ಚರಗೊಂಡ ಯೂರೋಪಿಯನ್ನರು ತಾವು ಸುರಕ್ಷಿತವಾಗಿ ಅವಿತುಕೊಳ್ಳಲು ಚಿಕ್ಕಚಿಕ್ಕ ಉಕ್ಕಿನ ಪರದೆಗಳನ್ನು, ಗೋಡೆಗಳನ್ನು ಸೃಷ್ಟಿಸಿದರು. ಆದರೆ ಅಲ್ಲೂ ಕೂಡ ಒಂದು ಹಂತದಲ್ಲಿ ಸಂಘರ್ಷದ ಮಹಾಸ್ಫೋಟವೇ ಆಯ್ತು. ಸೆರ್ಬಿಯನ್ನರೆಲ್ಲ ಒಟ್ಟಾಗಿ ಕ್ರೊವೇಷಿಯನ್ನರು ಮತ್ತು ಬೋಸ್ನಿಯನ್ನರ ವಿರುದ್ಧ ಮುಗಿಬಿದ್ದರು. ಇದರಿಂದ 'the idea of india'ದಲ್ಲಿ ಕಹಿಯಾದ ಫಲಿತಾಂಶವೇ ಬಂತು. ಸುನೀಲ್ ಖಿಲ್ನಾನಿ ಹೇಳುವಂತೆ,

ಇಂಥ ಸೈದ್ಧಾಂತಿಕ ಪಟಗಳೇ ಇವತ್ತಿನ ದೊಡ್ಡ ಗಂಡಾಂತರವಾಗಿವೆ. ಅದರಲ್ಲೂ ಅಸಹಿಷ್ಣುತೆಯನ್ನು ಬೆಳೆಸಿಕೊಂಡಿರುವವರು ಕಲೆ ಮತ್ತು ಸಂಸ್ಕೃತಿ ಕ್ಷೇತ್ರಗಳನ್ನ ತಮ್ಮ ಮೊದಲ ಯುದ್ಧರಂಗವನ್ನಾಗಿಸಿಕೊಂಡಿದ್ದಾರೆ.

ನಮ್ಮ ಕಾಲಮಾನದ ಜಗತ್ತಿನ ಇತಿಹಾಸ ನಮಗೆ ಗೊತ್ತಿದೆ. ಸರ್ವಾಧಿಕಾರದ ದಾಳಿಗಳಿಗೆ ನಮ್ಮ ಕಲಾವಿದರು ಮತ್ತು ಬುದ್ಧಿಜೀವಿಗಳು ಹೇಗೆಲ್ಲಾ ಬಲಿಯಾಗಿದ್ದಾರೆ ಎನ್ನುವುದೂ ನಮಗೆ ಗೊತ್ತು. ನಾವು ಸ್ವತಂತ್ರ ಮನಸ್ಸು, ನಿರಂಕುಶಮತೀಯ ಪ್ರತಿಭಾ ವಿಲಾಸ ಕಲಾವಿದನೊಬ್ಬನ ಒಳನೋಟಗಳನ್ನೆಲ್ಲ ಅರ್ಥ ಮಾಡಿಕೊಳ್ಳಬಲ್ಲೆವು. ಹಾಗೆಯೇ ಪತ್ರಕರ್ತನೊಬ್ಬನಿಗೆ ಚೀನಾದ ಪ್ರಭುಗಳು ಮತ್ತು ಆಯತೊಲ್ಲಾ ಖೊಮೇನಿಗಳು ಹಾಗೂ ಆದರ್ಶವಾದಿಗಳು ಮತ್ತು ಅನಾಗರಿಕರು ಒಡ್ಡುವ ಬೆದರಿಕೆಯೂ ಗೊತ್ತಾಗುತ್ತದೆ. ಅನೇಕ ದೇಶಗಳಲ್ಲಿ ಒಬ್ಬ ಲೇಖಕ, ಒಬ್ಬ ಕಲಾವಿದ, ಒಬ್ಬ ಚಿತ್ರನಟನನ್ನು ಹೇಗೆ ಪದೇಪದೇ ಗೋಳು ಹೊಯ್ದುಕೊಳ್ಳಲಾಗುತ್ತದೆ ಎನ್ನುವುದನ್ನು ನಾವು ನೋಡಿದ್ದೇವೆ. ಸರಕಾರದ ಕಡೆಯವರೋ, ಇನ್ನಾರೋ ಒಬ್ಬರು ಇಂಥ ಪ್ರತಿಭಾವಂತರ ಮನೆ ಬಾಗಿಲಲ್ಲಿ ಬಂದು ನಿಂತು, ಕದ ತಟ್ಟುತ್ತಿರುತ್ತಾರೆ. ಖ್ಯಾತ ಲೇಖಕ ಜಾರ್ಜ್ ಆರ್ವೆಲ್ ಇದನ್ನು Thought Crime ಅಂತಾನೆ. ಭಾರತದಲ್ಲಿ ನಾವೇನೂ ಸದ್ಯಕ್ಕೆ ಇಂಥ ಸರ್ವಾಧಿಕಾರದ ಅತಿರೇಕಗಳನ್ನೇನೂ ಕಾಣ್ತಾ ಇಲ್ಲ. ಆದರೆ ನಾವು ನೋಡುತ್ತಿರುವಂತೆ ಇಲ್ಲಿ ಸರಕಾರ ಈ ವಿಚಾರಕ್ಕೆ ದುರ್ಬಲವಾಗಿದೆ. ಆದರೆ ಒಂದಂತೂ ನಿಜ. ಭಾರತದ ಜನಸಮುದಾಯಗಳಲ್ಲಿ ಈಗ ಸರ್ವಾಧಿಕಾರದ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇಲ್ಲೂ ನಮ ಕಲೆ ಮತ್ತು ಸಂಸ್ಕೃತಿಗಳೇ ಇಂಥವರ ದಾಳಿಗೆ ತುತ್ತಾಗುತ್ತಿವೆ.

ಕಲಾವಿದರ ವಿರುದ್ಧ ಹೀಗೆ ಜನರನ್ನು ಎತ್ತಿಕಟ್ಟೋದು ಯಾಕೆ ಇಷ್ಟೊಂದು ಸುಲಭ? ಕಲಾವಿದನ ಕಲಾಕೃತಿಗಳಿಗೆ ತೋರಿಸುವ ಹಿಂಸಾತ್ಮಕ ಪ್ರತಿಕ್ರಿಯೆಗಳನ್ನು ಚರ್ಚಿಸಿ ಖಂಡಿಸುವ ಬದಲು ಕಲಾವಿದನೇ ತಪ್ಪು ಮಾಡಿದ್ದಾನೆ, ಜನರನ್ನು ಪ್ರಚೋದಿಸಿದ್ದಾನೆ ಅಂತಾ ಆರೋಪ ಮಾಡೋದು ಯಾಕೆ ಇಷ್ಟೊಂದು ಸಲೀಸು? ಒಂದು ಕಲಾಕೃತಿ ಅಥವಾ ಪೇಂಟಿಂಗ್ ಎಂದರೆ, ಅದು ಕಲಾವಿದ ಸೃಷ್ಟಿಸಿಕೊಂಡ ಅವಕಾಶ(Space)ದಲ್ಲಿ ಇರುವ ಒಂದು ವಸ್ತು. ಆ ಕಲಾಕೃತಿ ನಿಮಗೆ ಇಷ್ಟವಿಲ್ಲ ಅಂತಾದರೆ, ನೀವು ಅದನ್ನು ನೋಡಬೇಕಾಗಿಲ್ಲ. ಇದನ್ನು ಬಿಟ್ಟು ಆ ಕಲಾಕೃತಿ ಏನನ್ನೋ ಭೂಮಿಯ ಎಲ್ಲೋ ಪ್ರಚೋದಿಸುತ್ತದೆ ಅನ್ನುವುದು ಅಸಂಬದ್ಧ ಮತ್ತು ನಂಬಲು ಯೋಗ್ಯವಾದ ಸಂಗತಿಯಲ್ಲ. ಯಾವುದನ್ನು ನಂಬಬಾರದೋ ಅದನ್ನೇ ಹೆಚ್ಚು ಜನ ನಂಬುತ್ತಿದ್ದಾರೆ. ಪುಸ್ತಕದ ವಿಷಯದಲ್ಲೂ ಹೀಗೆಯೇ. ನಿಮಗೆ ಒಂದು ಪುಸ್ತಕ ಹಿಡಿಸಲಿಲ್ಲ ಅಂದರೆ ಆಗ ನೀವು ಆ ಪುಸ್ತಕವನ್ನು ಖರೀದಿಸದೆ ಇದ್ದರಾಯ್ತು. ಅಥವಾ ಆ ಪುಸ್ತಕ ನಿಮಗೆ ಸಿಕ್ಕರೂ ಅದನ್ನು ಓದದೆ ಇದ್ದರಾಯ್ತು. ನೀವು ತೆರೆದೇಬಿಟ್ಟಿರಿ ಎಂದಿಟ್ಟುಕೊಳ್ಳಿ , ಆಗ ಕೂಡ ಅದನ್ನು ಮುಚ್ಚಿಡಬಹುದು. ಆಗ ಅದು ನಿಮ್ಮ ಮನ ನೋಯಿಸುವ ಪ್ರಮೇಯ ಉದ್ಭವಿಸೋದಿಲ್ಲ. ಹೀಗಾಗಿಯೇ ನಮ್ಮ ಪುಸ್ತಕದ ಅಂಗಡಿಗಳಲ್ಲಿ ನಾನಾ ನಮೂನೆಯ ಲೇಖಕರ ಪುಸ್ತಕಗಳನ್ನು ಕಾಣಬಹುದು. ಆದರೂ, ಓದದೇ ಇರುವಂಥ ಪುಸ್ತಕ ಪ್ರಚೋದಿಸುವ ನೆಪ ಹೇಳಿಕೊಂಡು ಗಲಾಟೆ ಆಗುತ್ತೆ. ಯಾರೂ ನೋಡದ ಸಿನಿಮಾ ಮತ್ತು ಯಾರೂ ಕೇಳದ ಹಾಡಿನ ವಿಷಯದಲ್ಲೂ ಹೀಗೆಯೇ ಗಲಾಟೆಗಳು ಆಗಿಬಿಡುತ್ತೆ.

ಇದಕ್ಕೆಲ್ಲ ಉತ್ತರ ಏನು? ಈ ಕಲೆ ಅನ್ನೋದು Soft target. ಕಲೆಯನ್ನು ನೆಚ್ಚಿಕೊಂಡಿರುವವರ ಹಿಂದೆ ಸೇನಾಬಲವೇನೂ ಇಲ್ಲ. ಹೀಗಾಗಿ ಅವು ದಾಳಿಗಳಿಗೆ ಒಳಗಾಗುತ್ತವೆ. ಕಲಾಕೃತಿಗಳನ್ನು ಧ್ವಂ

ಮಾಡಬಹುದು, ಪುಸ್ತಕಗಳನ್ನು ಬೆಂಕಿ ಹಾಕಿ ಸುಡಬಹುದು, ಗ್ರಂಥಾಲಯಗಳನ್ನು ನಾಶ ಮಾಡಬಹುದು, ಚಿತ್ರಮಂದಿರಗಳಿಗೆ ನುಗ್ಗಿ ದಾಂಧಲೆ ಮಾಡಬಹುದು. ಸಾಮಾನ್ಯವಾಗಿ ಹೀಗೆಯೇ ಆಗೋದು. ಇದು ನನ್ನ ಉತ್ತರದ ಒಂದು ಭಾಗ. ಈ ಉತ್ತರದ ಇನ್ನೊಂದು ಕಷ್ಟಕರವಾದ ಭಾಗ, ಅದ್ಯಾಕೋ ಏನೋ ಭಾರತದಲ್ಲಿ ಇತರೆಡೆಯಲ್ಲೂ ಕಲಾವಿದರನ್ನು ಅನುಮಾನದಿಂದ ನೋಡ್ತಾರೆ. ಕಲಾವಿದರು ಅಂದರೆ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ದೊಡ್ಡ ಜನ ಅಂತಾ ತಿಳಕೊಂಡಿದ್ದಾರೆ. ಇದೊಂದು ವಿಚಿತ್ರ ತಪ್ಪು ಕಲ್ಪನೆ. ಆದರೆ ವಾಸ್ತವವಾಗಿ ಪರಿಸ್ಥಿತಿ ಬೇರೆಯೇ ಇದೆ. ತನ್ನ ಇಡೀ ಜೀವಮಾನವನ್ನು ಕಲೆಗಾಗಿ ತೇಯ್ದುಕೊಂಡ ಕಲಾವಿದನಿಗೆ ಕೆಟ್ಟ ಸಂಬಳ ಸಿಗುತ್ತದೆ, ಎಷ್ಟು ಕಾಲವಾದರೂ ಅವರಿಗೆ ಸರಿಯಾದ ಮನ್ನಣೆಯೇ ಸಿಗೋದಿಲ್ಲ. ಸಾಮಾನ್ಯವಾಗಿ ಹೆಚ್ಚಿನ ಸಾಹಿತಿಗಳು, ಚಿತ್ರ ಕಲಾವಿದರು, ಸಂಗೀತಗಾರರು ಮತ್ತು ನಟರೆಲ್ಲ ತಮ್ಮ ಬದುಕಿಗಾಗಿ ಹೋರಾಡುತ್ತಲೇ ಇರ್ತಾರೆ. ಸಾಮಾನ್ಯವಾಗಿ ತುಂಬಾ ಹೆಸರು ಮಾಡಿರುವ, ಕಲಾವಿದರಿಗೆ ಕೂಡ ಎಷ್ಟೋ ವರ್ಷಗಳ ಶ್ರಮದ ನಂತರ ಸಾಲಗಳು ಸಂಕಷ್ಟಗಳು ಇರುತ್ತವೆ.

ಕಲೆಯನ್ನು ಒಂದು ವೃತ್ತಿಯಾಗಿ/ಕಸುಬಾಗಿ ನೋಡಿದರೆ ಅದು ವೈದ್ಯಕೀಯ ಇಲ್ಲವೇ ಉಳಿದ ಕಸುಬುಗಳಂತೆಯೇ ಇರುವ ಒಂದು ಕಸುಬಷ್ಟೇ. ಆದರೆ ಸಾರ್ವಜನಿಕರು ಕಲೆ ಕೂಡ ಒಂದು ಕಸುಬು ಅನ್ನೋದನ್ನು ವ್ಯಾಪಕವಾಗಿ ಒಪ್ಪಿಕೊಂಡಿಲ್ಲ. ಇದರಿಂದಾಗಿ ಏನಾಗಿದೆ ಎಂದರೆ ಕಲಾವಿದರನ್ನು ಬೇಜವಾಬ್ದಾರಿಯ ಜನ, ಭಾವೋದ್ರೇಕವಾದಿಗಳು, ನೀತಿಗೆಟ್ಟ ಲೋಲುಪರು, ಪುರಾತನವಾದ ಪವಿತ್ರ ಕಲ್ಪನೆಗಳಿಗೆ ವಿರುದ್ಧವಾಗಿ ಹೊಸ ಸೆಲೆಬ್ರಿಟಿಗಳನ್ನು ಸೃಷ್ಟಿಸುವ ದೈವದ್ರೋಹಿಗಳು ಎಂದೆಲ್ಲ ಬಿಂಬಿಸುವುದು ಸಲೀಸಾಗಿದೆ. ಹೀಗಿದ್ದೂ ಕಲೆಗೆ ಅದರದೇ ಆದ ಅನುಯಾಯಿಗಳಿದ್ದಾರೆ. ಇದಕ್ಕಾಗಿ ನಾವು ಆಭಾರಿಗಳಾಗಿರಲೇಬೇಕು. ಪುಸ್ತಕ, ಸಂಗೀತ, ಕಲಾಪ್ರೇಮಿಗಳಿಗೆ ಮತ್ತು ಸಿನಿಮಾಪ್ರೇಮಿಗಳಿಗೆ ಒಂದು ಕಲಾಕೃತಿಯ ಹಿಂದಿರುವ ಶ್ರಮ, ಶಿಸ್ತು, ಶ್ರದ್ಧೆ, ಪ್ರಾಮಾಣಿಕತೆ, ವಿನಯ ಮತ್ತು ಪ್ರತಿಭೆಗಳೆಲ್ಲ ಅರ್ಥವಾಗುತ್ತವೆ. ಆದರೆ ಇಂಥವರ ಸಂಖ್ಯೆ ಕಮ್ಮಿ. ಸಾಮಾನ್ಯವಾಗಿ ನಮ್ಮ ಸಮಾಜದಲ್ಲಿ ಹೆಚ್ಚಿನ ಜನರು, ಕಲಾವಿದರೆಂದರೆ ಗಾಂಭೀರ್ಯವಿಲ್ಲದ ಜನ ಅಂತಾನೇ ತಿಳಿದುಕೊಂಡಿದ್ದಾರೆ. ನನ್ನ ವೈಯಕ್ತಿಕ ಬದುಕಿನಲ್ಲೂ ಇಂಥ ಅನುಭವವಾಗಿದೆ. ನಮ್ಮ ತಂದೆಯ ಹತ್ತಿರ, 'ನಾನು ಜೀವನದಲ್ಲಿ ಬರಹಗಾರನಾಗಬೇಕು ಅಂತಾ ತೀರ್ಮಾನಿಸಿದ್ದೀನಿ' ಎಂದು ಹೇಳಿದಾಗ ನನಗೆ ಓಗಾಗಿತ್ತು. ನಮ್ಮ ತಂದೆ ಕೂಡಲೇ, 'ಹಾಂ....! ಬರಹಗಾರನಾಗ್ತೀಯಾ? ಹಾಗಾದರೆ ನನ್ನ ಗೆಳೆಯರೆಲ್ಲ ನಿನ್ನ ಬಗ್ಗೆ ಕೇಳಿದರೆ ಅವರಿಗೆಲ್ಲ ನಾನೇನಂತಾ ಹೇಳಲಿ?' ಎಂದು ಪ್ರಶ್ನಿಸಿದ್ದರು. (ಆದರೆ ಬಹಳ ವರ್ಷಗಳ ನಂತರ ಅವರ ಗೆಳೆಯರೆಲ್ಲ ಅಭಿನಂದಿಸಲೆಂದು ಫೋನಾಯಿಸಲು ಶುರು ಮಾಡಿದ ಮೇಲೆ ನಮ್ಮ ತಂದೆ ತಮ್ಮ ಮನಸ್ಸನ್ನು ಬದಲಿಸಿದರು).

ಬರವಣಿಗೆ ಇರಲಿ, ಪೇಂಟಿಂಗ್ ಇರಲಿ, ಅಭಿನಯವಿರಲಿ- ಇವ್ಯಾವುವೂ ಸೂಕ್ತವಾದ ಉದ್ಯೋಗವಲ್ಲ. ಇಂಥ ವೃತ್ತಿಗಳನ್ನು ನೆಚ್ಚಿಕೊಳ್ಳುವವರನ್ನೆಲ್ಲ ಅಹಂಕಾರಿಗಳು, ಸ್ತ್ರೀಲೋಲರು ಮತ್ತು ಕುಡುಕರು ಅಂತೆಲ್ಲ ಬಿಂಬಿಸಲಾಗುತ್ತಿದೆ. ಈ ಆರೋಪಗಳಿಗೆ ಗುರಿಯಾಗುವಂತೆ ಕೆಲವು ಕಲಾವಿದರು ಇದ್ದಾರೆ. ಕೋಮುವಾದಿಗಳ ದಾಳಿಗೆ ತುತ್ತಾದ ಎಂ.ಎಫ್. ಹುಸೇನ್ ಮತ್ತು ಇನ್ನಿತರ ಕಲಾವಿದರ ವಿಷಯದಲ್ಲಿ ಕಾಣುವ ಸಾಮಾನ್ಯವಾದ ಒಂದು ಅಂಶವಿದೆ. ಅದೇನೆಂದರೆ, ಕಲಾವಿದರ ಮೇಲೆ ದಾಳಿ ಮಾಡಿದ ಇವರ್‍ಯಾರೂ ಆ ಕಲಾವಿದರ ಕಲಾಕೃತಿಗಳನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಹುಸೇನ್ ಅವರು ನಗ್ನಚಿತ್ರಗಳನ್ನ ಬರೆದಿದ್ದಾರೆ ಅನ್ನೋದು ಈ ಕೋಮುವಾದಿಗಳು ಮಾಡ್ತಾ ಇರೋ

ಆರೋಪವಾಗಿದೆ. ಹಾಗೆ ನೋಡಿದರೆ ಹುಸೇನ್ ಅವರು ನಗ್ನಸ್ಥಿತಿಯಲ್ಲಿರುವ ಚಿತ್ರಗಳನ್ನೇ ಮತ್ತು ಕುದುರೆಗಳನ್ನೇ ತಮ್ಮ ಜೀವನದುದ್ದಕ್ಕೂ ಚಿತ್ರಿಸುತ್ತಾ ಬಂದಿದ್ದಾರೆ. ಅವರ ವಿರುದ್ಧ ನಗ್ನತೆಯ ಆರೋಪ ಹೊರಿಸುವವರು ನಗ್ನತೆಯು ಕಲೆಯ ಇತಿಹಾಸದುದ್ದಕ್ಕೂ ವಹಿಸುತ್ತ ಬಂದಿರೋ ಪ್ರಮುಖ ಪಾತ್ರವನ್ನೇ ಮರೆತಿದ್ದಾರೆ ಅಥವಾ ಅದನ್ನು ಬೇಕೆಂದೇ ಮೂಲೆಗುಂಪು ಮಾಡಿದ್ದಾರೆ. ಕಲೆಯು ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎನ್ನುವುದನ್ನೆಲ್ಲ ನಿರ್ಧರಿಸುವಂಥ ಸಂಕುಚಿತ ರಾಷ್ಟ್ರೀಯವಾದಿ ವ್ಯಾಖ್ಯಾನಗಳನ್ನು ಒಪ್ಪಿಕೊಳ್ಳಬೇಕು ಅನ್ನೋ ಒತ್ತಾಯ ಇಲ್ಲಿದೆ.

ಒಬ್ಬ ವ್ಯಕ್ತಿಯಾಗಿಯೂ ಕಲಾವಿದರನ್ನು ಯಾರೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಅವರನ್ನು ದುರುದ್ದೇಶ ಉಳ್ಳವರೆಂದೆಲ್ಲ ಬಿಂಬಿಸುತ್ತ, ಅವರ ಉದ್ದೇಶಗಳನ್ನೇ ಪ್ರಶ್ನಿಸಲಾಗುತ್ತಿದೆ. ಅವರ ಕಲಾಕೃತಿಗಳ ವಿರುದ್ಧ ನಿಂದನೆಯ ಸುರಿಮಳೆ ದಾಖಲಾಗುತ್ತಿದೆ. ಕಲಾವಿದರ ವೃತ್ತಿಜೀವನ ಎಷ್ಟೊಂದು ವೈಶಿಷ್ಟ್ಯಪೂರ್ಣವಾಗಿದೆ, ಎಷ್ಟೊಂದು ದೊಡ್ಡ ಮನ್ನಣೆಗಳು ಸಿಕ್ಕಿದೆ, ಅವರ ಸಮಗ್ರ ಕೃತಿಗಳು ಎಷ್ಟೊಂದು ಮುಖ್ಯ ಅನ್ನೋದೆಲ್ಲ ಬೇಕಾಗಿಲ್ಲ. ಒಬ್ಬ ಕಲಾವಿದರ ಮೇಲೆ ಒಂದು ಸಲ ಇವರ ಕಾಕದೃಷ್ಟಿ ಬಿದ್ದರೆ ಸಾಕು, ಆ ಕಲಾವಿದರ ಕೃತಿಗಳೆಲ್ಲ ಕಾಲಕಸಕ್ಕಿಂತಲೂ ಕಡೆಯಾಗುತ್ತವೆ. ನೀವು ನಿಜವಾಗಿಯೂ ಯಾವುದರಲ್ಲಿ ತೊಡಗಿಕೊಂಡಿದ್ದೀರೋ ಅಥವಾ ನಿಮಗೆ ಯಾವುದು ಅರ್ಥವಾಗುವುದಿಲ್ಲವೋ ಅದಕ್ಕೆ ಹೀಗೆ ಮಾಡಿಬಿಡುವುದು ತುಂಬಾ ಸುಲಭ. ಒಬ್ಬ ಕಲಾವಿದ ಇಷ್ಟವಾಗಲಿಲ್ಲವೆಂದರೆ ಅವನನ್ನು ಅಪ್ರಯೋಜಕ ಎಂದು ಘೋಷಿಸಿ; ಅಂಥವರ ಕಲಾಕೃತಿಗಳನ್ನೂ ಅರ್ಥಹೀನವೆಂದು ಸಾಧಿಸಿ; ನೀವು ಹೀಗೆ ಮಾಡ್ತಾ ಹೋದರೆ ನೀವು ಕೈಗೊಳ್ಳುವ ದಾಳಿಗಳಿಗೆ ಅದು ಸಮರ್ಥನೆಯಾಗುತ್ತೆ. ಅಂದಮಾತ್ರಕ್ಕೆ ಇದೆಲ್ಲಾ ಕೇವಲ ಇಂಡಿಯಾದಲ್ಲಿ ಮಾತ್ರ ನಡೆಯುವಂಥ ಕೆಲಸ ಅಷ್ಟೇ ಅಲ್ಲ, ಕಮ್ಯುನಿಸ್ಟರು ಲೇಖಕರನ್ನಂತೂ ಸದಾ ಗೋಳು ಹೊಯ್ದುಕೊಂಡಿದ್ದಾರೆ; ಯೂರೋಪಿನಲ್ಲಿ ತಲೆಯೆತ್ತಿದ ಮೂಲಭೂತವಾದ ಕೂಡ ಇದನ್ನೇ ಮಾಡಿದೆ. ಆದರೆ ನಾನು ಹುಟ್ಟಿ ಬೆಳೆದ ಈ ದೇಶದಲ್ಲಿ, ಕಾವ್ಯವನ್ನು ಅಗಾಧವಾಗಿ ಪ್ರೀತಿಸುವ ಭಾರತದಲ್ಲಿ ಕಲೆಗೆ ವಿರುದ್ಧವಾದ ನಿಲುವು ಯಾವ ಎಗ್ಗುಸಿಗ್ಗೂ ಇಲ್ಲದೆ ಇಷ್ಟೊಂದು ಅಪಾಯಕಾರಿಯಾಗಿ ಬೆಳೆಯುತ್ತಾ ಇರೋದು ನಿಜಕ್ಕೂ ದುಃಖದ ಸಂಗತಿ.

ಇದರಿಂದೆಲ್ಲ ಒಂದು ಸಂಗತಿ ಸ್ಪಷ್ಟವಾಗುತ್ತೆ. ಸರಕಾರ ತನ್ನ ಕಲೆಯನ್ನು ರಕ್ಷಿಸುವ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಎಡವಿದೆ. ಅಂದಮಾತ್ರಕ್ಕೆ ಇದು ಬರೀ ಸರಕಾರದ ವೈಫಲ್ಯ ಅಷ್ಟೇ ಅಲ್ಲ. ನಮ್ಮ ಜನರಿಗೆ ಕೂಡ ನಾವು ಮತ್ತೆ ಯೋಚಿಸುವಂತೆ ಹೇಳಬೇಕು. ಇಷ್ಟೇ ಅಲ್ಲ , ಕಲಾವಿದರನ್ನು ಜನರ ವೈರಿಗಳು ಎಂದು ಬಿಂಬಿಸುವ ಸರಳೀಕರಣಗಳನ್ನು ನಿರಾಕರಿಸುವಂತೆ ಹೇಳಬೇಕು. ಕಲೆ ಜನರ ಶತ್ರುವಲ್ಲ. ಅದು ಭವಿಷ್ಯದ ಜನಾಂಗಗಳಿಗೆ ನಮ್ಮ ಕಾಲ ಹೇಗಿತ್ತು ಅನ್ನೋದನ್ನು ಹೇಳುತ್ತೆ. ಒಬ್ಬ ಒಳ್ಳೆಯ ಕಲಾವಿದ ಯಾವತ್ತೂ ಜನರ ರಾಯಭಾರಿ. ಆತ ಭವಿಷ್ಯತ್ತಿನ ರಾಯಭಾರಿ.

ಚುಟುಕಾಗಿ ಹೇಳೋದಾದರೆ, ನಾವೆಲ್ಲರೂ ಕಲೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಜತೆಗೆ ಈ ಕಲೆಯನ್ನು ಸೃಷ್ಟಿಸುವ ಕಲಾವಿದರನ್ನು ಗೌರವಿಸಬೇಕು. ಈ ತಿಳಿವಳಿಕೆ ಬೆಳೆಯಬೇಕಾದರೆ ಕಲೆಯು ಯಾವಾಗಲೂ ಈ ಜಗತ್ತನ್ನು ಹಿಗ್ಗಿಸಲು, ಅದನ್ನು ಇನ್ನಷ್ಟು ತೆರೆಯಲು ನೋಡುತ್ತಿರುತ್ತದೆ ಎನ್ನುವ ತತ್ವವೇ ಕೇಂದ್ರಬಿಂದು. ಕಲಾವಿದರ ವ್ಯಕ್ತಿಗತ ಒಳನೋಟಗಳಿಗೆ ತಕ್ಕಂತೆ ಇದು ನಡೆಯುತ್ತಿರುತ್ತೆ. ಇದಕ್ಕೆ ಬೆಲೆ ಸಿಗದೆ ಇದ್ದರೆ, ಇಂಥ ಹೊಳಹು ಅರಳಲು ಬೇಕಾದ ಜಾಗವೇ ಅದಕ್ಕೆ ಸಿಗದೆ ಇದ್ದರೆ ಅದು ಅಲ್ಲೇ ಸತ್ತು ಹೋಗುತ್ತೆ. ಮನುಕುಲದ ಸಾಮೂಹಿಕ ಕಲ್ಪನಾಶಕ್ತಿಯೇ ನಾಶವಾಗುತ್ತೆ. ಹೀಗಾದಾಗ

ವೈಯುಕ್ತಿಕವಾದ ಕಲೆಯು ಅನಿವಾರ್ಯವಾಗಿ ಇದ್ದೋ-ಅದ್ದೋ ಒಂದು ಗುಂಪಿನ ಹೆಜ್ಜೆಗೆ ಸಿಕ್ಕಿಹಾಕಿಕೊಳ್ಳುತ್ತೆ. ಆಗ ಅದು ನಮಗೆ ಆಘಾತ ಉಂಟುಮಾಡುತ್ತೆ; ನೋವಾಗುತ್ತೆ; ಮತ್ತು ನಮ್ಮಲ್ಲೇ ಕೆಲವರ ಮನ ನೋಯಿಸುತ್ತೆ. ಇದು ಒಂದು ಸಮಾಜ ಮುಕ್ತ ಮನಸ್ಥಿತಿಗೆ ತೆರಬೇಕಾದ ಬೆಲೆ. ನಾವೆಲ್ಲರೂ ಇದರ ಜತೆ ಸಾಗುವುದನ್ನು ಕಲೀಬೇಕು. ಜತೆಗೆ ನಾವು ಏನನ್ನು ಇಷ್ಟಪಡುವುದಿಲ್ಲವ್ರೋ ಅದಕ್ಕೆ ಬೆನ್ನು ತಿರುಗಿಸಿ, ನಮಗೆ ಇಷ್ಟವಾಗುವಂಥ ಸಂಗತಿಗಳ ಕಡೆಗೆ ಹೋಗಬೇಕು.

ಭಾರತವು ಕೋಮುವಾದಿ ಸಂಸ್ಕೃತಿಯ ಹಾದಿಯಲ್ಲೇ ಸಾಗಿದರೆ ಪ್ರಪಂಚದಲ್ಲಿ ಈಗ ಭಾರತೀಯ ಸಂಸ್ಕೃತಿಯನ್ನು ಮೆಚ್ಚುತ್ತಿರುವವರೆಲ್ಲ ದೂರವಾಗ್ತಾರೆ. ಇದೇ ಕೊನೆಗೆ ಧಾರ್ಮಿಕ ಅಸಹಿಷ್ಣು ಸಂಸ್ಕೃತಿಯಾಗಿ ಬೆಳೆದರೆ ಪ್ರಪಂಚದಲ್ಲಿ ಈಗಾಗಲೇ ಇಂಥ ಅನೇಕ ದೇಶಗಳಿವೆ. ಭಾರತವು ಆ ಗುಂಪಿಗೆ ಸೇರುವುದು ಖಂಡಿತಾ ಬೇಡ. ಅದಕ್ಕಿರುವ ಅನನ್ಯತೆ ಕಳೆದು, ನಾವು ಮತ್ತೊಂದು ಮುಚ್ಚಿದ ಜಗತ್ತಾಗುವುದಾಗಲಿ, ಮತ್ತೊಂದು ಚೀನಾ, ಇರಾನ್, ಇಲ್ಲವೇ ಮತ್ತೊಂದು ಪಾಕಿಸ್ತಾನವಾಗೋದಾಗಲಿ ಬೇಡ. ನಮ್ಮ ಈ ಜಗತ್ತು ಮುಕ್ತವಾಗಿಯೇ ಇರಲಿ. ಇದನ್ನು ನಾವೆಲ್ಲರೂ ಇನ್ನಷ್ಟು ಹಿಗ್ಗಿಸಲು ಪ್ರಯತ್ನಿಸೋಣ.

ಮುಗಿಸುವ ಮುನ್ನ ಒಂದು ಅಂಶವನ್ನು ನಾನು ಒತ್ತಿ ಹೇಳಲೇಬೇಕು. ನಾನು ಪಾಶ್ಚಾತ್ಯ ದೇಶಗಳಿಂದ ಎರವಲು ತಂದ ಲಿಬರ್ಟಿ ಕುರಿತು ಹೇಳ್ತಾ ಇಲ್ಲ. ನಮ್ಮ ಪುರಾತನ ಸಂಸ್ಕೃತಿ, ಇಲ್ಲಿಯ ಉದಾರವಾದ, ಘನವಾದ ಸಂಸ್ಕೃತಿಯ ಬಲದ ಮೇಲೆಯೇ ಹೇಳಿದ್ದೀನಿ. ಇದನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳೋದು ನಮ್ಮ ಸೌಭಾಗ್ಯ.

ಅಕ್ಬರ್‌ನ ಫತೇಪುರ್ ಸಿಕ್ರಿಯ ಚಿಂತಕರ ಚಾವಡಿ. ಅದರ ಹೆಸರು 'ಇಬಾದತ್-ಖಾನಾ'. ಅದರಲ್ಲಿ ಪ್ರಪಂಚದ ಅನೇಕ ಸಂಗತಿಗಳನ್ನು ಕುರಿತು ಬಹಳ ಮುಕ್ತವಾಗಿ ಚರ್ಚೆಗಳು ನಡೀತಾ ಇದ್ದವು. ಸಂಪ್ರದಾಯವಾದಿಗಳು ಮತ್ತು ಹೊಸ ಬಗೆಯ ಚಿಂತಕರು, ಮುಸ್ಲಿಮರು ಮತ್ತು ಮುಸ್ಲಿಮೇತರರು ಪರಸ್ಪರ ಮುಖಾಮುಖಿಯಾಗಬಹುದಿತ್ತು. ಇವತ್ತು ಆಧುನಿಕ ಕೆಲವು ಇಮಾಮ್‌ಗಳ ಕುಮ್ಮಕ್ಕಿನಿಂದಾಗಿ ತೀರಾ ಸಂಕುಚಿತ ದೃಷ್ಟಿಯಲ್ಲಿ ಜನಾಂಗೀಯವಾದಿಗಳಾಗಿ ಯೋಚಿಸುತ್ತಿರುವ ಮುಸ್ಲಿಮರಿಗೆ ಅದಕ್ಕಿಂತ ಒಳ್ಳೆಯ ಮಾದರಿಗಳಿವೆ.

ನನ್ನ ಗೆಳತಿಯಾದ ದೀಪಾ ಮೆಹ್ತಾ ಇತ್ತೀಚೆಗೆ ತಮ್ಮ ಸಿನಿಮಾ ನಿರ್ಮಾಣದ ಹಿಂದಿನ ಸೂತ್ರಗಳ ಬಗ್ಗೆ ಮಾತಾಡ್ತಾ, ತಮ್ಮ ಈ ಸಿನಿಮಾ ನಿರ್ಮಾಣದ ಕೆಲಸ ಹೇಗೆ ಭರತನ 'ನಾಟ್ಯಶಾಸ್ತ್ರ'ದ ತತ್ವಗಳಿಂದ ಸ್ಫೂರ್ತಿ ಪಡೆದಿದೆ ಅನ್ನೋದರ ಬಗ್ಗೆ ಹೇಳ್ತಾ ಇದ್ದರು. ಆಗ ನನಗೆ ನಾಟ್ಯಶಾಸ್ತ್ರದಲ್ಲಿ ಈ ಜಗತ್ತಿನ ಮೊಟ್ಟಮೊದಲ ನಾಟಕವನ್ನು ಬ್ರಹ್ಮ ಹಬ್ಬದಲ್ಲಿ ದೇವರ ಎದುರು ಆಡುವಾಗ ನಡೆದ ಕತೆ ನೆನಪಾಯ್ತು. ಅದು ದುಷ್ಟಶಕ್ತಿಗಳ ವಿರುದ್ಧ ಶಿಷ್ಟಶಕ್ತಿಗಳು ಗೆದ್ದ ಕತೆ. ಅಸುರರನ್ನು ಇಂದ್ರನು ಸೋಲಿಸಿದ ಕತೆ. ಆ ನಾಟಕದಲ್ಲಿ ತಮ್ಮನ್ನು ಕೆಟ್ಟದಾಗಿ ಚಿತ್ರಿಸಲಾಗಿದೆ ಅಂತ ಅಸುರರು ಕ್ಯಾತೆ ತೆಗೀತಾರೆ; ದಾಂಧಲೆ ಎಬ್ಬಿಸ್ತಾರೆ. ಆ ಸಂದರ್ಭದಲ್ಲಿ ದೇವ-ದೇವತೆಗಳ ಅಧಿಪತಿಯಾದ ಇಂದ್ರನು ತೋರಿಸುವ ಪ್ರತಿಕ್ರಿಯೆ ಕುತೂಹಲಕಾರಿ. ದುಷ್ಟಶಕ್ತಿಗಳನ್ನೆಲ್ಲ ಸದೆಬಡಿಯುವ ಆತ ಬ್ರಹ್ಮನು ಕಂಬವು ಕಲೆ-ಕಲಾವಿದರ ರಕ್ಷಣೆಗೆ ಸಂಕೇತವಾಗುತ್ತೆ ಎನ್ನುತ್ತಾನೆ. ಬ್ರಹ್ಮನು ಸ್ವರ್ಗದ ಸೃಷ್ಟಿಕರ್ತನಾದ ವಿಶ್ವಕರ್ಮನಿಗೆ- ಕಲೆಗಳನ್ನು ಪ್ರದರ್ಶಿಸುವಂಥ ಒಂದು ರಂಗಮಂದಿರ ನಿರ್ಮಿಸಲು ಹೇಳ್ತಾನೆ. ಕೊನೆಗೆ ದೇವತೆಗಳೇ ಆ ಜಾಗದ ರಕ್ಷಣೆಗೆ ನಿಂತುಕೊಳ್ತಾರೆ. ಹೀಗೆ ಬ್ರಹ್ಮನ ರಕ್ಷಣೆಯೊಂದಿಗೆ, ಅವನು ಕಲೆಗೆ ಬೇಕಾದ ಸ್ವಾತಂತ್ರ್ಯದ ಪರವಾಗಿ ನಿಲ್ಲುವುದರೊಂದಿಗೆ ರಂಗಭೂಮಿ ಮೊದಲಾಗುತ್ತದೆ.

ಇದೇ ಈ ದೇಶದ ನಿಜವಾದ ಪರಂಪರೆ. ಅದನ್ನು ನಾವೆಲ್ಲರೂ ಪುರಸ್ಕರಬೇಕು. ನಮ್ಮ ಖ್ಯಾತ ಕವಿ ರವೀಂದ್ರನಾಥ ಟ್ಯಾಗೋರರ ಅಜರಾಮರ – Where The Mind Is Without Fear ಎನ್ನುವ ಕವಿತೆಯ ಸಾಲುಗಳು.


Where the mind is without fear and the head is held high
Where the knowledge is free
Where the world has not been broken up into fragments
By narrow domestic walls
Where words come out from the depth of truth
Where tireless striving stretches its arms towards perfection
Where the clear stream of reason has not lost its way
Into the dreary desert sand of dead habit
Where the mind is led forward by thee

Into ever-widening thought and action
Into that heaven of freedom, my Father, let my country awake.

(ಇದು ದೆಹಲಿಯಲ್ಲಿ ಇತ್ತೀಚೆಗೆ ನಡೆದ 'ಇಂಡಿಯಾ ಟುಡೇ ಸಮಾವೇಶ'ದಲ್ಲಿ ಖ್ಯಾತ ಲೇಖಕ ಸಲ್ಮಾನ್ ರಶ್ದಿ ಅವರು ಮಾಡಿದ ಭಾಷಣದ ಕನ್ನಡ ಅನುವಾದ)

ಕೃಪೆ : www.indiatodayconclave.in/rushdie (ಇಂಡಿಯಾ ಟುಡೇ ಪತ್ರಿಕೆ ಸಂಪುಟ : ೨೫, ಸಂಚಿಕೆ ೧೩, ಮಾರ್ಚ್ ೨೩-೨೯,೨೦೦೮)





ಕನ್ನಡ ವಿಮರ್ಶೆಯ ಮೇಲೆ ಹೊಸ ಚಿಂತನಾ ಪ್ರಸ್ಥಾನಗಳ ಪ್ರಭಾವ

ಎ. ಚಂದ್ರಶೇಖರ ನಂಗಲಿ

ಇಪ್ಪತ್ತನೆಯ ಶತಮಾನವನ್ನು 'ವಿಮರ್ಶೆಯ ಯುಗ(ಏಜ್ ಆಫ್ ಕ್ರಿಟಿಸಿಸಂ) ಎಂದು ಕರೆಯುವುದುಂಟು. ಪ್ರಕೃತಿ ವಿಜ್ಞಾನಗಳು(ನ್ಯಾಚುರಲ್ ಸೈನ್ಸಸ್) ಮತ್ತು ಮಾನವಿಕ ಅಧ್ಯಯನಗಳು (ಹ್ಯುಮಾನಿಟೀಸ್) ಇನ್ನಿಲ್ಲದಂತೆ ಸಂವರ್ಧನೆಗೊಂಡದ್ದು ಇಪ್ಪತ್ತನೆಯ ಶತಮಾನದಲ್ಲೆ. ಭೌತಶಾಸ್ತ್ರ ಅರ್ಥಶಾಸ್ತ್ರ ಮುಂತಾದ ಪರಿಭಾಷೆಗಳಲ್ಲಿರುವ 'ಶಾಸ್ತ್ರ' ಎಂಬ ಶಬ್ದಕ್ಕೆ ವೈಜ್ಞಾನಿಕ ಅಧ್ಯಯನವನ್ನು ಬಿಂಬಿಸುವ ಶಕ್ತಿಯಿಲ್ಲ. ಅಶ್ವಶಾಸ್ತ್ರ ಸೂಪಶಾಸ್ತ್ರ ಇತ್ಯಾದಿ ಸಾಂಪ್ರದಾಯಿಕ ಶಬ್ದ ಸಾಹಚರ್ಯದಿಂದಾಗಿ ಪ್ರಕೃತಿ ವಿಜ್ಞಾನಗಳಲ್ಲಿ ಮತ್ತು ಮಾನವಿಕ ಅಧ್ಯಯನಗಳಲ್ಲಿ 'ಶಾಸ್ತ್ರ' ಶಬ್ದವನ್ನು ಕೈಬಿಡುವುದು ಉತ್ತಮ. ಇವಕ್ಕೆ ಬದಲು ವೈಜ್ಞಾನಿಕ ಅಧ್ಯಯನಗಳನ್ನೆಲ್ಲ 'ಜ್ಞಾನಶಿಸ್ತುಗಳು' ಎಂದು ಕರೆಯುವುದು ಉಚಿತ. ಇಪ್ಪತ್ತನೆಯ ಶತಮಾನದಲ್ಲಿ ಬಗೆಬಗೆಯ 'ಜ್ಞಾನಶಿಸ್ತುಗಳು'(ಡಿಸಿಪ್ಲೀನ್ಸ್) ನಮ್ಮ ಶೈಕ್ಷಣಿಕ ವ್ಯಾಸಂಗದಲ್ಲಿ ಸುವ್ಯವಸ್ಥಿತವಾಗಿ ಬೇರೂರಿದವು. 'ಸಾಹಿತ್ಯ'ವನ್ನು ಕುರಿತ, ಸಾಹಿತ್ಯ ಚರಿತ್ರೆ, ಸಾಹಿತ್ಯ ಸಿದ್ಧಾಂತ, ಸಾಹಿತ್ಯ ವಿಮರ್ಶೆ ಮುಂತಾದ ಶಾಸ್ತ್ರಗಳು ಅಥವಾ ಜ್ಞಾನಶಿಸ್ತುಗಳು ''ಮೂಗಿಗಿಂತ ಮೂಗುತಿಭಾರ'' – ಎಂಬ ಗಾದೆಯಂತೆ, ಸಾಹಿತ್ಯಕ್ಕಿಂತಲೂ ಮಿಗಿಲಾಗಿ ಕಾಣಿಸಿಕೊಂಡಿವೆ. ಪ್ರಕೃತಿ ವಿಜ್ಞಾನದ ಅಧ್ಯಯನಗಳು, ಮಾನವಿಕ ಅಧ್ಯಯನಗಳು ಮತ್ತು ಸಾಹಿತ್ಯದ ಅಧ್ಯಯನಗಳು ನಮ್ಮ ದೇಶದ ಮಹಾನಗರಗಳಲ್ಲಿರುವ ಗಗನ ಚುಂಬಿ ಕಟ್ಟಡಗಳಂತೆ ಬೃಹದಾಕಾರವಾಗಿ ಬೆಳೆದು, ಪ್ರತಿಯೊಂದು ತನ್ನೊಳಗೆ ಬಗೆಬಗೆಯ ಚಿಂತನಾ ಪ್ರಸ್ಥಾನಗಳನ್ನು ಹುಟ್ಟುಹಾಕಿವೆ. ಇವೆಲ್ಲವುಗಳನ್ನು ಜ್ಞಾನಶಿಸ್ತುಗಳೆಂದೇ ಕರೆಯಬೇಕು.

೧. ಜ್ಞಾನಶಿಸ್ತುಗಳು Vs ಜ್ಞಾನವಾಹಿಗಳು

ಸಾಹಿತ್ಯ ಸೃಷ್ಟಿಯು ಶಾಸ್ತ್ರೀಯವಾದ ಅಥವಾ ವೈಜ್ಞಾನಿಕವಾದ ಅಧ್ಯಯನವಲ್ಲವಾದ್ದರಿಂದ, ಸಾಹಿತ್ಯವನ್ನು 'ಜ್ಞಾನಶಿಸ್ತು' ಎಂದು ಕರೆಯಲಾಗದು. 'ಬುದ್ಧಿ-ಭಾವಗಳ ವಿದ್ಯುದಾಲಿಂಗನ'ದಿಂದ (ಕುವೆಂಪು) ಹುಟ್ಟುವ ಸಾಹಿತ್ಯವನ್ನು 'ಜ್ಞಾನವಾಹಿ' ಎಂದು ಕರೆಯಬೇಕಾಗಿದೆ. ಸಾಹಿತ್ಯವೆಂಬ ಜ್ಞಾನವಾಹಿಯನ್ನು ನಿಸರ್ಗ ಸಹಜವಾದ 'ಕರಾವು' ಎಂದು ಭಾವಿಸಿದಲ್ಲಿ, ಸಕಲಶಾಸ್ತ್ರಗಳನ್ನು ಅಥವಾ ಎಲ್ಲ ಬಗೆಯ ವೈಜ್ಞಾನಿಕ ಅಧ್ಯಯನಗಳನ್ನು ಯಂತ್ರಬಲ ಮತ್ತು ತಂತ್ರಜ್ಞಾನಾಧಾರಿತ ಡೈರಿ ಉದ್ಯಮಕ್ಕೆ ಹೋಲಿಸಬಹುದು. ಈ ದೃಷ್ಟಿಯಿಂದ ನೋಡಿದರೆ ಇಪ್ಪತ್ತನೆಯ ಶತಮಾನದಲ್ಲಿ ಜ್ಞಾನವಾಹಿಗಳು ಮತ್ತು ಜ್ಞಾನಶಿಸ್ತುಗಳ ಸಂಘರ್ಷವೊಂದನ್ನು ಮನಗಾಣಬಹುದು. ಈಗ ಇಪ್ಪತ್ತೊಂದನೆಯ ಶತಮಾನದಲ್ಲಿ ಸಾಹಿತ್ಯವೆಂಬ ಭಾವವಂಶದ ಮೇಲೆ ವಿಜ್ಞಾನಶಾಸ್ತ್ರಗಳ ಧೀಶಕ್ತಿಯ ಸವಾರಿ ನಡೆಯುತ್ತಿದೆ. ಇದರಿಂದ ಸಾಹಿತ್ಯಕ್ಕೆ ಸಹಜವಾಗಿರುವ, ಅನನ್ಯವಾದ ಜೀವಪ್ರಭೆಗೆ ಮಂಕುಹಿಡಿದಂತಾಗಿ, ಕೃತಕ ಪ್ರಭೆಯ ಹೊನಲು ಬೆಳಕಿನ ಪಂದ್ಯಗಳು ವಿಜೃಂಭಿಸುತ್ತಿವೆ.

ಇದಿಷ್ಟು ಹಿನ್ನೆಲೆಯಲ್ಲಿ ಅಲ್ಲಮ ಪ್ರಭುವಚನದಲ್ಲಿರುವ 'ಆಹ್ವಾನ' ಮತ್ತು 'ವಿಸರ್ಜನ' ಎಂಬ ನುಡಿಗಳನ್ನು ಹೊಸ ದೃಷ್ಟಿಯಿಂದ ಬಳಸಲು ಇಚ್ಛಿಸುತ್ತೇನೆ. ಆಹ್ವಾನ- ವಿಸರ್ಜನಗಳನ್ನು ಉಚ್ಛ್ವಾಸ-ನಿಶ್ವಾಸಗಳಿಗೆ ಹೋಲಿಸಬಹುದು. ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವುದು ಆಹ್ವಾನ, ಉಸಿರನ್ನು ಹೊರಕ್ಕೆ ಬಿಡುವುದು ವಿಸರ್ಜನ. ಸಕಲ ಜೀವಿಗಳಿಗೆ ಅನ್ವಯಿಸುವ ಈ ನಿದರ್ಶನವನ್ನು ನಮ್ಮ ಸಕಲ ವಿಧವಾದ ಶೈಕ್ಷಣಿಕ ವ್ಯಾಸಂಗ ಮತ್ತು ಜ್ಞಾನವ್ಯವಸ್ಥೆಗೆ ಹೋಲಿಸಬಹುದು. ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವಂತೆಯೇ, ಪಾಶ್ಚಾತ್ಯ ಸಂಪರ್ಕ ಮತ್ತು ಶೈಕ್ಷಣಿಕ ವ್ಯಾಸಂಗದ ಆಹ್ವಾನಕ್ಕೊಳಗಾಗಿರುವ ನಾವು 'ಮೆಕಾಲೆಯ ಮಕ್ಕಳು'(ಡಿ.ಆರ್. ನಾಗರಾಜ) ಎನಿಸಿಕೊಂಡಿದ್ದೇವೆ. ಇಪ್ಪತ್ತನೆಯ ಶತಮಾನವನ್ನು ಆಹ್ವಾನದ ಮಹಾಪ್ರಸ್ಥಾನವೆಂದೂ ಕರೆಯಬಹುದು. ಮಹಾಪ್ರಸ್ಥಾನಕ್ಕೆ ಹೊರಟ ಪಾಂಡವರು – ದ್ರೌಪದಿಯೂ ಸೇರಿ, ಪಡೆಯುವುದು ಮರಣವನ್ನು ಎಂಬುದನ್ನು ಮರೆಯಬಾರದು! ಇದರಿಂದ ಯಾರೂ ನನ್ನನ್ನು ಆಹ್ವಾನವೆಂಬ ಪ್ರಕ್ರಿಯೆಯ ವಿರೋಧಿ ಎಂದು ತಿಳಿಯಬಾರದು. 'ಭಾಷೆ ಎಂಬುದು ಪ್ರಾಣಘಾತಕ' ಎಂದು ಅಲ್ಲಮ ಪ್ರಭು ತಿಳಿಸಿಬಿಟ್ಟಿದ್ದಾನೆ. ತಪ್ಪಾಗಿ ತಿಳಿಯಬಹುದಾದ ಮತ್ತು ಉದ್ದೇಶಕ್ಕೆ ಭಂಗವನ್ನುಂಟುಮಾಡುವ ಭಾಷೆಯಲ್ಲೇ ನಾವು ವ್ಯವಹರಿಸಬೇಕಾಗಿದೆ: ಆಹ್ವಾನವು ಸರಿಯಾಗಿ ಜೀರ್ಣಗೊಳ್ಳುತ್ತ ಪಚನಗೊಂಡು ಅದರ ಶಕ್ತಿ ಸತ್ವಗಳು ರಕ್ತಾಭಿಸರಣದಿಂದ ದೇಹದ(ದೇಶದ) ಎಲ್ಲೆಡೆ ಸಲ್ಲುತ್ತಾ ಉಳಿದವು ತ್ಯಾಜವಸ್ತುಗಳಾಗಿ ವಿಸರ್ಜನಗೊಳ್ಳಬೇಕು. ಇದು ಆಹಾರ-ನಿಹಾರದ ಚಕ್ರೀಯ ಪ್ರಕ್ರಿಯೆ.

ಭಾರತಕ್ಕೆ ಸ್ವಾತಂತ್ರ್ಯ ಮತ್ತು ಗಣತಂತ್ರ ವ್ಯವಸ್ಥೆಯಾಗಿ ೬೦ ವರ್ಷಗಳನ್ನು ಪೂರೈಸಿರುವ ಸಂದರ್ಭದಲ್ಲಿ ಒಮ್ಮೆ ಆತ್ಮಾವಲೋಕನ ಮಾಡಿಕೊಂಡರೆ, ಮೆಕಾಲೆಯ ಮಕ್ಕಳಲ್ಲೇ ಪ್ರಾತಃಸ್ಮರಣೀಯರಾದ ನೆಹರೂ ಮತ್ತು ಗಾಂಧಿ ಅವರನ್ನು ಆಹ್ವಾನ ಮತ್ತು ವಿಸರ್ಜನದ ಮಹಾನ್ ಪ್ರತೀಕಗಳೆಂದು ಕರೆಯಬಹುದು. ಆಹ್ವಾನದ ಬಗ್ಗೆ ನೆಹರೂ ಅವರಿಗಿದ್ದ ಉತ್ಸಾಹವನ್ನು ನೆನೆದರೆ, ''ಆಹಾ!! ಪ್ರಾತಃಕಾಲದಲಿ ಬೆಳಕಿನ ದಾಹ, ತುಟಿಗೆ ಅಗಸ್ತ್ಯಾಧರದ ತುರುಸು, ತೋಟಿ'' (ಗೋ.ಕೃ. ಅಡಿಗ) ಎಂಬ ಸಾಲುಗಳು ನೆನಪಾಗುತ್ತವೆ. ವಿಸರ್ಜನದ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದ ನೆಹರೂ ಯುಗವನ್ನು ಆಹ್ವಾನದ ಸ್ವರ್ಗಾರೋಹಣ ಪರ್ವವೆಂದೇ ಕರೆಯಬಹುದು. ೧೫ ಆಗಸ್ಟ್, ೧೯೪೭ರಂದು ದೆಹಲಿಯ

ಕೆಂಪುಕೋಟೆಯ ಮೇಲೆ ತ್ರಿವರ್ಣ ಧ್ವಜ ಹಾರಾಡುತ್ತಿದ್ದಾಗ, ಹಾಜರಿದ್ದ ನೇತಾರರ ಮಧ್ಯೆ ಗಾಂಧಿ ಇರಲಿಲ್ಲ. ಆಶ್ರಮದ ಮೌನ, ಧ್ಯಾನದಲ್ಲಿದ್ದ ಗಾಂಧಿಗೆ ವಿಸರ್ಜನದ ತಾಕತ್ತು ಸಮೃದ್ಧವಾಗಿತ್ತು. ಆಹ್ವಾನದೊಂದಿಗೆ ವಿಸರ್ಜನದ ಅಗತ್ಯವನ್ನೂ ಮನಗಂಡಿದ್ದ ಗಾಂಧಿಯಂಥವರು ನೆಹರೂ ಯುಗದ ಒಂಟಿ ದನಿಗಳಾಗಿದ್ದರು. ಭಾರತದ ಹಳ್ಳಿಗಾಡುಗಳು ಮತ್ತು ದೇಸಿ ಜೀವನ ಶೈಲಿಯ ಸುಸ್ಥಿರತೆಯ ಬಗ್ಗೆ 'ನಿರ್ಣಯ'ವನ್ನು ಅರಿತಿದ್ದರಿಂದ ಗಾಂಧಿಯವರು ಬಿಲ್‌ವಿದ್ಯೆಗೆ ಪ್ರಾಣವನ್ನೇ ಅರ್ಪಿಸಿದ ಏಕಲವ್ಯನಂತೆ ವಿಸರ್ಜನದ ಮಹಾನ್ ಪ್ರತೀಕವಾಗಿದ್ದಾರೆ. ಆಗಸ್ತ್ಯದ್ವಾಪದ ನೆಹರೂ ಏಕಲವ್ಯ ನನ್ನಿಯ ಗಾಂಧಿ ಇವರಿಬ್ಬರಲ್ಲಿ ನವಭಾರತದ ಆಯ್ಕೆ ಏನೆಂಬುದು ಸುಸ್ಪಷ್ಟವಾಗಿದೆ. ಇಪ್ಪತ್ತೊಂದನೆಯ ಶತಮಾನದಲ್ಲಾದರೂ ನವಭಾರತವು ವಿಸರ್ಜನದ ತಾಕತ್ತು ತೋರಿಸಬೇಕಾಗಿದೆ.

ಕನ್ನಡ ಸಾಹಿತ್ಯದ ರಾಮ-ಕೃಷ್ಣ- ಶಿವ ಎಂದೇ ಕರೆಯಬಹುದಾದ(ಕ್ರಮವಾಗಿ) ಬೇಂದ್ರೆ - ಕಾರಂತ - ಕುವೆಂಪು ಕೂಡ ಮೆಕಾಲೆಯ ಮಕ್ಕಳೆ ಆಗಿದ್ದರೂ, ಏಕಲವ್ಯ ನನ್ನಿಯನ್ನು ಒಳಗೊಂಡವರು. ಕುವೆಂಪು ಮೆಕಾಲೆಯ ಮಕ್ಕಳ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿದ್ದರೂ ತಾವು ಸೃಷ್ಟಿಸಿದ ಸಾಹಿತ್ಯದಲ್ಲಿ ಹೀರೆಯ ಹೂವುಗಳನ್ನು, ಗೊಬ್ಬರವನ್ನು, ಮಲೆಯ ಮಕ್ಕಳನ್ನು ಕೇಂದ್ರಕ್ಕೆ ತಂದಿದ್ದಾರೆ. ಇದನ್ನು ಆಹ್ವಾನದೊಳಗಿನ ವಿಸರ್ಜನ, ಕತ್ತಲೆಯೊಳಗಿನ ಬೆಳಕು ಎಂದು ಕರೆಯಬೇಕಾಗಿದೆ.

೨. ಸ್ಥಿರೀಕೃತ ಚಿಂತನೆಗಳ ಉಗಮ

ಕನ್ನಡ ವಿಮರ್ಶೆಯ ಮೇಲೆ ಅತ್ಯಧಿಕ ಪ್ರಭಾವ ಬೀರಿದ ಮತ್ತು ಬೀರುತ್ತಿರುವ ಮಾನವಿಕ ಅಧ್ಯಯನವೆಂದರೆ ಇತಿಹಾಸ. ಈ ಜ್ಞಾನಶಿಸ್ತಿನ ಪ್ರಭಾವಕ್ಕೊಳಗಾದ ವಿಮರ್ಶಕರು, ಸಂಶೋಧಕರು ಸಾಹಿತ್ಯ 'ವಸ್ತು'ವಿನ ಪರಿಶೀಲನೆಯನ್ನು 'ಸ್ಥಾವರ'ದಂತೆ ಕಂಡು ನಿರ್ವಹಣೆ ಮಾಡಿದ್ದಾರೆ. ನಿರ್ದಿಷ್ಟವಾದ ಒಂದು ಚಾರಿತ್ರಿಕ ಸಂದರ್ಭ ಅಥವಾ ಸಾಮಾಜಿಕ ಸಂದರ್ಭಕ್ಕೆ ಬದ್ಧರಾಗಿ ನಡೆಸುವ ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಸಂಶೋಧನೆಗಳೆಲ್ಲವೂ ಸ್ಥಿರೀಕೃತ ಚಿಂತನೆಗಳಾಗಿವೆ. ಚಾರಿತ್ರಿಕ ವಿಧಾನ ಅಥವಾ ಸಂದರ್ಭಮೂಲಿ ಅಧ್ಯಯನಗಳೆಂದು ಇವನ್ನು ತಾತ್ತ್ವೀಕರಿಸಲಾಗಿದೆ. 'ಸಾಹಿತ್ಯ ಚರಿತ್ರೆ' ಎಂಬ ಜ್ಞಾನಶಿಸ್ತು ಇಡಿಯಾಗಿ ಸ್ಥಾವರ ದೃಷ್ಟಿಯ ಅಧ್ಯಯನವಾಗಿದೆ. ಸಂದರ್ಭನಿಷ್ಠವಾದ ಸಾಮಾಜಿಕ ವಿಮರ್ಶೆಯೂ ಚರಿತ್ರೆಯನ್ನು ಸ್ಥಾವರವಾಗಿ ಗ್ರಹಿಸಿದ ಪರಿಣಾಮವಾಗಿದೆ. ಕಾಲಾನುಕ್ರಮಣಿಕೆ ಮತ್ತು ಕಾಲಘಟ್ಟಗಳೆಂಬ ಕಣ್ಣಪಟ್ಟಿಯಲ್ಲಿ ಚರಿತ್ರೆಯನ್ನು ಅಭ್ಯಾಸ ಮಾಡುವುದು ಶೈಕ್ಷಣಿಕ ವ್ಯಾಸಂಗದಲ್ಲಿ ಸರ್ವಸಾಮಾನ್ಯ ಸಂಗತಿಯಾಗಿದೆ. ಇದರ ಪ್ರಭಾವಕ್ಕೊಳಗಾಗಿ ಸಾಹಿತ್ಯ 'ವಸ್ತು'ವನ್ನು ಕಾಲನಿಷ್ಠ ಸ್ಥಾವರದಂತೆ ಪರಿಶೀಲಿಸುವ ವಿಮರ್ಶೆಗೆ ಮತ್ತು ಸಂಶೋಧನೆಗೆ ತುಂಬಾ ಮಿತಿಯಿದೆ. ಈ ಮಿತಿಯನ್ನು ಗಾಂಧಿ ಅರಿತಿದ್ದರಿಂದ, ಅವರು ಚರಿತ್ರೆಗೆ ಕೊಟ್ಟಿರುವ ವ್ಯಾಖ್ಯಾನ ಅಪೂರ್ವ ತೇಜದಿಂದ ಕೂಡಿದೆ. ಚರಿತ್ರೆ ಎಂದರೇನು? ಚರಿತ್ರೆಯ ಸ್ವರೂಪ ಕುರಿತು ಹೆರಡೋಟಸ್‌ನಿಂದ ಹಿಡಿದು ಕಾರ್ಲ್‌ಮಾರ್ಕ್ಸ್‌ವರೆಗೆ ಬಗೆಬಗೆಯ ವಿವರಣೆಗಳಿವೆ. ಈ ಎಲ್ಲ ವಿವರಣೆಗಳನ್ನು ಬುಡಮೇಲು ಮಾಡುವಂಥ ವಿಶ್ಲೇಷಣೆಯನ್ನು ಗಾಂಧಿ ಕೊಟ್ಟಿದ್ದಾರೆ. ಗಾಂಧಿಯ ಪ್ರಕಾರ ''ಚರಿತ್ರೆಯು ದಾಖಲೆಗಳ ಗುಲಾಮ, ದಾಖಲೆಗಳನ್ನು ಸೃಷ್ಟಿಸಲಾಗುತ್ತದೆ.'' ಗಾಂಧಿಯ ವಿವರಣೆಯಲ್ಲಿ ಚರಿತ್ರೆಯು ಹುಟ್ಟಿಕೊಂಡದ್ದಲ್ಲ! ಕಟ್ಟಿಕೊಂಡದ್ದು !- ಎಂಬ ಅಂತರಾರ್ಥವಿದೆ. ಇದು ಸತ್ಯ ಕೂಡ. ಕಟ್ಟಿಕೊಂಡ ಚರಿತ್ರೆಗಾಗಿ ಹುಟ್ಟಿಕೊಂಡ ಪ್ರಜೆಗಳನ್ನು ಲೆಕ್ಕಿಸದ ಬಗೆಯೇ ನಮ್ಮಲಿದೆ.

ಭಾರತೀಯ ಇತಿಹಾಸವೊಂದನ್ನೇ ಲಕ್ಷ್ಯದಲ್ಲಿಟ್ಟುಕೊಂಡರೆ, ಇದರಲ್ಲಿ ಬ್ರಿಟಿಷ್ ಸಂಪ್ರದಾಯ, ಹಿಂದೂ ಸಂಪ್ರದಾಯ ಮತ್ತು ಮಾರ್ಕ್ಸ್‌ವಾದಿ ಸಂಪ್ರದಾಯಗಳಿಗೆ ಅನುಗುಣವಾಗಿ ಬರೆದ ಗ್ರಂಥಗಳು

ಸಂಪುಟಗಳಲ್ಲಿ ಪ್ರಕಟವಾಗಿವೆ. ಬ್ರಿಟಿಷ್ ಇತಿಹಾಸಕಾರರು ೧೮೫೭ರ ಹೋರಾಟವನ್ನು ಸಿಪಾಯಿದಂಗೆ ಎಂದು ಕರೆದಿದ್ದಾರೆ. ಆದರೆ ಕಾರ್ಲ್ ಮಾರ್ಕ್ಸ್‌ಗೆ ಇದು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಭಾಸವಾಗಿದೆ. ಹಿಂದೂ ಸಂಪ್ರದಾಯದ ಗ್ರಂಥಗಳಲ್ಲಿ ಹೊಸದಾಗಿ ಬಾಬರಿ ಮಸೀದಿಯ ಪ್ರಕರಣವನ್ನು ಸೇರಿಸಿ ಪ್ರಕಟಿಸಲಾಗಿದೆ. ಸುಪ್ರಸಿದ್ಧ ಮಾರ್ಕ್ಸ್‌ವಾದಿ ಇತಿಹಾಸ ತಜ್ಞರಾದ ಶ್ರೀಮತಿ ರೊಮಿಲಾ ಥಾಪರ್ ಹನ್ನೆರಡನೆಯ ಶತಮಾನದ ಶರಣರ ಚಳುವಳಿಯನ್ನು ಕುರಿತು "ಮೋಸ್ಟ್ ಪ್ರೋಗ್ರೆಸಿವ್ ಮೂವ್‌ಮೆಂಟ್ ಇನ್ ಇಂಡಿಯಾ" ಎಂದು ವರ್ಣಿಸಿದ್ದಾರೆ. ಇತರ ಪ್ರಸಿದ್ಧ ಗ್ರಂಥಗಳಲ್ಲಿ ಈ ಚಳುವಳಿಯ ಪ್ರಸ್ತಾಪವೇ ಇಲ್ಲ. ಇದೆಲ್ಲವನ್ನು ಗಮನಿಸಿದರೆ, ಇತಿಹಾಸದಲ್ಲಿ ಐಕ್ಯಸ್ಥಲವೆಂಬುದಿಲ್ಲ ಎನ್ನುವುದು ಅರಿವಾಗುತ್ತದೆ. ಆದ್ದರಿಂದ ಯಾವುದೇ ದೇಶದ ಇತಿಹಾಸವನ್ನು ಕುರಿತು ಆಲೋಚಿಸುವಾಗ ನಮಗೆ ಹುಟ್ಟಿಕೊಂಡ ಪ್ರಶ್ನೆಗಳು ಮುಖ್ಯವಾಗಬೇಕೇ ಹೊರತು ತಮಗೆ ಬೇಕಾದಂತೆಲ್ಲ ಕಟ್ಟಿಕೊಂಡ ಚರಿತ್ರೆ ಮುಖ್ಯವಾಗಬಾರದು. ದಾಖಲೆಗಳಿಂದ ರೂಪುಗೊಳ್ಳುವ ಅಕ್ಷರ ಜಗತ್ತು ಯಕ್ಷಗಾನ ಬಯಲಾಟಗಳ ಮೇಕಪ್ಪುಗಳೆಂಬುದನ್ನು ಮರೆಯಬಾರದು. ಇದರಲ್ಲಿ ನಿಜಮುಖವು ಮರೆಯಾಗುವ ಸಂಭವ ಅತಿ ಹೆಚ್ಚು! ಒಟ್ಟಿನಲ್ಲಿ ಇತಿಹಾಸದ ದಟ್ಟ ಪ್ರಭಾವದಿಂದ ಸಾಹಿತ್ಯ 'ವಸ್ತು'ವಿನ ಅಧ್ಯಯನವು ಕಾಲ ನಿಷ್ಠ ಸ್ಥಾವರವಾಗಿ ಮಾರ್ಪಟ್ಟಿದ್ದು ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ಸಂಶೋಧನೆಗಳು ಸ್ಥಿರೀಕೃತ ಚಿಂತನೆಯಾಗಿ ಶೈಕ್ಷಣಿಕ ಪ್ರಾಂಗಣದಲ್ಲಿ ತಲೆಮಾರುಗಳಿಂದ ತಲೆಮಾರುಗಳಿಗೆ ವರ್ಗಾವಣೆಗೊಳ್ಳುತ್ತಿರುವ ದುರಂತ ನಮ್ಮಲ್ಲಿದೆ.

೩. ಅತಿ ಸಂಸ್ಕೃತಿಯ ಮೆಣಸಿನ ಕಾಯಿ ಹೊಗೆ

ಪಾಶ್ಚಾತ್ಯ ದೇಶಗಳಲ್ಲಿ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳಾಗಿ ಚಾಲ್ತಿಯಲ್ಲಿರುವ ಥಿಯರಿ ಆಫ್ ಲಿಟರೇಚರ್ (ರೆನೆವೆಲೆಕ್ - ಆಸ್ಟಿನ್ ವಾರೆನ್), ಫೈವ್ ಅಪ್ರೋಚಸ್ ಆಫ್ ಲಿಟರರಿ ಕ್ರಿಟಿಸಿಸಂ (ವಿಲ್ಬರ್ ಸ್ಕಾಟ್ ಜೂ॥), ದ ಫೆನಾಮಿನನ್ ಆಫ್ ಲಿಟರೇಚರ್ (ಟೆನಿಸನ್ ಗ್ರೇ), ದ ಅನಾಟಮಿ ಆಫ್ ಲಿಟರೇಚರ್ (ನಾರ್ಥ್‌ರಫ್ ಫ್ರೈ) ಮುಂತಾದ ಗ್ರಂಥಗಳನ್ನು ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳನ್ನಾಗಿ ನಾವು ಕೂಡ ಮಾಡಿಕೊಂಡದ್ದರಿಂದ ..ನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಒಳಗಣ ಅಧ್ಯಯನಗಳು ಮತ್ತು ಹೊರಗಣ ಅಧ್ಯಯನಗಳು ವೈವಿಧ್ಯಮಯವಾಗಿ ಮೂಡಿಬಂದಿವೆ:

೧. ಹಿಸ್ಟಾರಿಕಲ್ ಕ್ರಿಟಿಸಿಸಂ, ೨. ಸೋಶಿಯಾಲಜಿಕಲ್ ಕ್ರಿಟಿಸಿಸಂ, ೩. ಸೈಕಾಲಜಿಕಲ್ ಕ್ರಿಟಿಸಿಸಂ, ೪. ಥಿಯಾಲಜಿಕಲ್ ಕ್ರಿಟಿಸಿಸಂ, ೫. ಫಿಲಾಸಫಿಕಲ್ ಕ್ರಿಟಿಸಿಸಂ, ೬. ಮೈಥಾಲಜಿಕಲ್ ಕ್ರಿಟಿಸಿಸಂ, ೭. ಸ್ಟ್ರಕ್ಚರಲ್ ಕ್ರಿಟಿಸಿಸಂ. ಇವೆ ಮುಂತಾದ ವಿಮರ್ಶಾ ಪ್ರಸ್ಥಾನಗಳಿಗೆ ಇತಿಹಾಸ, ಸಮಾಜಶಾಸ್ತ್ರ ಮನಃಶಾಸ್ತ್ರ ಮತಧರ್ಮಶಾಸ್ತ್ರ ತತ್ವಶಾಸ್ತ್ರ ಪುರಾಣಶಾಸ್ತ್ರ ಭಾಷಾಶಾಸ್ತ್ರ ಶೈಲಿಶಾಸ್ತ್ರ – ಇತ್ಯಾದಿ ಜ್ಞಾನಶಿಸ್ತುಗಳೇ ಜನನೀ- ಜನಕರು! ಪ್ರತಿಭಾಜನ್ಯವಾದ ಸಾಹಿತ್ಯ 'ವಸ್ತು'ವನ್ನು ಒಳಹೊಕ್ಕು ಅರ್ಥ ಮಾಡಿಕೊಳ್ಳಲು ವ್ಯುತ್ಪತ್ತಿ ಜನ್ಯವಾದ ಬಗೆಬಗೆಯ ಜ್ಞಾನಶಿಸ್ತುಗಳನ್ನು ಆಶ್ರಯಿಸಿ, ಸಾಹಿತ್ಯದ ಅನನ್ಯತೆಯು ಮೂಲೆಗುಂಪಾದ ರೀತಿಯನ್ನಿಲ್ಲಿ ಮನಗಾಣಬೇಕು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಮತ್ತು ಡಾ. ಕೆ.ವಿ. ನಾರಾಯಣ ಅವರು ನಿರಂಕುಶ ಚಿಂತನೆಗಳನ್ನು ಮಂಡಿಸಿದ್ದಾರೆ:

೧. ಹೊಸದಿಗಂತದೆಡೆಗೆ (೧೯೭೩)

೨. ಅನ್ಯ ಪ್ರಭಾವಗಳು - ಸಾಧನೆಗಳು (೧೯೮೩)

೩. ಕನ್ನಡಿಗಳು ಇನ್ನು ಸಾಕು (೧೯೮೮)

ನವ್ಯ ವಿಮರ್ಶೆಯ ಶಾಬ್ದಿಕ ಸರ್ಕಸ್ಸುಗಳ ರಂಗುರಂಗಿನಾಟಕ್ಕೆ ಬೇಸತ್ತು 'ಹೊಸದಿಗಂತದೆಡೆಗೆ' (೧೯೭೩) ಮುನ್ನಡೆದ ತೇಜಸ್ವಿ, ಸಾಹಿತ್ಯ ವಿಮರ್ಶೆಯೆಲ್ಲಾ ಸಾಹಿತ್ಯ ಬೋಧಿಸುವ ಉಪಜೀವಿಗಳ ಖಾಸಗಿ ಆಸ್ತಿಯಾಗಿ ಪರಿಣಮಿಸಿರುವುದನ್ನು ತೀವ್ರವಾಗಿಯೇ ಟೀಕಿಸಿದ್ದಾರೆ. ಸಾಹಿತ್ಯ ಓದಲು ಬಂದವರು ಈ ''ಅತಿ ಸಂಸ್ಕೃತಿಯ ಮೆಣಸಿನ(ಕಾಯಿ) ಹೊಗೆ''ಯಿಂದ ಕಂಗೆಟ್ಟು, ಕೆಮ್ಮುತ್ತಾ ಓಡಿಹೋಗುವುದನ್ನು ಪ್ರಸ್ತಾಪಿಸಿದ್ದಾರೆ. ಈ ಲೇಖನದಲ್ಲಿ ತೇಜಸ್ವಿ ಜನಸಾಮಾನ್ಯರ ಭಾವುಕ ದೃಷ್ಟಿ ಮತ್ತು ವಿದ್ವಜ್ಜನರ ವೈಚಾರಿಕ ದೃಷ್ಟಿಯನ್ನು ಮುಖಾಮುಖಿಯಾಗಿಸಿದ್ದಾರೆ.

ಬೆಳಗಾಗ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ ಭೂಮಿ ತಾಯ
ಎದ್ದೊಂದು ಗಳಿಗೆ ನೆನೆದೇನು

ಭೂಮಿ-ಮನುಷ್ಯ ಸಂಬಂಧವನ್ನು ತಾಯಿ-ಮಗು ಸಂಬಂಧವಲ್ಲಿ ಗ್ರಹಿಸುತ್ತಿರುವ ಜನಸಾಮಾನ್ಯರ ಭಾವುಕ ದೃಷ್ಟಿಯಲ್ಲಿ ಅನುಭವದ ವಿವೇಕವಿದೆ. ಇದಕ್ಕೆ ತದ್ವಿರುದ್ಧವೆಂಬಂತೆ ವಿದ್ವಜ್ಜನರ ವೈಚಾರಿಕ ದೃಷ್ಟಿಯಿದೆ: 'ಅರ್ತ್ ಈಸ್ ಎ ಪ್ಲಾನೆಟ್' ಎಂಬ ಗ್ರಹ-ವಿಜ್ಞಾನ ಸಂಬಂಧನ್ನು ಅಕ್ಷರದ ಅಹಂಕಾರವೆಂದೇ ಕರೆಯಬೇಕಾಗಿದೆ.

ಅಕ್ಷರವ ಬಲ್ಲೆವೆಂದು ಅಹಂಕಾರವನೆಡೆಗೊಂಡು
ಗುರುಹಿರಿಯರನು ಲೆಕ್ಕಗೊಳ್ಳರಯ್ಯ
ವಾಗದ್ವೈತವ ಕಲಿತು, ವಾದಿಪರಲ್ಲದೆ
ಆಗುಹೋಗೆಂಬುದನು ಅರಿಯರು... ಅಲ್ಲಮ ಪ್ರಭು

ಜನಸಾಮಾನ್ಯರು	⟷	ವಿದ್ವಜ್ಜನರು
ಅನುಭವದ ವಿವೇಕ	⟷	ಅಕ್ಷರದ ಅಹಂಕಾರ
ತಿರ್ಯಕ್ ಜೀವಿಗಳು	⟷	ಮನುಷ್ಯರು
ಹಾರಿಜಾಂಟಲ್	⟷	ವರ್ಟಿಕಲ್
ತಲೆಬಾಗುವುದು	⟷	ಬೀಗಿ ಬೆಳೆಯುವುದು

ಮೇಲಿನ ಸಂಗತಿಗಳನ್ನು ಉಭಯ ವೈರುಧ್ಯಗಳು ಅಥವಾ ವಿರುದ್ಧ ಧ್ರುವಗಳು ಎಂಬಂತೆ ಗ್ರಹಿಸದೆ, ಅಖಂಡ ದೃಷ್ಟಿಯಿಂದ ಗ್ರಹಿಸಬೇಕು. 'ತಿರ್ಯಕ್ ಜೀವಿಗಳು' ಎಂದರೆ, ತಿರ್ಯಗ್ಗಾಮಿಗಳು ಎಂದರ್ಥ. ತಿರಗೆ ಸಮಾನಾಂತರವಾಗಿ ಚಲಿಸುವ ಎಲ್ಲ ಜೀವಿಗಳು 'ತಿರ್ಯಕ್' ಜಾತಿಗೆ ಸೇರುತ್ತವೆ. ಜೀವಶಾಸ್ತ್ರದಲ್ಲಿ ಮನುಷ್ಯನನ್ನು ಹೋಮೊ ಎರೆಕ್ಟಸ್, ಹೋಮೋ ಸೆಪಿಯನ್ ಎಂಬ ಪರಿಭಾಷೆಯಿಂದ ಗುರುತಿಸುತ್ತಾರೆ. ತಿರಗೆ ಸಮಾನಾಂತರವಾಗಿ ಚಲಿಸುವ ಬದಲು ಲಂಬಾತ್ಮಕವಾಗಿ ಚಲಿಸುವುದು ಮನುಷ್ಯ ವಿಶೇಷ. ಹಾರಿಜಾಂಟಲ್ ಮತ್ತು ವರ್ಟಿಕಲ್ ಎಂಬ ಶಬ್ದಗಳನ್ನು ಕೇವಲ ಜೈವಿಕ ಚಲನೆಗಳು ಎಂಬರ್ಥದಲ್ಲಿ ಮಾತ್ರ ನೋಡಬಾರದು. ಹಳ್ಳಿಗಾಡುಗಳ 'ವಾಸ್ತು' ಭೂಮಿಗೆ ಸಮಾನಾಂತರವಾಗಿದ್ದರೆ, ಮಹಾನಗರಗಳ 'ವಾಸ್ತು'ಭೂಮಿಗೆ ಲಂಬಾತ್ಮಕವಾಗಿರುತ್ತದೆ. ಗ್ರಾಮೀಣರ ನಡೆನುಡಿಗಳು, ಜೀವನಶೈಲಿ ಪರಿಸರ ಸ್ನೇಹಿಯಾಗಿದ್ದು, ಭೂಮಿಗೆ ಸಮಾನಂತರವಾಗಿದ್ದರೆ, ನಾಗರಿಕರ ನಡೆ-ನುಡಿಗಳು ಜೀವನಶೈಲಿ ಪರಿಸರ ಮಾರಿಯಾಗಿದ್ದು, ಭೂಮಿಗೆ ಲಂಬಾತ್ಮಕವಾಗಿರುತ್ತದೆ. ನಮ್ಮೂರು ಸಂಗಲಿ ರಾಷ್ಟ್ರೀಯ ಹೆದ್ದಾರಿಯ

ಪಕ್ಕದಲ್ಲೇ ಇದ್ದರೂ ಅಲ್ಲಿ ಒಂದೇ ಒಂದು ಬಹುಮಹಡಿ ಕಟ್ಟಡವಿಲ್ಲ. ಬೆಂಗಳೂರು ಮಹಾನಗರದಲ್ಲಿ ಬಹುಮಹಡಿ ಕಟ್ಟಡಗಳ ಸಮುಚ್ಚಯವನ್ನೇ ನೋಡಬಹುದು. ಹಳ್ಳಿಗಳ ರಚನೆ ಭೂಮಿಗೆ ಸಮಾನಾಂತರವಾಗಿದ್ದು ತಲೆಬಾಗುವಂತೆ ಇದ್ದರೆ, ಮಹಾನಗರಗಳ ರಚನೆ ಭೂಮಿಗೆ ಲಂಬಾತ್ಮಕವಾಗಿದ್ದು, ಸೆಟೆದು ನಿಂತು ಬೀಗುತ್ತಾ ಬೆಳೆಯುವಂತೆ ಇರುತ್ತದೆ. ಹಾರಿಜಾಂಟಲ್ ಎಂದರೆ ನೆಲಮುಟ್ಟುವ ಪ್ರೀತಿ! ವರ್ಟಿಕಲ್ ಎಂದರೆ ಗಗನ ಚುಂಬಿ ವ್ಯಾಮೋಹ! ಎನ್ನಬಹುದು. ಬಸವಣ್ಣನವರು ತಮ್ಮ ವಚನವೊಂದರಲ್ಲಿ 'ಬೀಗಿ ಬೆಳೆದ ಗೊನೆಬಾಳೆಯಂತೆ ಬಾಗಿಕೊಂಡಿದ್ದರೆ ಬೇಡಿದ ಪದವೀಯನೀವ ನಮ್ಮ ಕೂಡಲ ಸಂಗಮದೇವಾ' – ಎಂದು ಹೇಳಿದ್ದಾರೆ. ಹೊಳೆಗೆ ಎದುರಾದ ಹುಲ್ಲು ಬಾಗಿ ನಮಿಸಿ ಬದುಕಿಕೊಳ್ಳುತ್ತದೆ; ಹೊಳೆಗೆ ಎದುರಾಗಿ ಸೆಟೆದು ನಿಲ್ಲುವ ಮರ ಕ್ರಮೇಣ ಮುರಿದುಬೀಳುತ್ತದೆ.

೪. ಸಾಹಿತ್ಯದ ಅನುಭವಕ್ಕೆ ಅಡೆ-ತಡೆಗಳು

ಕಾವ್ಯದ ಅನುಸಂಧಾನ ಅಥವಾ ಸಾಹಿತ್ಯದ ಅನುಭವಕ್ಕೆ ಸಾಹಿತ್ಯ ವಿಮರ್ಶೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ಸಂಶೋಧನೆಗಳು ಅಡೆ-ತಡೆಗಳಾಗಿಬಿಟ್ಟಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಹಿಂದೆಲ್ಲ 'ರಸವಿಘ್ನಗಳು' ಎನ್ನುತ್ತಿದ್ದರು. ಇನ್ನು ಮುಂದೆ ವಿಮರ್ಶಾವಿಘ್ನಗಳು, ಚರಿತ್ರೆಯ ವಿಘ್ನಗಳು, ಸಂಶೋಧನಾ ವಿಘ್ನಗಳು ಎಂದು ಮಾತನಾಡಬೇಕಾಗಿದೆ. ಗಗನಕ್ಕೆ ಗಗನವೇ ಸಾಟಿ ಎಂಬಂತೆ, ಪ್ರತಿಭೆಗೆ ಪ್ರತಿಭೆಯೇ ಸಾಟಿಯಾಗಿದೆ. ಕಾರಯಿತ್ರೀ ಪ್ರತಿಭೆಯನ್ನು ಅರ್ಥಮಾಡಿಕೊಳ್ಳಲು 'ಭಾವಯಿತ್ರೀ' ಪ್ರತಿಭೆಯೊಂದಿದ್ದರೆ ಸಾಕು. ತಮ್ಮ ಕಾದಂಬರಿಗಳು ''ಸಹೃದಯನ ಪ್ರತಿಭೆಯಲ್ಲಿ ಪುನರ್ ಸೃಷ್ಟಿಗೊಳ್ಳಬೇಕು'' ಎಂಬ ಆಶಯವನ್ನು ಕುವೆಂಪು ಹೇಳಿಕೊಂಡಿದ್ದಾರೆ. ಈ ದೃಷ್ಟಿಯಿಂದ ಕವಿ ಮತ್ತು ಸಹೃದಯ ಪರ್ಯಾಯ ಶಬ್ದಗಳೆಂದು ನನಗನ್ನಿಸಿದೆ. ಬಿ.ಎ., ಎಂ.ಎ., ಓದುವಾಗ ಇವೆರಡು ಬೇರೆ ಬೇರೆ ಶಬ್ದಗಳೆಂದು ತಿಳಿದಿದ್ದೆ. ಆದರೆ, ಇವು ಒಂದೇ ಅರ್ಥ ವ್ಯಾಪ್ತಿಯ ಸಮಾನಶಬ್ದಗಳೆಂದು ಇತ್ತೀಚೆಗೆ ಅರಿವಾಗಿದೆ. ಕವಿಯ ಹೃದಯಕ್ಕೆ ಸಮಾನವಾದ ಹೃದಯವುಳ್ಳವನೇ ಸಹೃದಯ. ಇವನು ಕೃತಿಯೊಂದಿಗೆ ನಡೆಸುವ ಸಂವಾದಗಳೇ ಹೃದಯ ಸಂವಾದ! ನಮ್ಮ ಸಾಹಿತ್ಯ ವಿಮರ್ಶೆಯಲ್ಲಿ ವೈವಿಧ್ಯಮಯವಾದ ಅಧ್ಯಯನಗಳು ಗಗನಚುಂಬಿ ಕಟ್ಟಡಗಳಂತೆ ಬೆಳೆಯುತ್ತಾ ಬಂದು ಹೃದಯ ಸಂವಾದಗಳು ನಾಪತ್ತೆಯಾಗಿವೆ. ವಿಮರ್ಶೆಯಲ್ಲಿ ಮೆರೆಯುತ್ತಿರುವ ಹೊಸ ಚಿಂತನಾ ಪ್ರಸ್ಥಾನಗಳು ಮತ್ತು ಅವುಗಳ ಒಳಗಡೆಯಲ್ಲೇ ಇರುವ ನಾನಾ ವಿಧವಾದ ದೃಷ್ಟಿಧೋರಣೆಗಳು ಬಗೆಬಗೆಯ ವಾದ-ವಿವಾದಗಳನ್ನು ಹುಟ್ಟುಹಾಕಿವೆ. ಇವೆಲ್ಲವೂ ಪ್ರತಿಭಾಜನ್ಯವಾದ ಹೃದಯ ಸಂವಾದಗಳಾಗಿರದೆ, ವ್ಯುತ್ಪತ್ತಿ ಬಲದಿಂದ ಹುಟ್ಟಿದ ವಾದ-ವಿವಾದಗಳಾಗಿವೆ. ಸಾಹಿತ್ಯವು ಅನನ್ಯ ಚಿಂತನಾ ಪ್ರಸ್ಥಾನವಾಗಿದ್ದರೆ, ವಿಮರ್ಶೆಯ ವಿವಿಧ ವಾಗ್ವಿಲಾಸಗಳು ಅನ್ಯಚಿಂತನಾ ಪ್ರಸ್ಥಾನಗಳೆಂಬುದನ್ನು ಮರೆಯಬಾರದು.

ಸಾಹಿತ್ಯ ಶಾಸ್ತ್ರಗಳೆಂದೇ ಕರೆಯಬಹುದಾದ ಸಾಹಿತ್ಯ ವಿಮರ್ಶೆ-ಸಾಹಿತ್ಯ ಚರಿತ್ರೆ – ಸಾಹಿತ್ಯ ಸಂಶೋಧನೆಗಳನ್ನು ನಾವು ನಡೆಸುತ್ತಿರುವುದು ವ್ಯುತ್ಪತ್ತಿ ಮಾರ್ಗದಿಂದ! ಈ ಶಾಸ್ತ್ರೀಯ ಅಥವಾ ವೈಜ್ಞಾನಿಕ ಅಧ್ಯಯನವನ್ನು ಮೀರಬೇಕಾದರೆ, ಸಾಹಿತ್ಯ ವಿಮರ್ಶೆ-ಸಾಹಿತ್ಯ ಚರಿತ್ರೆ – ಸಾಹಿತ್ಯ ಸಂಶೋಧನೆಗಳನ್ನು ಪ್ರತಿಭಾ ಮಾರ್ಗದಲ್ಲಿ ಮುನ್ನಡೆಸಬೇಕಾಗಿದೆ. ಇಲ್ಲದಿದ್ದರೆ, ಸಾಹಿತ್ಯದ ಅಧ್ಯಯನವು ಕೂಡ ಒಂದು ಶಾಸ್ತ್ರವಾಗಿ ಕೊನೆಗೊಳ್ಳುತ್ತದೆ. ''ಎಲ್ಲಾ ಶಾಸ್ತ್ರಗಳೂ ಒಂದು ಹಂತ ದಾಟಿದ ಮೇಲೆ ಅಮೂರ್ತವಾಗುತ್ತ ಹೋಗುತ್ತವೆ'' (ಹೊಸ ದಿಗಂತದೆಡೆಗೆ) ಎಂದು ತೇಜಸ್ವಿ ಕೊಟ್ಟಿರುವ ಎಚ್ಚರಿಕೆ ಗಮನಾರ್ಹವಾಗಿದೆ. ನಮ್ಮಲ್ಲಿ ಸಾಹಿತ್ಯ ವಿಮರ್ಶೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ಸಂಶೋಧನೆಗಳು ಒಂದೊಂದು ಶಾಸ್ತ್ರವಾಗಿ ಬೀಗುತ್ತಾ ಬೆಳೆದು ಗಗನ ಚುಂಬಿ ಕಟ್ಟಡಗಳಾಗಿ ತೀರ ಅಮೂರ್ತವಾಗಿಬಿಟ್ಟಿವೆ.

ಖ್ಯಾತ ಕಲಾವಿದರಾದ ಕೆ.ಜಿ. ಸುಬ್ರಮಣ್ಯನ್ ಅವರು ಸಂದರ್ಶನವೊಂದರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವೊಂದು ಈ ಸಂದರ್ಭದಲ್ಲಿ ಉಲ್ಲೇಖನಾರ್ಹವಾಗಿದೆ: ''ಕಲೆಯು ಬೌದ್ಧಿಕವೇ ಅಥವಾ ಕೇವಲ ಸೌಂದರ್ಯಾತ್ಮಕವೇ ಎನ್ನುವುದು ನನಗೆ ತಿಳಿಯದು. ತಿಳಿಯಬೇಕೆಂಬ ಆಸಕ್ತಿಯೂ ನನಗಿಲ್ಲ. ಹಾಗೆ ನೋಡಿದರೆ ಅತಿ ಹೆಚ್ಚಿನ ಜ್ಞಾನ ಕಲಾನುಭವಕ್ಕೆ ಅಡ್ಡಿಯಾಗುತ್ತದೆ. ಅದು ಸರಿಬರಲ್ ಅಲ್ಲ! ನಿಜವಾದ ಕಲೆ ನನ್ನೊಳಗಿನ ಯಾವುದೋ ವಾಸ್ತವವನ್ನು, ಸತ್ಯವನ್ನು ಜಾಗೃತಗೊಳಿಸುತ್ತದೆ ಎನ್ನುವುದಷ್ಟೇ ನಿಜ. ಅದು ಆಗುತ್ತದೆ ಎನ್ನುವುದು ಮುಖ್ಯ. ಏಕೆ, ಹೇಗೆ ಎನ್ನುವ ಪ್ರಶ್ನೆ ನನಗೆ ಬೇಡ. ಹಾಗೆ ನೋಡಿದರೆ ಸೌಂದರ್ಯಾನುಭವವು ಭಾವನೆ ವಿಚಾರ ಮುಂತಾದವುಗಳಿಂದ ವಂಚಿತವಾದ ಮತ್ತೇನೋ ಅಲ್ಲ. ಅದು ಅವೆಲ್ಲವನ್ನೂ ಕೂಡಿಕೊಂಡ ಸಂಕೀರ್ಣ ಸಮಗ್ರ ಅನುಭವ...''(ಜನಗಣಮನ ಎಚ್.ಎಸ್. ರಾಘವೇಂದ್ರರಾವ್)

ತೇಜಸ್ವಿ ಹೇಳಿರುವ 'ಅತಿ ಸಂಸ್ಕೃತಿಯು ಮೆಣಸಿನ(ಕಾಯಿ)ಹೊಗೆ' ಮತ್ತು ಕೆ.ಜಿ. ಸುಬ್ರಮಣ್ಯನ್ ಹೇಳಿರುವ 'ಅತಿ ಹೆಚ್ಚಿನ ಜ್ಞಾನ ಕಲಾನುಭವಕ್ಕೆ ಅಡ್ಡಿಯಾಗುತ್ತದೆ' ಎಂಬ ಮಾತುಗಳು ಒಂದಕ್ಕೊಂದು ಪೂರಕವಾಗಿವೆ. ಈ ದೃಷ್ಟಿಯಿಂದ ನೋಡಿದರೆ, ಆಧ್ಯಾನದ ಮಹಾಪ್ರಸ್ಥಾನವನ್ನೇ ನೆಚ್ಚಿಕೊಂಡಿರುವ ಕನ್ನಡ ವಿಮರ್ಶೆಗೆ ವಿಸರ್ಜನದ ತಾಕತ್ತು ಇಲ್ಲವೆಂದೇ ಹೇಳಬೇಕಾಗಿದೆ. ಇಂಥದ್ದೊಂದು ಧಾರಣಾ ಸಾಮರ್ಥ್ಯವನ್ನು ಬಹು ಹಿಂದೆಯೇ ಡಾ. ಕೆ.ವಿ. ನಾರಾಯಣ ಅವರು ತಮ್ಮ ಎರಡು ಲೇಖನಗಳಲ್ಲಿ ವಿಷಾದ ಭಾವದಿಂದ ಪ್ರಸ್ತಾಪಿಸಿದ್ದಾರೆ:

೧. ಅನ್ಯ ಪ್ರಭಾವಗಳು – ಸಾಧನೆಗಳು : ಕೆ.ವಿ.ನಾರಾಯಣ (೧೯೮೩)

''... ಸಾಹಿತ್ಯ ವಿಮರ್ಶೆ ಎಂದು ಕರೆಯುವ ಚಟುವಟಿಕೆಯು ದೇಶೀಯವಾದ ಮೂಲಗಳನ್ನು ಹೊಂದಿಲ್ಲ''

೨. ಕನ್ನಡಿಗಳು ಇನ್ನು ಸಾಕು : ಕೆ.ವಿ. ನಾರಾಯಣ (೧೯೮೮)

''...ಹೊರಗಿನ ಮಾದರಿಗಳ ಮೂಲಕ ನಮ್ಮನ್ನು ಅರಿಯುವ ಪ್ರಯತ್ನ ನಿಲ್ಲಬೇಕು...''

ಕನ್ನಡ ವಿಮರ್ಶೆಯ ಮೇಲೆ ಗಾಢವಾದ ಪ್ರಭಾವ ಬೀರಿರುವ ವೈವಿಧ್ಯಮಯವಾದ ಹೊಸ ಚಿಂತನ ಪ್ರಸ್ಥಾನಗಳು ಹಾರಿಜಾಂಟಲ್ ಆಗಿ ಬೆಳೆಯದೆ, ವರ್ಟಿಕಲ್ ಆಗಿ ಬೆಳೆಯುತ್ತಾ ಗಗನಚುಂಬಿ ವ್ಯಾಮೋಹದ ಅಕ್ಷರ ಸಮುಚ್ಚಯಗಳನ್ನು ನಿರ್ಮಾಣ ಮಾಡಿವೆ. ಇದನ್ನು ಪರಿಭಾವಿಸುತ್ತಿದ್ದರೆ, ಚಾರ್ಲಿ ಚಾಪ್ಲಿನ್ ಅವರ 'ಗ್ರೇಟ್ ಡಿಕ್ಟೇಟರ್' ಸಿನಿಮಾದಲ್ಲಿ ಹಿಟ್ಲರ್ ಮತ್ತು ಮುಸಲೋನಿ ಹೇರ್ ಕಟಿಂಗ್ ಸೆಲೂನ್‌ಗೆ ಹೋಗಿದ್ದಾಗ ನಡೆಸುವ ಸ್ಪರ್ಧೆಯ ದೃಶ್ಯ ನೆನಪಾಗುತ್ತದೆ. ಮುಸಲೋನಿ ತನಗಿಂತಲೂ ಎತ್ತರವಾದ ಪೀಠದಲ್ಲಿ ಕುಳಿತಿರುವುದನ್ನು ಕಂಡು ಹಿಟ್ಲರ್ ತನ್ನ ಪೀಠದ ಗೋಲನ್ನು ತಿರುಗಿಸಿ ಮೇಲಕ್ಕೆ ಏರಿಸಿಕೊಳ್ಳುತ್ತಾನೆ. ಇದನ್ನು ಕಂಡ ಮುಸಲೋನಿ ತಾನು ಕೆಳಗಾದೆನೆಂದು ತಿಳಿದು ಅವನು ಕೂಡ ತನ್ನ ಪೀಠದ ಗೋಲನ್ನು ತಿರುಗಿಸಿ ಇನ್ನೂ ಮೇಲಕ್ಕೆ ಏರಿಸಿಕೊಳ್ಳುತ್ತಾನೆ. ಹೀಗೆ ಇಬ್ಬರಲ್ಲೂ ಸ್ಪರ್ಧೆ ಹೆಚ್ಚಾಗಿ ಇಬ್ಬರೂ ವರ್ಟಿಕಲ್ ಆಗಿ ಬೆಳೆಯುತ್ತಾ ಮೇಲು ಮೇಲಕ್ಕೇರುತ್ತಾರೆ. ಆದರೆ, ತೀರ ಮೇಲಕ್ಕೆ ಹೋದಾಗ ಎರಡೂ ಪೀಠಗಳ ಕೀಲು ಕಳಚಿ ಇಬ್ಬರೂ ಕುಸಿದು ಕೆಳಕ್ಕೆ ಬೀಳುತ್ತಾರೆ. ನಮ್ಮ ಕನ್ನಡ ವಿಮರ್ಶೆಯ ಹೊಸ ಚಿಂತನಾ ಪ್ರಸ್ಥಾನಗಳ ಭವಿಷ್ಯವು ಇದಕ್ಕಿಂತಲೂ ಬೇರೆಯಲ್ಲವೆಂದೇ ಹೇಳಬೇಕಾಗಿದೆ.

ಒಳಗಣ ವೈಚಾರಿಕ ಆಕೃತಿಗಳಿಂದ ನಡೆಸುವ ಕೃತಿ ನಿಷ್ಠ ವಿಮರ್ಶೆ ಅಥವಾ ಹೊರಗಣ ವೈಚಾರಿಕ

ಆಕೃತಿಗಳಿಂದ ನಡೆಸುವ ಸಂಸ್ಕೃತಿ ನಿಷ್ಠ ವಿಮರ್ಶೆ ಎಂಬ ಆಶಯಗಳು ಹುರುಳಿಲ್ಲದವು:

> "... ಒಂದು ವಿಮರ್ಶೆ ಮೂಲಭೂತವಾಗಿ ಶ್ರೇಷ್ಠವಾಗುವುದು ಅದರ ತತ್ವ ವಿಮರ್ಶೆಯಿಂದಲೂ ಅಲ್ಲ, ಅಥವಾ ಕೃತಿ ನಿಷ್ಠ ವಿಮರ್ಶೆಯಿಂದಲೂ ಅಲ್ಲ. ತನ್ನ ಭಾಷೆ ಮತ್ತು ಜನಾಂಗದ ಬಗ್ಗೆ ತನಗಿರಬೇಕಾದ ನೈತಿಕ ಹೊಣೆಗಾರಿಕೆಯನ್ನು ತಾನು ತಿಳಿದಾಗ ಮಾತ್ರ ಇದು ಸಾಧ್ಯ. ಇದಿಲ್ಲದ ಹುಳ್ಳ ಮನಸ್ಸು ಕೃತಿ ನಿಷ್ಠ ವಿಮರ್ಶೆ ಮಾಡಿದರೂ, ತತ್ವ ವಿಮರ್ಶೆ ಮಾಡಿದರೂ ತನ್ನ ಮೌಲ್ಯಮಾಪನದ ಅಳತೆಗೋಲಿನ ಉದ್ದಗಲಗಳನ್ನು ನಿರಂತರ ಬದಲಾಯಿಸುತ್ತಾ ಇರುತ್ತದೆ..."
>
> ತೇಜಸ್ವಿ : ಕರ್ನಾಟಕ ಸಂಸ್ಕೃತಿಯ ವಿಶ್ಲೇಷಣೆ (೧೯೭೫).

ಸಾಹಿತ್ಯ ಅನುಭವ ಮತ್ತು ಸಾಹಿತ್ಯ ವಿಮರ್ಶೆಗಳಲ್ಲಿ ನಮ್ಮ ಪ್ರಥಮ ಆಯ್ಕೆ-ಆದ್ಯತೆಗಳು ಎಂದೆಂದಿಗೂ ಸಾಹಿತ್ಯದ ಅನುಭವವೇ ಆಗಿರಬೇಕು. ಆದರೆ, ಶೈಕ್ಷಣಿಕ ವ್ಯಾಸಂಗದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶೆಗೆ ಸಿಗುತ್ತಿರುವ ವಿಶೇಷ ಮನ್ನಣೆ ಮತ್ತು ಲಾಬಿಗಳಿಂದಾಗಿ ಸಾಹಿತ್ಯದ ಅನುಭವ, ನಿಜದುದಯಗಳು ಮೂಲೆಗುಂಪಾಗಿವೆ. "ಗಂಡಮಾದೇವರಾಯ ವಿರಿದ ಬತ್ತಲುಗುದರಿ" ಎಂಬ ಜನಪದ ಕಥನ ಗೀತೆಯ ಸಾಲು ವಿಚಾರ ಗರ್ಭಿತವಾಗಿದೆ: ಸಾಹಿತ್ಯ ಅನುಭವ, ನಿಜದುದಯಗಳನ್ನು ಬತ್ತಲುಗುದರಿಯ ಸವಾರಿ ಎಂದೇ ಕರೆಯಬೇಕು. ಗಂಡ ಮಾದೇವರಾಯನಿಗಿರುವ ನಿರೀಕ್ಷೆ-ತಲ್ಲಣ-ಸಂಘರ್ಷ-ಆತಂಕಭಾವಗಳೇ 'ಸಾಹಿತ್ಯ'ವೆನಿಸಿಕೊಳ್ಳುತ್ತದೆ. ಇದಾವುದೂ ಇಲ್ಲದ ಕಣ್ಣಪಟ್ಟಿ ಕಟ್ಟಿಸಿಕೊಂಡ ಜಟಕಾಕುದುರೆಯ ಪಯಣದಂತೆ ಸಾಹಿತ್ಯ ವಿಮರ್ಶೆಯ ನಾನಾ ವಿಧವಾದ ಪಂಥಗಳು - ಪ್ರಕಾರಗಳು ಕಂಡುಬರುತ್ತವೆ. ಈ ಸಂದರ್ಭದಲ್ಲಿ ಬಸವಣ್ಣನ ವಚನವೊಂದು ನೆನಪಾಗುತ್ತದೆ: ಹೊರಿಸಿಕೊಂಡು ಹೋದ ನಾಯಿ ಮೊಲನೇನ ಹಿಡಿವುದಯ್ಯ? (ವಿಮರ್ಶೆ ಎಂದರೆ ಬೇಟೆಯಲ್ಲ) ಬೇಟೆಗೆಂದು ಹೋದಾಗ ನಾಯಿಗಳನ್ನು ಹೊರಿಸಿಕೊಂಡು ಹೋದರೆ ಮೊಲವನ್ನು ಹಿಡಿಯಲಾಗುವುದೇ?– ಎಂಬ ಪ್ರಶ್ನೆ ಬಹುಮುಖ್ಯವಾಗಿದೆ.

೫. ಸಹಜ ಕೃಷಿ ಮತ್ತು ಸಹಜ ವಿಮರ್ಶೆಯ ವ್ಯವಸಾಯ

ಕೃಷಿಯನ್ನು ತಳರಚನೆಯೆಂದು ತಿಳಿದರೆ, ಸಾಹಿತ್ಯವು ಮೇಲುರಚನೆಯೆಂದು ಹೇಳಬಹುದು. ೧೯೫೦-೬೦ರಿಂದೀಚೆಗೆ ನಮ್ಮ ದೇಶದ ಕೃಷಿ ಮತ್ತು ಸಾಹಿತ್ಯದ ಅನುಸಂಧಾನದಲ್ಲಿ ಪರಾವಲಂಬನೆಯೇ ಹೆಚ್ಚುತ್ತ ಬಂದುದನ್ನು ಮನಗಾಣಬಹುದು. ನಾರ್ಮನ್ ಬೋರ್ಲಾಗ್ ನೇತೃತ್ವದಲ್ಲಿ ನಡೆದ ಮೊದಲನೆ ಹಸಿರುಕ್ರಾಂತಿಯು ಕೃಷಿಯ ಮೂರುಸ್ತರಗಳಾದ ಬೀಜ-ಗೊಬ್ಬರ -ಔಷಧ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡುತ್ತ ರೈತಾಪಿ ಸಮುದಾಯಗಳನ್ನು ಪರಾವಲಂಬನೆಗೊಳಿಸುವಲ್ಲಿ ಯಶಸ್ವಿಯಾಯಿತು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಗತಿಶೀಲ -ನವ್ಯ - ದಲಿತ ಬಂಡಾಯ ಚಳುವಳಿಗಳ ಮೂಲಕ ಮೂಡಿಬಂದ ವಿಮರ್ಶಾ ಪ್ರಸ್ಥಾನಗಳು ಸಹೃದಯರನ್ನು ಮೂಲೆಗುಂಪು ಮಾಡಿ ಸಾಹಿತ್ಯೋಪಜೀವಿಗಳನ್ನು, ವಿಮರ್ಶೆಯಿಂದಲೇ ಮುನ್ನಡೆವ ಪರಾವಲಂಬಿಗಳನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಗಿವೆ. ಇವರು ಸೃಷ್ಟಿಸಿದ ಸಾಹಿತ್ಯ ಮತ್ತು ವಿಮರ್ಶೆಗಳ ನಡುವೆ ಹೆಚ್ಚಿನ ವ್ಯತ್ಯಾಸಗಳಿಲ್ಲ. 'ನೀ ನನಗಿದ್ದರೆ ನಾ ನಿನಗೆ' ಎಂಬಂಥ ಒಪ್ಪಂದದ ರೀತಿಯಲ್ಲಿ ಸಾಹಿತ್ಯ ಮತ್ತು ವಿಮರ್ಶೆಗಳ ಪಯಣವನ್ನು ಗುರುತಿಸಬಹುದು. ಹಸಿರು ಕ್ರಾಂತಿಯ ಹೆಸರಿನಲ್ಲಿ ಏಕರೂಪಾತ್ಮಕ ತಳಿಗಳು-ರಾಸಾಯನಿಕ ಗೊಬ್ಬರಗಳು -ಕ್ರಿಮಿನಾಶಕ ಔಷಧಗಳನ್ನು ಯಥೇಚ್ಛವಾಗಿ ಸುರಿದು ಭೂಮಿಯ ಪುನರುತ್ಪಾದನಾ ಶಕ್ತಿಯನ್ನೇ ನಾಶಗೊಳಿಸಲಾಗಿದೆ. ಅಂತೆಯೇ ವಿಚಾರವಾದಗಳು ಮತ್ತು ವಿಮರ್ಶಾ ಪ್ರಸ್ಥಾನಗಳ ಹೆಸರಿನಲ್ಲಿ ಏಕರೂಪಾತ್ಮಕ ಚಿಂತನೆಗಳು- ಅನ್ಯ ಪ್ರಭಾವಗಳ ಗೊಬ್ಬರಗಳು - ಅಮೂರ್ತ

ವಿಚಾರಗಳ ಔಷಧಗಳನ್ನು ಯಥೇಚ್ಛವಾಗಿ ಸುರಿದು ಸಹೃದಯ ಪುನರುತ್ಪಾದನಾ ಶಕ್ತಿಯನ್ನು ನಾಶಗೊಳಿಸಲಾಗಿದೆ. ಪ್ರಸ್ತುತ, ತಳರಚನೆಯಲ್ಲಿ ಸಹಜ ಕೃಷಿಯ ವ್ಯವಸಾಯ ಮತ್ತು ಮೇಲುರಚನೆಯಲ್ಲಿ ಸಹಜ ವಿಮರ್ಶೆಯ ವ್ಯವಸಾಯಗಳು ನಡೆಯಬೇಕಾಗಿದೆ. ಚಿತ್ತನೆ-ಬಾಳುವೆ-ಚಿಂತನೆಗಳು ಪರಸ್ಪರ ಸಂಬಂಧವಿಲ್ಲದ ಮೂರು ದಾರಿಗಳಲ್ಲ! ಈ ಮೂರು ನೆಲೆಗಳಲ್ಲಿ ಪರಿಸರ ಸ್ನೇಹಿಯಾದ ಮನೋಧರ್ಮ ಮೂಡಿಬರಬೇಕು. ಇವು ಮೂರು ದಾರಿಗಳಾಗಿ ಒಂದಕ್ಕೊಂದು ಸಂಬಂಧವಿಲ್ಲದಂತಾಗಿ ಬದುಕು ಮೂರಾಬಟ್ಟೆಯಾಗಿ, ದಿಕ್ಕು ತಪ್ಪಿದ ನಾವೆಯಾಗಬಾರದು. ತಿನ್ನುವ ಅನ್ನ, ಜೀವಿಸುವ ಬದುಕು, ಚಿಂತಿಸುವ ಬರೆಹಗಳ ನಡುವೆ ಮುಪ್ಪುರಿ ಸಂಬಂಧ ಇಂದಿನ ಅಗತ್ಯ! ಸಾಹಿತ್ಯವೆಂದರೆ 'ಕೊಟ್ಟ ಕುದುರೆ' ಇದ್ದಂತೆ! ಸಹೃದಯರು ಇದನ್ನು ಏರುವ ಧೀರರೂ ವೀರರೂ ಆಗಬೇಕು. ಆದರೆ, ವಿಮರ್ಶಾ ಪ್ರಸ್ಥಾನಗಳೆಂಬ ಹಲ್ಲಣವ ಹೊತ್ತು ಬಳಲುತ್ತಿದ್ದಾರೆ! ಎಂಬ ಪರಿಸ್ಥಿತಿಯು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿರ್ಮಾಣವಾಗಿದೆ. ಗಗನಚುಂಬಿ ಕಟ್ಟಡಗಳಂತೆ ಬೀಗುತ್ತಾ ಬೆಳೆಯುತ್ತಿರುವ ಅಕ್ಷರದ ಅಹಂಕಾರವನ್ನು ಇನ್ನಾದರೂ ವಿಸರ್ಜಿಸಬೇಕಾಗಿದೆ.

ದಿನಾಂಕ ೬-೨-೨೦೧೦ರಂದು ತುಮಕೂರಿನ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲಿ ನಡೆದ 'ಸ್ವಾತಂತ್ರ್ಯೋತ್ತರ ವಿಮರ್ಶಾ ಚಿಂತನೆಗಳು' ಎಂಬ ಯುಜಿಸಿ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣವನ್ನು ಆಧರಿಸಿದ ಲೇಖನವಿದು.

೧೬, ಶ್ರೀಗೌರಿ, ೪ನೇ ಕ್ರಾಸ್,
ಕನಕನಗರ, ಹೊಸಕೋಟೆ,
ಬೆಂಗಳೂರು ಗ್ರಾಮಾಂತರ
೫೬೨೧೧೪





ಜಾಗತೀಕರಣ ಮತ್ತು ಕನ್ನಡ: ಭಾಷಿಕ ಮತ್ತು ಸಾಂಸ್ಕೃತಿಕ ಗ್ರಹಿಕೆಗಳು

ಮೇಟಿ ಮಲ್ಲಿಕಾರ್ಜುನ

ಸ್ವತಂತ್ರ ಭಾರತ ನಿರ್ಮಾಣದ ಪ್ರಕ್ರಿಯೆಯಲ್ಲಿಯೇ ಆಧುನಿಕರಣ ಹಾಗೂ ಜಾಗತೀಕರಣದ ಮೂಲ ಕಲ್ಪನೆಗಳಿವೆ. ಇದರಿಂದ ಸಾಕಷ್ಟು ಭಾಷಿಕ-ಸಾಂಸ್ಕೃತಿಕ ಗೋಜಲುಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಜಾಗತೀಕರಣವೂ ಒಂದು. ಇದು ರಾಜಕೀಯ-ಸಾಂಸ್ಕೃತಿಕ-ಆರ್ಥಿಕ ದುಷ್ಪರಿಣಾಮಗಳಿಗೂ ಕಾರಣವಾಗಿದೆ. ಅದಕ್ಕಾಗಿ ಭಾರತದ ಇಂದಿನ ಬಹುತೇಕ ಇಕ್ಕಟ್ಟುಗಳಿಗೂ ಜಾಗತೀಕರಣವೇ ಹೊಣೆ ಎನ್ನುವ ಧೋರಣೆಗಳು ನೆಲೆನಿಂತಿವೆ. ಭಾಷೆ, ಸಂಸ್ಕೃತಿ ಹಾಗೂ ಜಾಗತೀಕರಣದ ನಡುವಿನ ಸಂಬಂಧಗಳನ್ನು ಕುರಿತು ಚರ್ಚಿಸುವುದೇ ಈ ಲೇಖನದ ಮುಖ್ಯ ಆಶಯ ಹಾಗೂ ಭಾಷೆಯ ಮೇಲೆ ಜಾಗತೀಕರಣವು ಬೀರಿದ ಒಟ್ಟಾರೆ ಪರಿಣಾಮಗಳೇನು ಅನ್ನುವುದನ್ನೂ ಬಿಡಿಸಿ ನೋಡುವ ಪ್ರಯತ್ನವೂ ಆಗಿದೆ. ಈ ನಿಲುವುಗಳನ್ನೇ ಗುರಿಯಾಗಿಸಿಕೊಂಡು ಇವತ್ತಿನ ಭಾಷಿಕ ಇಕ್ಕಟ್ಟುಗಳ ಸ್ವರೂಪವನ್ನು ಈ ಕೆಳಗಿನ ಕಣ್ಣೋಟಗಳಿಂದ ಅರ್ಥೈಸಿ ನೋಡುವ ಅಗತ್ಯವಿದೆ;

೧. ಭಾಷೆಯನ್ನು ಕೇವಲ ಭಾಷೆಯಾಗಿ ನೋಡದೆ, ಒಂದು ಸಾಮಾಜಿಕ ವಿದ್ಯಮಾನವಾಗಿ ನೋಡುವ ಕ್ರಮ.

೨. ಭಾಷಾರೂಪಗಳನ್ನು ಕೇವಲ ತಾಂತ್ರಿಕ ಪರಿಭಾಷೆಯಾಗಿ ನೋಡದೆ ಅವುಗಳನ್ನು ಸಾಂಸ್ಕೃತಿಕ ರಾಜಕಾರಣದ ಪರಿಭಾಷೆಯಾಗಿ ನೋಡುವ ಅಗತ್ಯ.

ಇಂದು, ಇಂಗ್ಲಿಶ್ ಆರ್ಥಿಕ ಜಾಗತೀಕರಣದ ಭಾಷೆಯಾಗಿ ಬೆಳೆಯುತ್ತಿರುವ ಪ್ರಕ್ರಿಯೆಯ ಹಿಂದೆ ತುಂಬ ಜಟಿಲವಾದ ಚಾರಿತ್ರಿಕ ಒತ್ತಡಗಳಿವೆ. ಸ್ವಾತಂತ್ರ್ಯೋತ್ತರ ಭಾರತದ ಭಾಷಾ ನೀತಿಯನ್ನು

ಗಮನಿಸಿದಾಗ ಹಲವು ಗೊಂದಲಗಳು ಹುಟ್ಟಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಇಂಗ್ಲಿಶ್ ಶಿಕ್ಷಣದ ಪರಿಣಾಮವಾಗಿ, ಇಂಗ್ಲಿಶ್ ಒಂದು ಪ್ರಮುಖ ಭಾಷೆಯಾಗಿ ಮಹತ್ವ ಪಡೆದುಕೊಂಡಿದೆ. ಭಾರತದಲ್ಲಿ ಶತ ಶತಮಾನಗಳಿಂದ ಬಳಕೆಯಲ್ಲಿದ್ದ ಸಾವಿರಾರು ಭಾಷೆಗಳು ತಮ್ಮ ಅಧಿಕೃತ ಅಸ್ತಿತ್ವವನ್ನು ಗಟ್ಟಿಗೊಳಿಸುವಲ್ಲಿ ವಿಫಲವಾಗಿವೆ. ಅದಕ್ಕೆ ಇಂಗ್ಲಿಶ್ ಶಿಕ್ಷಣ ಮಾಧ್ಯಮವಾಗಿ, ಆಡಳಿತ ಮತ್ತು ಸಂಪರ್ಕ ಭಾಷೆಯಾಗಿ ಸಂವಿಧಾನದಿಂದ ಅಧಿಕೃತ ಅಸ್ತಿತ್ವವನ್ನು ಪಡೆದುಕೊಂಡಿದ್ದೇ ಇದಕ್ಕೆ ಕಾರಣ. ಇದರೊಂದಿಗೆ ಹಿಂದಿ ಕೂಡ ಆಡಳಿತ ಮತ್ತು ಸಂಪರ್ಕ ಭಾಷೆಯಾಗಿ ಜಾರಿಗೊಂಡರೂ, ಅದು ಹೆಚ್ಚಿನ ಮಹತ್ವವನ್ನು ಪಡೆಯುವದರಲ್ಲಿ ಸೋತಿದೆ. ಕಾರಣ, ದ್ರಾವಿಡ-ಆರ್ಯ ಭಾಷಾ ಸಂಘರ್ಷದ ಪರಿಣಾಮದಿಂದ ಅದು ತನ್ನ ಸಂವಿಧಾನದ ಮಹತ್ವವನ್ನು ಗಟ್ಟಿಗೊಳಿಸುವಲ್ಲಿ ಯಶಸ್ಸು ಕಾಣಲಿಲ್ಲ ಎಂದೇ ಹೇಳಬೇಕು. ಇದಕ್ಕೆ ಇನ್ನೊಂದು ಮುಖ್ಯ ಕಾರಣ ಏನೆಂದರೆ. ಹಿಂದಿ ಭಾಷೆಯಿಂದ ಹೆಚ್ಚು ಸಾಂಸ್ಕೃತಿಕ-ರಾಜಕೀಯ ಅಪಾಯಗಳು ಬೇರೂರಬಹುದೆಂಬ ಆತಂಕ. ಅಂದರೆ, ಹಿಂದಿ ಭಾಷೆ ಹಾಗೂ ಅದನ್ನಾಡುವ ಜನಸಮುದಾಯ ತನ್ನ ನೇರ ಪ್ರಾಬಲ್ಯ ಮತ್ತು ಯಜಮಾನಿಕೆಯನ್ನು ಸ್ಥಾಪಿಸುವ ಧೋರಣೆಗಳೇ ಇದಕ್ಕೆ ಮೂಲ ಕಾರಣ. ಇದನ್ನು ಗಮನಿಸಿದ ಹಿಂದಿಯೇತರ ಭಾಷಿಕರಿಗೆ ಹಿಂದಿಯನ್ನು ಆಡಳಿತ ಹಾಗೂ ರಾಷ್ಟ್ರೀಯ ಸಂಪರ್ಕ ಭಾಷೆಯಾಗಿ ಒಪ್ಪಿಕೊಳ್ಳಲು ಸಾಧ್ಯವಾಗಿಲ್ಲ. ಅದೇನಾದರೂ ಇರಲಿ ಸಂವಿಧಾನದಲ್ಲಿ ಹಿಂದಿಗೆ ಆ ಸ್ಥಾನ ದಕ್ಕಿರುವುದಂತೂ ದಿಟ.

ಸ್ವಾತಂತ್ರ್ಯ ಸಿಕ್ಕು ಆರು ದಶಕಗಳೇ ಕಳೆದರೂ ಭಾರತದ ಹೆಚ್ಚಿನ ಭಾಷೆಗಳು ಇಂದಿನ ಎಲ್ಲ ಅಗತ್ಯಗಳನ್ನು ಪೂರೈಸುವ ಭಾಷೆಗಳಾಗಿ ರೂಪಗೊಂಡಿಲ್ಲ ಎಂಬ ಆರೋಪವೊಂದು ನೆಲೆನಿಂತಿದೆ. ಈ ಆರೋಪವನ್ನು ತಳ್ಳಿಹಾಕುವ ಯಾವುದೇ ಪುರಾವೆಗಳು ನಮಗೀಗ ಲಭ್ಯವಿಲ್ಲ. ವಸ್ತುಸ್ಥಿತಿಯೊಂದು ಇದೆ ಅನ್ನುವುದನ್ನು ನಿರಾಕರಿಸುವಂತಿಲ್ಲ. ಆದರೆ, ಯಾವುದೇ ಭಾಷೆ ತನ್ನಷ್ಟಕ್ಕೆ ತಾನು ಎಲ್ಲಾ ಬಗೆಯ ಆಶಯವನ್ನು ಅಭಿವ್ಯಕ್ತಪಡಿಸುವ ಕಸುವು ಪಡೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ ಅನ್ನುವುದು ಗಮನಾರ್ಹ. ನಮ್ಮ ಭಾಷೆಗಳಿಗೆ ಎಲ್ಲ ಬಗೆಯ ಆಶಯವನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ರೂಪಿಸಿಕೊಳ್ಳುವ ಸಾಧ್ಯತೆಗಳಿರುವಾಗಲೂ, ಪ್ರಭುತ್ವವು ದೇಶೀ ಭಾಷೆಗಳಿಗೆ ಬೇಕಾದ ಭಾಷಾ ನೀತಿ ಮತ್ತು ಯೋಜನೆಯನ್ನು ಸಮರ್ಥವಾಗಿ ರೂಪಿಸುವಲ್ಲಿ ಸೋತಿದೆ. ದೇಶೀ/ಕನ್ನಡದಂತಹ ಭಾಷೆಗಳ ಸಾಂಸ್ಕೃತಿಕ ಹೊಣೆಹೊತ್ತು ಮುನ್ನಡೆಸಿದ ವಿದ್ವಾಂಸರ ವರ್ಗವು ಇಂತಹ ವ್ಯವಸ್ಥೆಗೆ ಪೂರಕವಾಗಿಯೇ ಕಾರ್ಯನಿರ್ವಹಿಸಿರುವುದು. ಪರಿಣಾಮವಾಗಿ, ಇಂಗ್ಲಿಶ್ ತನ್ನ ಅಗತ್ಯತೆಯನ್ನು ಹೆಚ್ಚು ಹೆಚ್ಚು ಗಟ್ಟಿಗೊಳಿಸುತ್ತ ಹೋಗಿದೆ. ಈ ಭಾಷೆಯಿಂದ ಒದಗಬಹುದಾದ ಸಾಂಸ್ಕೃತಿಕ-ಸಾಮಾಜಿಕ-ಭಾಷಿಕ ಅಪಾಯಗಳ ಮಧ್ಯೆಯು ಇಂಗ್ಲಿಶ್ ಬೇಕೆನ್ನುವ ಹಂಬಲ ಭಾರತದ ಹೆಚ್ಚಿನ ಸಮುದಾಯಗಳಲ್ಲಿ ಬಲವಾಗಿದೆ. ಈಗ ಭಾರತದ ಹೆಚ್ಚಿನ ಭಾಷಾಸಮುದಾಯಗಳು ಇಂಗ್ಲಿಶನೊಂದಿಗೆ ಮುಖಾಮುಖಿ ಮಾಡುವ ಬದಲಾಗಿ ಅದರೊಂದಿಗೆ ಕೊಡುಕೊಳ್ಳುವಿಕೆಯನ್ನು ನಡೆಸುವ ತುಡಿತದಲ್ಲಿವೆ. ಇಂತಹ ಒಂದು ಪ್ರಯತ್ನವನ್ನು ಈಗಾಗಲೇ ಬಿ.ಎಂ.ಶ್ರೀಯವರು ಕನ್ನಡ ಸಂದರ್ಭದಲ್ಲಿ ಮಾಡಿತೋರಿಸಿದ್ದಾರೆ. ಇದು ನಿಜವಾಗಲೂ ಕನ್ನಡ- ಇಂಗ್ಲಿಶ್ ಭಾಷೆಗಳ ನಡುವೆ ನಡೆದ ಕೊಡುಕೊಳ್ಳುವಿಕೆಯೋ, ಅಥವಾ ಕನ್ನಡದ ಮೇಲೆ ಹೇರಿದ ಇಂಗ್ಲಿಶಿನ ಯಜಮಾನಿಕೆಯೋ ಅನ್ನುವುದನ್ನು ಮರುಪರಿಶೀಲಿಸಬೇಕಾಗಿದೆ. ಇದುವರೆಗೂ ಇದನ್ನು ಎಲ್ಲರೂ ಬಹಳ ಬೆರಗಿನಿಂದಲೇ ಸ್ವೀಕರಿಸಿದ್ದಾರೆ. ಶ್ರೀಯವರ 'ಇಂಗ್ಲಿಶ್ ಗೀತೆಗಳು'ಯಿಂದ ಕನ್ನಡಕ್ಕೆ ಒಂದು ಸಾಹಿತ್ಯಿಕ ಕಸುವು ಹಾಗೂ ಸೃಜನಶೀಲ ಸಾಧ್ಯತೆಗಳು ದಕ್ಕಿವೆಯಾ? ಅಥವಾ ಕನ್ನಡಕ್ಕೆ ರೂಪಿಸಿಕೊಳ್ಳಲು ಸಾಧ್ಯವಾಗಿರಬಹುದಾದ ತನ್ನದೇ ಸೃಜನಶೀಲ ನೆಲೆಗಳನ್ನು, ಇಂಗ್ಲಿಶ್ ಏನಾದರೂ ನಾಶ ಮಾಡಿದೆಯಾ?

ಎಂಬ ಪ್ರಶ್ನೆಗಳನ್ನೂ ಬಹಳ ಗಂಭೀರವಾಗಿ ಚರ್ಚಿಸಬೇಕಿದೆ. ಈ ಎಲ್ಲ ಚರ್ಚೆ-ವಾಗ್ವಾದಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕೆಂದರೆ, ಕನ್ನಡ ಭಾಷೆ ನಡೆದುಬಂದ ದಾರಿಯನ್ನು ಹಿಂತಿರುಗಿನೋಡಬೇಕಿದೆ. ಎಂತಹದೇ ಭಾಷಿಕ ಇಕ್ಕಟ್ಟಿನಲ್ಲೂ ಕನ್ನಡವು ಪ್ರತಿರೋಧವನ್ನು ಒಡ್ಡುತ್ತಲೇ ಬೆಳದಿದೆ. ನಿಜ, ಕನ್ನಡಕ್ಕೆ 'ಅಂತರ್ಗತ ಪ್ರತಿರೋಧಶಕ್ತಿ'ಯೊಂದು ಸಿದ್ಧಿಸಿದೆ. ಕನ್ನಡ ರೂಪಿಸಿಕೊಂಡ ಈ ಪ್ರಜ್ಞೆಯು ಕಾಲ-ದೇಶದ ಅಗತ್ಯ ಹಾಗೂ ಅನಿವಾರ್ಯ ಅದ್ಯತೆಗಳನ್ನು ಕಾಪಾಡಿಕೊಳ್ಳುವ ಕ್ರಮವಾಗಿರಬಹುದು. ಆದರೆ, ಇದನ್ನೇ ಮುಂದುವರಿಸಿಕೊಂಡು ಹೋಗುವದರಲ್ಲಿ ಏನಾದರೂ ತೊಡಕುಗಳು ಏರ್ಪಟ್ಟಿವೆಯೆ? ಹಾಗಿದ್ದರೆ ಅಂತಹ ಬೆಳವಣಿಗೆಯ ಹಿಂದಿನ ಪ್ರೇರಣೆಗಳು ಯಾವುವು? ಎನ್ನುವುದು ಮುಖ್ಯ ಪ್ರಶ್ನೆ. ಆಧುನಿಕತೆ ಎಂಬ ಹುಚ್ಚು ಕುದುರೆಯ ಮೇಲಿನ ಮೋಹವೇ ಇಂತಹ ತೊಡಕುಗಳಿಗೆ ಕಾರಣವಾಗಿರಬಹುದು. ಇಂತಹ ಸ್ಪರ್ಧೆಯ ಎಲ್ಲಾ ನಿರ್ಧಾರಗಳು ಅತಿಯಾದ ಮಹತ್ವವನ್ನು ಪಡೆದುಕೊಂಡಿವೆ. ಇಂಗ್ಲಿಶ್ ನಮ್ಮೆಲ್ಲ ಸಾಹಿತ್ಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳಿಗೆ ಒತ್ತಾಸೆಯಾಗಿ ನಿಂತಿದೆ/ನಿಲ್ಲಬೇಕು ಎನ್ನುವ ಧೋರಣೆಗಳೇ ಇದಕ್ಕೆ ಕಾರಣ.

ಇವತ್ತು ಇಂಗ್ಲಿಶನ್ನು ಒಂದು ಭಾಷೆಯಾಗಿ ರೂಢಿಸಿಕೊಳ್ಳುವ ಹಿಂದಿನ ಒತ್ತಡಗಳನ್ನು ಬೇರೆ ಮಾನದಂಡಗಳಿಂದ ಅರ್ಥೈಸಬೇಕು. ಕಾರಣ ಈ ಒತ್ತಡಗಳ ಸ್ವರೂಪ ಬೇರೆಯೇ ನೆಲೆಯಿಂದ ಕೂಡಿದೆ. ಇಂತಹ ಉದ್ದೇಶಗಳ ಹಿಂದಿನ ತಾತ್ವಿಕತೆ ಏನೆಂದರೆ, ಇಂಗ್ಲಿಶ್ 'ಅಂತರ್‌ರಾಷ್ಟ್ರೀಯ ವ್ಯಾಪಾರ ಭಾಷೆ', 'ಕಂಪ್ಯೂಟರ್ ಜಾಲಗಳ ಭಾಷೆ'ಯಾಗಿ ರೂಪುಗೊಂಡಿದೆ. ಹಾಗಾಗಿ ಈ ಭಾಷೆಯಿಂದ ಜಾಗತೀಕರಣಕ್ಕೆ ಹೊಸ ರೀತಿಯ ಆಕಾರದ ಕ್ರಮಗಳು ದಕ್ಕಿದೆ. ಅವುಗಳೆಂದರೆ: ತಂತ್ರಜ್ಞಾನ, ವಿಜ್ಞಾನ ಮತ್ತು ಹೊಸ ಆರ್ಥಿಕ ನೀತಿ ಮುಂತಾದವು. ಈ ಕಾರಣಗಳಿಂದ, ಇಂಗ್ಲಿಶ್ ಭಾಷೆಯು ಸಾಮಾಜಿಕ ಪ್ರಗತಿಯ, ರಾಜಕೀಯ ಆಕಾರದ ಸಾಧನವಾಗಿದೆ. ಹಾಗೂ ಇಂಗ್ಲಿಶ್‌ನಿಂದಲೇ ಬಂಡವಾಳಶಾಹಿಗಳು ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಂಡಿದ್ದಾರೆ. ಅಂದರೆ ಇಂಗ್ಲಿಶ್ ಕೇವಲ ರಾಜನ ಭಾಷೆಯಾಗಿ ಉಳಿದಿಲ್ಲ. ಈ ಭಾಷೆಯನ್ನು ಯಾರು ಬಳಸುತ್ತಾರೋ ಅವರಿಗೆ ಅದೊಂದು ಆಯುಧವಾಗಿ ದಕ್ಕಿದೆ ಎಂಬ ವಾದಗಳೂ ತಲೆಯೆತ್ತಿವೆ. ಬಹುಶಃ ಈ ಕಾರಣಗಳಿಂದಲೇ ಇಂದು ಇಂಗ್ಲಿಶ್ ಹೊಸ ಆರ್ಥಿಕ ನೀತಿ, ಜಾಗತಿಕ ಸಮುದಾಯಗಳ ನಡುವೆ ಸಂಪರ್ಕ ಕಲ್ಪಿಸುವ ಭಾಷೆಯಾಗಿ ಎಲ್ಲ ಕಡೆಗೂ ಹಬ್ಬುತ್ತಿದೆ. ಹಾಗೇನೆ ಇವತ್ತಿನ ಆರ್ಥಿಕ ನೀತಿ ಹಾಗೂ ಅಧಿಕಾರದ ಭಾಷೆಯಾಗಿಯೂ ರೂಪಗೊಂಡಿರುವುದಕ್ಕೆ ಸಾಧ್ಯವಾಗಿದೆ. ಈ ಕಾರಣದಿಂದಲೇ ಮೇಲ್ ವರ್ಗ ಅಥವಾ ಪ್ರತಿಷ್ಠಿತರ ಅಧಿಕಾರ ಮತ್ತು ಶಕ್ತಿಯ ಮೂಲ ಇಂಗ್ಲಿಶ್ ಎನ್ನುವದರಲ್ಲಿ ಯಾವುದೇ ಸಂಶಯವಿಲ್ಲ. ತಂತ್ರಜ್ಞಾನ, ಸಾಂಸ್ಕೃತಿಕ ಅಧಿಕಾರ ಹಾಗೂ ಆರ್ಥಿಕತೆಯ ನಿಕಟಸಂಪರ್ಕದಿಂದ ಒಂದು ಭಾಷೆಯ ಪ್ರಾಬಲ್ಯ ಹೇಗೆಲ್ಲ ಹೆಚ್ಚುತ್ತದೆ ಅನ್ನುವುದಕ್ಕೆ ಇಂಗ್ಲಿಷೇ ಸಾಕ್ಷಿ. ಇಂಗ್ಲಿಶ್ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ, ಇಂತಹ ಸಂಬಂಧಗಳ ಸ್ವರೂಪ ಇನ್ನೂ ಹೆಚ್ಚು ಮನವರಿಕೆಯಾಗುತ್ತದೆ. ಇಂತಹ ಅಧಿಕಾರ ಸಂಬಂಧಗಳ ಸಹಯೋಗದಿಂದ ಯಾವುದೇ ಭಾಷೆಯಾದರೂ ಕೂಡ ಅಧಿಕಾರಸ್ಥ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಈ ಪ್ರಕ್ರಿಯೆಯು ಲಿಂಗ್ವಿಸ್ಟಿಕ್ ಮಾರ್ಕೆಟನ್ನು ರೂಪಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಅಂತರ್‌ರಾಷ್ಟ್ರೀಯ ಸಾಮಾಜಿಕ ಸಂಘಟನೆಗಳೆಂದೇ ಬೀಗುವ ವರ್ಲ್ಡ್‌ಬ್ಯಾಂಕ್, ಗ್ಯಾಟ್ ಮತ್ತು ಜಿ೭ ಮುಂತಾದವು ಇಂಗ್ಲಿಶನ್ನು ತಮ್ಮ ಮಾರುಕಟ್ಟೆಯ ಹುನ್ನಾರಕ್ಕೆ ಬಳಸಿಕೊಳ್ಳುತ್ತಿವೆ. ಭಾಷೆ ಸಾಮಾಜಿಕ ಸಂವಹನಕ್ಕೆ ಪರಿಣಾಮಕಾರಿ ಆಯುಧ ಅನ್ನುವುದೇ ಇದಕ್ಕೆ ಕಾರಣ. ಹಾಗೂ ಮಾನವನ ವರ್ತನೆಗೆ ಮೂಲದ್ರವ್ಯವು ಭಾಷೆಯಾಗಿರುವುದೇ ಇದಕ್ಕೆ ಮತ್ತೊಂದು ಕಾರಣ. ಇವತ್ತಿನ ಈ ಎಲ್ಲ ತಾಂತ್ರಿಕ-ವೈಜ್ಞಾನಿಕ ಸನ್ನಿವೇಶಕ್ಕೆ ಪೂರಕವಾಗುವ ಭಾಷಿಕ ಸಾಮರ್ಥ್ಯವನ್ನು ಕನ್ನಡಕ್ಕೆ ದಕ್ಕಿಸಿಕೊಡುವ ಪ್ರಯತ್ನಗಳು ಇವತ್ತಿಗೂ ನಿರಾಶದಾಯಕ. ಇಂತಹ ಪ್ರಯತ್ನಗಳು ಇನ್ನಾದರೂ

ಅನುಷ್ಠಾನಗೊಂಡರೆ ಕನ್ನಡವನ್ನು ನೆಚ್ಚಿರುವ ಸಮುದಾಯಗಳ ಅರಿಯುವನ್ನು ಈಡೇರಿಸುವ ಪ್ರಯತ್ನಗಳು ಸಫಲವಾಗುತ್ತವೆ.

ನಾವು ಯಾವಾಗಲು ಭಾವನಾತ್ಮಕ ಮತ್ತು ಉದ್ವೇಗದ ಮಾತುಗಳಿಂದ ಕನ್ನಡದ ಸೈಜ ಪ್ರಜ್ಞೆಯನ್ನು ಬೆಳಸುವುದು ಅಸಾಧ್ಯ. ಇಂಗ್ಲಿಶ್ ಕೇವಲ ಒಂದು ಭಾಷೆಯಾಗಿ ಮಾತ್ರ ದಕ್ಕಿದಲ್ಲ ಅದೊಂದು ಅಭಿವ್ಯಕ್ತಿ ಮಾಧ್ಯಮವಾಗಿ, ಜ್ಞಾನ ಭಾಷೆಯಾಗಿ, ದಲಿತ ಹಿಂದೂಳಿದ ಸಮುದಾಯಗಳ ಬಿಡುಗಡೆಯ ಕುರುಹು ಆಗಿ, ಮತ್ತು ಜಾಗತಿಕಸಂಪರ್ಕ ಮಾಧ್ಯಮವಾಗಿ ಸಿಕ್ಕಿದೆ. ಇದರ ಹೊರತಾಗಿಯೂ, ಇವತ್ತಿನ ಎಲ್ಲ ರಾಷ್ಟ್ರೀಯ-ಅಂತರ್ ರಾಷ್ಟ್ರೀಯ ರಾಜಕೀಯ-ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಪ್ರತಿರೋಧ ಒಡ್ಡುವ ಒಂದು ಪ್ರಬಲ ಅಸ್ತ್ರವಾಗಿಯೂ ಇಂಗ್ಲಿಶ್ ದಕ್ಕಿರುತ್ತದೆ. ಇದು ಕೇವಲ ವಸಾಹತುಶಾಹಿ ಪ್ರಾಬಲ್ಯ ಮೆರೆದ ದೇಶಗಳ ಮಾತೃಭಾಷೆ ಮಾತ್ರವಾಗಿ ಉಳಿದಿಲ್ಲ. ಜಾಗತೀಕರಣದ ಅಪಾಯಗಳನ್ನು ಬಿತ್ತರಿಸುವಲ್ಲಿ ಇಂಗ್ಲಿಶ್‌ನ ಪಾತ್ರ ಅಗಾಧವಾಗಿದೆ. ಅದಕ್ಕಾಗಿ ಇಂಗ್ಲಿಶ್‌ಗೆ ಒಂದು ಯಜಮಾನಿಕೆಯನ್ನು ಪಡೆಕೊಳ್ಳುವುದಕ್ಕೆ ಸಾಧ್ಯವಾಗಿರ ಬಹುದು. ಇಂತಹ ಎಲ್ಲ ಅಪಾಯ ಹಾಗೂ ಯಜಮಾನಿಕತೆಯನ್ನು ಇಂಗ್ಲಿಶ್‌ನಿಂದಲೇ ಎದುರಿಸುವ ಸಾಧ್ಯತೆಗಳು ಸಿಗ್ಗಿಸಿದ್ದೂ ವಿಚಿತ್ರವಾಗಿ ಕಂಡರೂ ಅದೇ ವಾಸ್ತವ. ಇಂತಹ ವಾದಗಳು ಹೆಚ್ಚು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಇಂತಹ ಸಮರ್ಥನೀಯ ವಾದಗಳನ್ನು ಮಂಡಿಸುವವರು, ಇಂಗ್ಲಿಶ್‌ನ ಬೇಡಿಕೆಯನ್ನು ಮುಂದೊಡ್ಡುತ್ತಾರೆ. ಉದಾ.ಗೆ ಭಾರತೀಯರು ಇಂಗ್ಲಿಶ್ ಶಿಕ್ಷಣದಿಂದಲೇ ಜಗತ್ತಿನ ಹಲವಾರು ವಲಯಗಳಲ್ಲಿ ತಮ್ಮ ಪೈಪೋಟಿಯನ್ನು ಒಡ್ಡಲು ಸಾಧ್ಯವಾಗಿದೆ. ಈ ಎಲ್ಲ ಚರ್ಚೆಗಳನ್ನು ಬಿಡಿಸಿ ನೋಡಿದಾಗ, ಇಂಗ್ಲಿಶ್‌ನ್ನು ಹೇಗೆ ಎದುರಾಗಬೇಕು ಅನ್ನುವುದೇ ಒಂದು ಸವಾಲು. ಭಾರತದ ಸಮಾಜಗಳಲ್ಲಿದ್ದ ಸಾಂಸ್ಕೃತಿಕ ಅಸಮಾನತೆಯನ್ನು ಇಂಗ್ಲಿಶ್ ಬಗೆಹರಿಸುತ್ತದೆ ಎಂದಾದರೆ, ನಮ್ಮ ದೇಶೀ ಭಾಷೆಗಳ ಅಸ್ತಿತ್ವವನ್ನು ಪರಿಭಾವಿಸುವ ಬಗೆಗಳು ಯಾವವು? ದಲಿತ ಮತ್ತು ಹಿಂದುಳಿದ ಸಮುದಾಯಗಳಿಗೆ ನಮ್ಮ ದೇಶೀ ಭಾಷೆಗಳೇ ಶತ್ರುಗಳಾಗಿವೆ ಎನ್ನುವುದಾದರೆ, ಇದರ ಹಿಂದಿನ ಉದ್ದೇಶಗಳೇನು? ಎಂಬುದನ್ನು ಅರ್ಥೈಸಿಕೊಂಡರೆ ಸಾಲದು. ಈ ದೇಶೀ ಭಾಷೆಗಳನ್ನು ಮುನ್ನೆಲೆಗೆ ತರುವ ನೆಲೆಗಳು ಹೇಗಿರಬೇಕು ಅನ್ನುವುದನ್ನು ಮರುಶೋಧಿಸುವ ಜರೂರು ಎದ್ದು ಕಾಣುತ್ತದೆ. ನಮ್ಮ ದೇಶೀ ಭಾಷೆಗಳು ಎಲ್ಲ ಬಗೆಯ ಸಾಮಾಜಿಕ-ಸಾಂಸ್ಕೃತಿಕ ಶೋಷಣೆ ಹಾಗೂ ತರತಮಗಳಿಗೆ ಒತ್ತಾಸೆಯಾಗಿ ನಿಂತಿರುವುದೇ, ಇವತ್ತು ಇಂಗ್ಲಿಶ್ ಬೇಕು ಎನ್ನುವ ಹಂಬಲ ಇನ್ನೂ ಹೆಚ್ಚಾಗಿದೆ.

ಈ ವಸಾಹತೋತ್ತರ ಸನ್ನಿವೇಶವು ಹುಟ್ಟಿಸಿದ ಭಾಷಿಕ-ಸಾಂಸ್ಕೃತಿಕ ಬಿಕ್ಕಟ್ಟುಗಳ ಸ್ವರೂಪ ಆರ್ಥಿಕತೆಯ ಮೂಲದ್ದು ಎಂದು ಮೇಲುನೋಟಕ್ಕೆ ಕಂಡರೂ, ಈ ಮೇಲಿನ ಚರ್ಚೆಗಳ ಪ್ರಕಾರ ಇದರ ಉದ್ದೇಶ ಆರ್ಥಿಕತೆ ಮಾತ್ರವಲ್ಲ ಅನ್ನುವುದು ಸಾಬೀತಾಗಿದೆ. ಈ ವಾದವು ಇಂಗ್ಲಿಶ್‌ನ್ನು ಕೇವಲ ಜಾಗತೀಕರಣ / ಉದಾರೀಕರಣದ ಪ್ರಣಾಳಿಕೆಯ ಮಾಧ್ಯಮವನ್ನಾಗಿ ನೋಡುವುದಿಲ್ಲ. ಒಂದು ಸಮುದಾಯದ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಭಾಷೆಯ ಪಾತ್ರ ಎಷ್ಟೊಂದು ಮಹತ್ವದ್ದು ಎಂಬುದನ್ನು ಅರಿತುಕೊಳ್ಳಬೇಕಿದೆ. ವಿಪರ್ಯಾಸವೆಂದರೆ, ಒಂದು ಕಾಲದಲ್ಲಿ ಭಾಷೆ ತನ್ನ ಅಂತಃಸತ್ವವನ್ನು ಹೆಚ್ಚಿಸಿಕೊಳ್ಳಲು ಸಾಹಿತ್ಯ-ಸಂಸ್ಕೃತಿ ಚಹರೆಗಳ ಮಾಧ್ಯಮವಾಗಿ ಇರಬೇಕಿತ್ತು, ಆದರೆ, ಇವತ್ತು ಒಂದು ಭಾಷೆ ಬಲವಾಗಿ ರೂಪಗೊಳ್ಳಬೇಕೆಂದರೆ, ವಾಣಿಜ್ಯ ಮತ್ತು ಆರ್ಥಿಕ ರಚನೆಗಳ ಸಹಯೋಗ ಹೊಂದಬೇಕು. ನಮ್ಮ ಭಾಷಿಕ ಅನುಸಂಧಾನದ ಮಾದರಿಗಳು ಎಂತಹ ಸಾಂಸ್ಕೃತಿಕ ಅಪಾಯಕ್ಕೆ ನಮ್ಮನ್ನು ತಳ್ಳುತ್ತವೆ ಎನ್ನುವ ವಿಚಾರವೇ ಗಾಬರಿಯನ್ನು ಹುಟ್ಟಿಸುತ್ತದೆ. ಸಮುದಾಯದ ಏಳ್ಗೆಯ ಪಕ್ಷ ಎದುರಾದಾಗ,

ನಮ್ಮ ಭಾಷಿಕ ಅಸ್ಮಿತೆಗಳ ನೆಲೆಗಳೂ ಕೂಡ ಬೇರೆಯಾಗುತ್ತವೆ. ಆದರೆ ವಿಧಿಯಿಲ್ಲದೆ ಜಾಗತೀಕರಣವನ್ನು ಅನಿವಾರ್ಯ ಅನಿಷ್ಟವೆಂದು ಒಪ್ಪಿಕೊಂಡು ಅದರ ಎಲ್ಲ ಬಿಕ್ಕಟ್ಟುಗಳನ್ನು ಎದುರಿಸುವ ಮಾನದಂಡವಾಗಿ ನಮ್ಮ ಭಾಷೆಗಳನ್ನು, ವಾಣಿಜ್ಯ ಮತ್ತು ಆರ್ಥಿಕತೆಯ ರಚನೆಗಳ ಮಾಧ್ಯಮವಾಗಿಯೂ ರೂಪಿಸಬೇಕಿದೆ. ಇದನ್ನು ಕೇವಲ ಜಾಗತೀಕರಣದ ಕಾರಣಕ್ಕಾಗಿ ಮಾಡಬೇಕಿಲ್ಲ. ಇಂತಹ ಉದ್ದೇಶಗಳು ನಮ್ಮ ಸಮುದಾಯಗಳ ಸಾಂಸ್ಕೃತಿಕ-ಆರ್ಥಿಕ ಪ್ರಗತಿಯನ್ನು ಗುರಿಯಾಗಿಸಿಕೊಂಡು ನಿರ್ಧರಿಸಬೇಕಿದೆ.

೧೨. ಇವತ್ತಿನ ಜಾಗತೀಕರಣದ ಪ್ರಭಾವದಿಂದ ನಮ್ಮ ತಾತ್ತ್ವಿಕ ಪ್ರಶ್ನೆಗಳು ಮರುರೂಪ ಪಡೆಯುತ್ತಿವೆ. ಈ ಮರುರೂಪಕ್ಕೆ ನಮ್ಮ ಸಮಾಜಗಳ ಏಳ್ಗೆಯೂ ಮುಖ್ಯ ಕಾರಣವಾಗಿದೆ ಅನ್ನುವುದನ್ನು ಮರೆಯುವಂತಿಲ್ಲ. 'ಕನ್ನಡತನ' ಎನ್ನುವ ಅಸ್ಮಿತೆ ಮಾರುಕಟ್ಟೆಯ ಸರಕಾಗಬೇಕಿದೆ ಎಂದು ಆತಂಕ ಪಡುವ ಅಗತ್ಯವಿಲ್ಲ. ಕಾಲ-ದೇಶಕ್ಕೆ ಅನುಗುಣವಾಗಿ ಸಮುದಾಯದ ಆಶೋತ್ತರಗಳನ್ನು ಪೂರೈಸುವುದು ಆಯಾ ಸಮುದಾಯ ನೆಚ್ಚಿಕೊಂಡ ಭಾಷೆಯ ಹೊಣೆ ಅನ್ನುವುದನ್ನು ಗಮನಾರ್ಹವಾದದ್ದು. ಹಾಗಾಗಿ, ಕನ್ನಡ ತನ್ನ ಅಸ್ತಿತ್ವವನ್ನು 'ಭಾಷಾ ಬಳಕೆಯ ವಿವಿಧ ವಲಯಗಳಲ್ಲಿ' ಕಳೆದುಕೊಳ್ಳುವ ಮುಂಚೆಯೇ ಇವತ್ತಿನ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸುವ ಮಾಧ್ಯಮವನ್ನಾಗಿಯೂ ರೂಪಿಸುವ ಜರೂರು ಇದೆ. ಅಂದರೆ ಕನ್ನಡವು ತನ್ನ ಸಾಂಸ್ಕೃತಿಕ ಅವತಾರದೊಂದಿಗೆ ಆರ್ಥಿಕ ಅಗತ್ಯಗಳನ್ನು ಒದಗಿಸುವ ಅವತಾರವನ್ನೂ ತಾಳುವ ಅಗತ್ಯವಿದೆ. ಒಂದು ಜೀವಂತ ಮತ್ತು ಚಲನಶೀಲವಾದ ಭಾಷೆಗೆ ಸಾಂಸ್ಕೃತಿಕ ಮತ್ತು ಆರ್ಥಿಕವಾದ ಎರಡೂ ಆಯಾಮಗಳು ಮುಖ್ಯ. ಇದುವರೆಗೂ, ಕನ್ನಡವು ಸಾಂಸ್ಕೃತಿಕವಾಗಿ ವಿಶ್ವದ ಹಲವು ಸಾಂಸ್ಕೃತಿಕ ಪರಂಪರೆಗಳೊಂದಿಗೆ ಕೊಡು-ಪಡೆಯನ್ನು ನಡೆಸಿದೆ. ಆದರೆ ಇವತ್ತಿನ ಸವಾಲೆನಂದರೆ, ಇಂತಹ ಸಾಂಸ್ಕೃತಿಕ ಪರಂಪರೆಯ ಭಾಷೆಯನ್ನು ಆರ್ಥಿಕ-ವಾಣಿಜ್ಯ ಮಾಧ್ಯಮದ ಪರಿಭಾಷೆಯಾಗಿಯೂ ರೂಪಿಸಬೇಕಿದೆ. ಈ ಭಾಷಿಕ ಪಲ್ಲಟದ ತಾತ್ತ್ವಿಕತೆಯ ಸ್ವರೂಪ ಹೇಗಿರಬೇಕು? ಎಂಬುದುದನ್ನು ನಿರ್ಧರಿಸಬೇಕಿದೆ. ಯಾಕೆಂದರೆ, ಕನ್ನಡ ಭಾಷಿಕರಲ್ಲಿ ಭಾಷೆಯ ಕುರಿತ ಧೋರಣೆಗಳು ಬೇರೆ ಬೇರೆ ನೆಲೆಯಿಂದ ಕೂಡಿರುತ್ತವೆ. ಇದಕ್ಕೆ ಜಾಗತೀಕರಣವೇ ಮುಖ್ಯ ಪ್ರೇರಣೆ ಎಂದು ಮೇಲ್ ನೋಟಕ್ಕೆ ಕಂಡರೂ ಅದು ಪೂರ್ಣ ಸತ್ಯವಲ್ಲ. ಅದಕ್ಕೆ ನಮ್ಮ ಭಾಷಾ ನೀತಿಯ ಇಬ್ಬಂದಿತನವೂ ಮುಖ್ಯ ಕಾರಣವಾಗಿರುತ್ತೆ. ಇದೊಂದು ಚಾರಿತ್ರಿಕ ವಿಪರ್ಯಾಸವೇ ಸರಿ. ಯಾಕೆಂದರೆ, ಭಾರತಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದರು, ಇಂತಹ ಬಹುಭಾಷಿಕ ಸನ್ನಿವೇಶಕ್ಕೆ ಹೊಂದಿಕೆಯಾಗುವ ಭಾಷಾನೀತಿ ಹಾಗೂ ಯೋಜನೆಗಳನ್ನು ರೂಪಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮ್ಮ ಭಾಷಾನೀತಿ ಕುರಿತು ಕೆ. ವಿ. ನಾರಾಯಣವರು ಹೇಳುವ ಮಾತುಗಳು ಗಮನಾರ್ಹವಾಗಿವೆ. ಏನೆಂದರೆ, ''ಅಸಮ ಸಾಮರ್ಥ್ಯದ ಭಾಷೆಗಳ ನಡುವೆ ತೋರಿಕೆಯ ಸಮಾನತೆಯನ್ನು ನಮ್ಮ ಭಾಷಾ ನೀತಿ ಸಾದರಪಡಿಸುತ್ತದೆ' (೧೯೯೮). ಈ ಅಸಮ ಸಾಮರ್ಥ್ಯ ಎನ್ನುವುದು ಭಾಷಿಕವಾದದ್ದಲ್ಲ ಅದು ಆರ್ಥಿಕ-ರಾಜಕೀಯವಾದದ್ದು. ಅಕಾರಸ್ಥ/ ಜಾಗತಿಕ ಭಾಷೆಯು 'ಏಕಭಾಷಾ ವರ್ಗ'ವನ್ನು ನಿರ್ಮಾಣಮಾಡುವುದರೊಂದಿಗೆ ದೇಶೀ ಭಾಷೆಗಳನ್ನು ಅಸಡ್ಡೆಯಿಂದ ನೋಡುವ ಪ್ರವೃತ್ತಿಯು ರೂಪಗೊಳ್ಳುತ್ತದೆ. ಹಾಗೂ ಈ ಭಾಷೆಗಳನ್ನು ಕಲಿಯಬೇಕಿಲ್ಲ ಅನ್ನುವ ಆಲಸ್ಯತನವನ್ನು ಹುಟ್ಟಿಸುತ್ತದೆ. ಅಥವಾ ಅಂತಹ ಕಲಿಕೆಯ ಅವಕಾಶಗಳನ್ನು ಕಡಿತಗೊಳಿಸುತ್ತದೆ ಅಂದರೂ ಅಡ್ಡಿಯಿಲ್ಲ. ಪರಿಣಾಮವಾಗಿ ದೇಶಿ/ ಅಲ್ಪಸಂಖ್ಯಾತರ ಭಾಷೆಗಳು ಅವಸಾನ ಹೊಂದುವ ಆತಂಕದಲ್ಲಿವೆ. ಇದು ಅಂತಹ ಭಾಷೆಗಳ ಪ್ರಸ್ತುತಿಯೇ ಅನಗತ್ಯ ಎನ್ನುವ ಧೋರಣೆಯನ್ನು ಮೂಡಿಸಲಿಕ್ಕೆ ಕಾರಣವಾಗುತ್ತದೆ. ಈ ನಿಲುವುಗಳಿಂದಲೇ ಭಾಷಿಕ ವೈವಿಧ್ಯತೆಯು ಅವಸಾನ ಹೊಂದುತ್ತವೆ. ಜಾಗತೀಕರಣದ ಕಾರಣದಿಂದ ಆರಂಭಗೊಂಡ ಈ ಪ್ರಕ್ರಿಯೆಯು ಜೈವಿಕ ವೈವಿಧ್ಯತೆಯನ್ನೂ

ನಾಶಮಾಡುತ್ತದೆ. ಯಾವುದೇ ಭಾಷೆಯು ತನ್ನ ಸಾವಯುವ ಸಂಬಂಧವನ್ನು ಕಳೆದುಕೊಳ್ಳುವುದೆಂದರೆ, ಅದು ತನ್ನನ್ನು ಆತ್ಮಹತ್ಯೆ ಮಾಡಿಕೊಂಡಂತೆ. ಭಾಷೆಯೊಂದನ್ನು ಅಥವಾ ಭಾಷಿಕ ಜನಾಂಗವೊಂದನ್ನು ಬಲಿಷ್ಠವಾಗಿಸುವ ಕ್ರಮಗಳು ಹೇಗೆ ಎಂಬ ಪ್ರಶ್ನೆ ಈ ಶತಮಾನದ ಪ್ರಮುಖ ಸಮಸ್ಯೆಗಳಲ್ಲಿ ಒಂದು. ಭಾಷೆಯೊಂದು ಬಲಿಷ್ಠವಾಗುವದು ಆ ಭಾಷಿಕ ಜನಾಂಗ ರಾಜಕೀಯ-ಆರ್ಥಿಕವಾಗಿ ಬಲವಾದಾಗ ಎಂಬ ಉತ್ತರ ಸರಳವಾಗಿದ್ದರೂ ಅದು ತುಂಬಾ ಮುಖ್ಯವಾದದ್ದು. ಒಂದು ಭಾಷೆಗೆ ಪ್ರಭುತ್ವದ ಸಹಯೋಗ/ಆಶ್ರಯ ದೊರೆತಾಗ, ಅದು ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಅಧಿಕಾರ, ಆರ್ಥಿಕತೆ, ರಾಜಕೀಯ, ವಿಶ್ವವ್ಯಾಪಾರ ಎಂಬಿತ್ಯಾದಿ ವಲಯಗಳು ಭಾಷಾ ಬೆಳವಣಿಗೆಗೆ ಒತ್ತಾಸೆಯಾಗಿರುತ್ತವೆ. ಹಾಗೂ ಆ ಭಾಷೆಗೆ ಯಜಮಾನಿಕೆಯ ಸ್ಥಾನವನ್ನೂ ಕಲ್ಪಿಸಿಕೊಡುವಲ್ಲಿ ಪ್ರಮುಖವಾಗಿವೆ. ನಿಜ, ಪ್ರಭುತ್ವ ಮತ್ತು ಸಂಸ್ಕೃತಿಗಳೆರಡು ಒಟ್ಟಿಗೆ ಹೋಗಲಾರವು ಎನ್ನುವ ನೀಷೆಯ ವಾದಕ್ಕೆ (ಸಂಸ್ಕೃತಿ ಕಥನ : ಡಿ.ಆರ್.ನಾಗರಾಜ : ೨೦೦೦), ಇದು ತದ್ವಿರುದ್ಧವಾಗಿದೆ. ಆದರೆ ಈ ವಾದವನ್ನು ಸಮರ್ಥಿಸುವ ಪುರಾವೆಗಳು ಇದ್ದರೂ ವಿರಳ. ಈ ಕಾರಣಗಳಿಂದಲೇ ಇಂಗ್ಲಿಶ್, ಹೊಸ ಆರ್ಥಿಕನೀತಿಯ ಮುಖ್ಯ ಪ್ರಣಾಳಿಕೆಗಳಲ್ಲಿ ಒಂದು ಎನ್ನುವದು ಆಶ್ಚರ್ಯವನ್ನುಂಟು ಮಾಡುವ ವಿಷಯ. ಭಾಷೆಯ ಪ್ರಭುತ್ವದೊಂದಿಗಿನ ಅನುಸಂಧಾನದಿಂದ ಅದರ ಸಾಂಸ್ಕೃತಿಕ ಪ್ರಾಮುಖ್ಯತೆ ಕುಂದುವುದು ಎನ್ನುವ ಆರೋಪವು ಇದೆ. ಆದರೆ, ಭಾಷೆಯೊಂದು ನಿರಂತರ ಇಂತಹ ಇಕ್ಕಟ್ಟಿನ ಪ್ರಕ್ರಿಯೆಯಲ್ಲಿ ಸೆಣಸಾಡುತ್ತಲೇ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುತ್ತದೆ. ಇದು ಅದರ ಹೊಣೆಗಾರಿಕೆಯೂ ಆಗಿದೆ.


ಸಮಕಾಲೀನ ಸಾಂಸ್ಕೃತಿಕ-ಶೈಕ್ಷಣಿಕ-ರಾಜಕೀಯ ಸನ್ನಿವೇಶದಲ್ಲಿ ಭಾರತದ ದೇಶೀ ಭಾಷೆಗಳು ಮತ್ತು ಇಂಗ್ಲಿಶ್‌ನ ನಡುವೆ ಏರ್ಪಡುವ ಮುಖಾಮುಖಿ ಹಾಗೂ ಅನುಸಂಧಾನದ ನೆಲೆಗಳು ರೂಪುಗೊಳ್ಳುವ ಕ್ರಮಗಳನ್ನು ಅರ್ಥೈಸುವ ಅಗತ್ಯ ಮತ್ತೆ ಮತ್ತೆ ಪ್ರಸ್ತುತವಾಗುತ್ತದೆ. ಇದಕ್ಕೆ ಈ ಮೇಲಿನ ಚರ್ಚೆಗಳೇ ಸಾಕ್ಷಿ. ಇಂಗ್ಲಿಶ್ ಭಾಷೆಯು ಈಗ ಕೇವಲ ಸಾಮ್ರಾಜ್ಯಶಾಹಿ ಅಥವಾ ವಸಾಹತುಶಾಹಿ ಪ್ರಾಬಲ್ಯದ ಹದ್ದುಬಸ್ತಿನಲ್ಲಿಲ್ಲ. ಅದು ನಿರ್ವಸಾಹತೀಕರಣದ ಮಾನದಂಡ ಹಾಗೂ ಸಾಮಾಜಿಕ ಅಸಮಾನತೆಗಳಿಂದ ಬಿಡುಗಡೆ ಪಡೆಯುವ ಅಸ್ತ್ರವೂ ಆಗಿದೆ. ಎಂತಹ ವಿಚಿತ್ರ ನೋಡಿ, ಇಂಗ್ಲಿಶ್ ಭಾಷೆಗೆ ಸಾಮಾಜಿಕ ಸಬಲೀಕರಣದ ಒಂದು ನೆಲೆ ಇದೆ ಎನ್ನುವ ವಾದವೊಂದು ಇತ್ತೀಚಿಗೆ ಮುಂಚೂಣಿಗೆ ಬಂದಿದೆ. ದಲಿತ ಹಾಗೂ ಹಿಂದುಳಿದ ಸಮುದಾಯಕ್ಕೆ ಸೇರಿದವರು ಹಾಗೂ ಅವರ ಪರವಾಗಿರುವವರು ಈ ವಾದವನ್ನು ಮಂಡಿಸುತ್ತಿದ್ದಾರೆ. ಹಾಗಾಗಿ ಕನ್ನಡವನ್ನೂ ಶೋಷಕರ ಭಾಷೆಯೆಂದೂ, ಶೋಷಣೆಯ ನೆನಪುಗಳಿರುವ ಭಾಷೆಯೆಂದೂ ತಿಳಿಯುತ್ತಾರೆ (ಕೆ.ವಿ. ನಾರಾಯಣ : ೧೯೯೮). ದಲಿತ, ಹಿಂದುಳಿದ ಸಮುದಾಯಗಳಿಗೆ ಯಾಕೆ ಇಂಗ್ಲಿಶ್‌ನ ಹಂಬಲ ದಿನದಿನಕ್ಕೆ ಹೆಚ್ಚುತ್ತದೆ ಅಂದರೆ, ಇದಕ್ಕೆ ಇನ್ನೂ ಒಂದು ಬಹು ಮುಖ್ಯವಾದ ಆಯಾಮವಿದೆ. ತನ್ನನ್ನು ಹೊರಗಿಟ್ಟು ಮುನ್ನಡೆಯುತ್ತಿರುವ ಆಧುನಿಕ ಅಭಿವೃದ್ಧಿಯ ಮಾದರಿಗಳಿಗೆ ಪ್ರತಿಕ್ರಿಯಿಸಲು ಈ ವರ್ಗಗಳು ಅವಕಾಶಕ್ಕಾಗಿ ಹುಡುಕುತ್ತಿರುತ್ತವೆ ಎಂದು ಕಾಣುತ್ತದೆ. ಅಧಿಕಾರ, ಬಂಡವಾಳ, ಕೈಗಾರಿಕೆ ಹಾಗೂ ಸಂಪತ್ತುಗಳು ಕೆಲವೇ ಕೆಲವು ವರ್ಗಗಳಿಗೆ ಸೀಮಿತವಾಗಿವೆ ಎನ್ನುವದು ಕೂಡ ಇವರ ಈ ಬೇಡಿಕೆಗೆ ಮುಖ್ಯ ಕಾರಣ. ಇಂತಹ ಅವಕಾಶಗಳಿಂದ ವಂಚಿತರಾಗಿರುವುದೇ ರೈತರ ಆತ್ಮ ಹತ್ಯೆಗೂ ಕಾರಣವಾಗಿದೆ ಎಂಬ ವಾದಗಳು ಕೇಳಿಬರುತ್ತಿವೆ. ಆರ್ಥಿಕ ಅಭಿವೃದ್ಧಿ ಮತ್ತು ಇಂಗ್ಲಿಶ್ ಶಿಕ್ಷಣದಂತಹ ಅವಕಾಶಗಳಿಂದ ದೂರ ಉಳಿದಿರುವುದೇ ಅವರ ಆರ್ಥಿಕ ಹಿನ್ನಡೆಗೆ ಕಾರಣವಾಗಿದೆ ಎನ್ನುವ ವಾದ ಕುತೂಹಲವನ್ನು ಹುಟ್ಟಿಸಿದರೂ, ಇದು ವಸ್ತುಸ್ಥಿತಿಯೊಂದನ್ನು ವಿವರಿಸುವ ಮಾದರಿಯೂ ಆಗಿದೆ ಎಂಬುದು ದಿಟ.

ಭಾಷೆ ಒಂದು ಸಾಮಾಜಿಕ ಸಂಪನ್ಮೂಲ/ ಬಂಡವಾಳ ಎನ್ನುವುದರಲ್ಲಿ ಸಂಶಯವೇ ಇಲ್ಲ. ಆದರೆ ನಮ್ಮೆದುರಿಗೆ ಇರುವ ಪ್ರಶ್ನೆ ಏನೆಂದರೆ, ಈ ಬಂಡವಾಳವನ್ನು ಹೂಡುವವರು ಯಾರು? ಅಯಾ ಭಾಷಿಕರೇ ಅದರ ಹೂಡಿಕೆದಾರರು ಎನ್ನುವುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿರಲಾರದು. ಆದರೆ, ಇಂಗ್ಲಿಶ್‌ನಂತಹ ಆರ್ಥಿಕ ಸಾಮರ್ಥ್ಯವನ್ನು ಹೊಂದಿರುವ ಭಾಷೆಯ ಹೂಡಿಕೆದಾರರು ಯಾರು ? ಎನ್ನುವುದನ್ನು ನಿರ್ಧರಿಸುವವರು ಮಾತ್ರ ಮೇಲ್/ಪ್ರತಿಷ್ಠಿತ ವರ್ಗ/ಬಂಡವಾಳಶಾಹಿಗಳು ಎನ್ನುವುದು ನಿಶ್ಚಿತ. ಹಾಗಾಗಿ ಇಂಗ್ಲಿಶನ್ನು ಸಾಮ್ರಾಜ್ಯಶಾಹಿ, ನರಭಕ್ಷಕ 'ಪ್ರಿಡೇಟರ್' ಅಥವಾ ಕೊಲೆಗಡುಕ ಭಾಷೆ ಎಂಬ ಮುಂತಾದ ಅಪಾದನೆಗಳಿಗೆ ಗುರಿಮಾಡಲಾಗಿದೆ. ಇಂಗ್ಲಿಶ್ ಒಂದು ಭಾಷೆಯಾಗಿ ಅದು ಏನೂ ಅಲ್ಲ ಎನ್ನುವುದು ದಿಟ. ಆದರೆ ಅದರ ಸಹಯೋಗ ಇರುವುದು ಮಾತ್ರ ಸಾಮ್ರಾಜ್ಯಶಾಹಿ, ನರಭಕ್ಷಕ, ಕೊಲೆಗಡುಕ ಮುಂತಾದ ವರ್ಗದವರೊಂದಿಗೆ ಎನ್ನುವುದು ಸ್ಪಷ್ಟ. ಇಂತಹ ಕೇಂದ್ರೀಕೃತ ಅಧಿಕಾರ ಸಂಬಂಧಗಳನ್ನು ಹಾಗೂ ಭಾಷಿಕ ಏಕಸ್ವಾಮ್ಯ ರಚನೆಗಳನ್ನು ನಿರಚನಗೊಳಿಸುವ ಪ್ರಕ್ರಿಯೆಗಳು ಆರಂಭವಾಗಿವೆ. ಇದು ಭಾಷಿಕ ಮತ್ತು ಸಾಂಸ್ಕೃತಿಕ ಹಕ್ಕು ಪ್ರತಿಪಾದನೆ ಎಂದೇ ಗುರುತಿಸಬೇಕಾಗಿದೆ. ಏಕೆಂದರೆ, ಇಂಗ್ಲಿಶ್‌ನ್ನು ಶೈಕ್ಷಣಿಕ, ಆಡಳಿತ ಹಾಗೂ ಸಂಪರ್ಕ ಭಾಷೆಯಾಗಿ, ಭಾರತೀಯ ಸಂವಿಧಾನವು ಶಾಸನಬದ್ಧವಾಗಿ ಮಾನ್ಯಮಾಡಿದೆ. ಭಾರತದ ಭಾಷಾನೀತಿ ರೂಪಿಸುವ ಪ್ರಕ್ರಿಯೆಯಲ್ಲಿ ಇಂಗ್ಲಿಶ್ ಮಹತ್ವದ ಸ್ಥಾನಪಡೆದಿದೆ. ತ್ರಿಭಾಷಾ ಸೂತ್ರದಂತಹ ನಿಲುವು ಯಾಕೆ ಅಗತ್ಯವಾಗಿತ್ತು. ಇದು ಯಾವುದೇ ಒಂದು ನಿಶ್ಚಿತ ವರ್ಗ ಅಥವಾ ಸಮುದಾಯವನ್ನು ಉದ್ದೇಶಿಸಿ ಅಸ್ತಿತ್ವಕ್ಕೆ ಬಂದಿದೆಯಾ? ಹಾಗೇನೂ ಇಲ್ಲವಲ್ಲ. ಇಂಗ್ಲಿಶ್ ನಿಜವಾಗಿಯೂ ಭಾರತೀಯ ಭಾಷೆಗಳಿಗೆ ಅಪಾಯವನ್ನುಂಟು ಮಾಡುವ ಭಾಷೆಯೇ ಆಗಿದ್ದರೆ, ಅದನ್ನು ಸಾಂವಿಧಾನಿಕ ಚೌಕಟ್ಟಿನಿಂದ ಹೊರಗಿಡಬಹುದಿತ್ತಲ್ಲವೇ? ಸಂಸ್ಕೃತ ಭಾಷೆಯಿಂದಲೂ ಸಾಕಷ್ಟು ಅಪಾಯಗಳು ಕನ್ನಡದ ಮೇಲಾಗಿವೆ. ಆದಾಗ್ಯೂ, ಸಂಸ್ಕೃತಕ್ಕೆ ತಾಯ್ತನದಸ್ಥಾನ ಯಥಾವತ್ತಾಗಿ ಸಿಕ್ಕಿರುವುದು ವಿಪರ್ಯಾಸವೇ ಸರಿ. ಆದರೆ, ಈ ತಾಯ್ತನ ಯಾವ ಸ್ವರೂಪದ್ದು, ಅದು ಹೆತ್ತತಾಯ್ತನವ್ವೋ ಅಥವಾ ಮಲತಾಯಿತನವ್ವೋ ಎಂದು ಬಿಡಿಸಿ ನೋಡುವ ಯಾವ ಪ್ರಯತ್ನಗಳು ನಡೆದೇ ಇಲ್ಲ. ಸಂಸ್ಕೃತ ಮತ್ತು ಇಂಗ್ಲಿಶ್ ಈ ಎರಡು ಭಾಷೆಗಳಿಂದ ಕನ್ನಡದ ಬೆಳವಣಿಗೆಗೆ ತೊಡಕಾಗಿದೆ. ಈ ಎರಡನ್ನೂ ಹೋಲಿಸಿ ನೋಡಿದರೆ, ಇಂಗ್ಲಿಶಗೆ ಇರುವ ಸಾರ್ವತ್ರಿಕ ಮತ್ತು ಉದಾರವಾದಿ ಗುಣ ಸಂಸ್ಕೃತಕ್ಕೆ ಇಲ್ಲ. ಇವತ್ತಿಗೂ ಸಂಸ್ಕೃತ ಧರ್ಮ/ವರ್ಗದ ಭಾಷೆಯಾಗಿಯೇ ಉಳಿದುಕೊಂಡಿದೆ. ಸ್ಪೃಶ್ಯ ಮತ್ತು ಅಸ್ಪೃಶ್ಯದಂತಹ ದ್ವೈತಾಟವು ಇನ್ನೂ ಹಾಗೇ ನೆಲೆ ನಿಂತಿದೆ. ಆದರೆ, ಇಂತಹ ಯಾವ ಲೇಪನವು ಕೂಡ ಈಗಿನ ಇಂಗ್ಲಿಶ್‌ಗೆ ಇಲ್ಲ ಎನ್ನುವುದು ಗಮನಾರ್ಹ. ಹಾಗಾಗಿ, ಆರ್ಥಿಕ ಪ್ರಗತಿ/ಅಭಿವೃದ್ಧಿಯ ತುಡಿತದಲ್ಲಿರುವ ಸಮುದಾಯಗಳು ಇಂಗ್ಲಿಶ್‌ನ್ನು ಆಯ್ಕೆ ಮಾಡಿಕೊಳ್ಳುತ್ತವೆ.

ಇದು ಬೆಂಗಳೂರಿನ ಆಚಾರ್ಯ ಪಾಠ ಶಾಲೆಯಲ್ಲಿ ಆಯೋಜಿಸಿದ್ದ 'ಜಾಗತೀಕರಣ ಮತ್ತು ಕನ್ನಡ' ಎಂಬ ವಿಚಾರ ಸಂಕಿರಣದಲ್ಲಿ ದಿನಾಂಕ ೧೦-೯-೨೦೦೮ರಂದು ಮಾಡಿದ ಭಾಷಣವನ್ನು ಆಧರಿಸಿ ಬರೆದ ಟಿಪ್ಪಣಿ.

ಭಾಷಾ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು
ಕುವೆಂಪು ವಿಶ್ವವಿದ್ಯಾಲಯ
ವಿದ್ಯಾನಗರ - ೫೭೭ ೨೦೩, ಶಿವಮೊಗ್ಗ

ಎಂ. ವ್ಯಾಸ
ಹೀಗೊಂದು ಸಂಸ್ಮರಣೆ



ಎನ್.ಎಸ್. ಶ್ರೀಧರಮೂರ್ತಿ

'ಆಡಲ್ಪಟ್ಟ ಮಾತುಗಳು ಒಂದು ಬದುಕನ್ನು ನಿರ್ಮಿಸಲು ಹೇಗೆ ಶಕ್ತವಾಗುತ್ತವೋ ಹಾಗೇ ಆಡಲಾಗದ ಮಾತುಗಳೂ ಶಕ್ತವಾಗುತ್ತದೆ.

ಇದು ಎಂ.ವ್ಯಾಸ ಅವರ 'ರಥ' ಕಿರುಕಾದಂಬರಿಯ ಆರಂಭಿಕ ಸಾಲುಗಳು. ಒಂದು ಅರ್ಥದಲ್ಲಿ ಇದು ಅವರ ಕಥನ ಮಾರ್ಗದ ಕುರಿತ ವ್ಯಾಖ್ಯಾನವೂ ಹೌದು. 'ರಥ' ಪ್ರಕಟವಾಗಿದ್ದು ತುಷಾರ ಮಾಸಪತ್ರಿಕೆಯಲ್ಲಿ, ನಾನು ಆಗಷ್ಟೇ ಅರಿವಿನ ಪ್ರಪಂಚಕ್ಕೆ ಕಾಲಿಟ್ಟಿದ್ದೆ ಅದಕ್ಕೆ ಮುಂಚೆ ವ್ಯಾಸರ ಕತೆಗಳನ್ನು ಓದಿದ್ದರೂ ಯಾವುವೂ ನನ್ನ ಗ್ರಹಿಕೆಯ ತೆಕ್ಕೆಗೆ ನಿಖರವಾಗಿ ದಕ್ಕಿರಲಿಲ್ಲ. ಆದರೆ ರಥದ ವಿನ್ಯಾಸವೇ ಬೇರೆ, ಸ್ತ್ರೀ ನಿರೂಪಣಾ ಕ್ರಮದಲ್ಲಿರುವ ಇದರ ಸ್ವರೂಪವಲ್ಲಿ ನಾಯಕಿ ಶೀಲಾ ತನ್ನ ಬದುಕನ್ನು ರವಿಗೆ ಹೇಳಿಕೊಳ್ಳುತ್ತಾ ಹೋಗುತ್ತಾಳೆ. ಇಡೀ ಕಥನದಲ್ಲೆಲ್ಲೂ ರವಿ ಮಾತಾಡುವುದಿಲ್ಲ. ಒಂದು ಅರ್ಥದಲ್ಲಿ ಇದು ಆತ್ಮ ನಿವೇದನೆಯೇ, ಆದರೆ ಹೀಗೆ ನಿವೇದಿಸಲ್ಪಡುವ ಕೇಂದ್ರದಿಂದ ರವಿ ಸೂಕ್ಷ್ಮವಾಗಿ ಜರುಗುತ್ತಾ ಹೋಗಿ ಕೊನೆಗೆ ಮಾಯವಾಗಿ ಬಿಡುತ್ತಾನೆ. ಅಲ್ಲಿಗೆ ಮನುಷ್ಯನ ರಥ ತಟ್ಟನೆ ನಿಂತು ಬಿಡುತ್ತದೆ. ವಸ್ತುವಿಗಿಂತ ಅದರಲ್ಲಿ ದಟ್ಟವಾಗಿ ಜೋಡಿಸಲ್ಪಟ್ಟ ವಿವರಗಳು, ನನ್ನನ್ನು ಅಪಾರವಾಗಿ ಸೆಳೆದಿದ್ದವು. ಕೇಂದ್ರ ಪಾತ್ರವಾದ ಸುಶೀಲಾಳಿಗಿಂತಲೂ, ಅಂಚಿನಲ್ಲಿ ಸರಿದಾಡುವ, ದುರಂತಕ್ಕೆ ಒಳಗಾಗುವ ನಾಯಕಿಯ ತಾಯಿಯ ಪಾತ್ರ,

ಅವಳ ತಂದೆಯ ಅಸಹಾಯಕತೆ, ಇದ್ದಕಿದ್ದಂತೆ ಬದುಕಿನಲ್ಲಿ ಬಂದು ಚಿರಪರಿಚಿತನಂತಾಗಿ ಬಿಡುವ ಕೃಷ್ಣಕಾಂತ್, ಇದಕ್ಕೆ ಸಮಾನಾಂತರವಾಗಿ ರವಿಯ ಪತನ, ಉಮೆಯ ದುಃಸ್ಥಿತಿ ಎಲ್ಲವೂ ಸಹಜ ಎನ್ನಿಸಿತ್ತು.

ಇಲ್ಲಿಂದ ಮುಂದೆ ನಾನು ವ್ಯಾಸರ ಕತೆಗಳನ್ನು ಓದುತ್ತಾ ಹೋಗಿದ್ದೇ ಈ ಕಿರು ಕಾದಂಬರಿಯ ಬೆಳಕಿನಿಂದ. ಇದರಿಂದ ಅವರ ಕತೆಗಳ ಪಾತ್ರಗಳು ಚಿರಪರಿಚಿತವಾದವು, ಅವರ ನೋವುಗಳು ಹೃದಯವನ್ನು ಮುಟ್ಟುತ್ತಿದ್ದವು. ಇನ್ನೊಂದೆಡೆ ವಿಮರ್ಶಾ ಪ್ರಪಂಚದಲ್ಲಿ ವ್ಯಾಸರಿಗೆ ವಿಕ್ಷಿಪ್ತ ಕತೆಗಾರ ಎಂಬ ವಿಶ್ಲೇಷಣೆ ಇತ್ತು. ಅವರ ವ್ಯಕ್ತಿತ್ವದ ಬಗ್ಗೆಯೂ ಗುಮಾನಿ ಇತ್ತು. ಇಂತಹ ಹಲವು ಪಿಸು ಮಾತುಗಳನ್ನು ಕೇಳಿಕೊಳ್ಳುತ್ತಲೇ ನನ್ನ ಚಿಂತನೆಗಳು ತೆರೆದುಕೊಳ್ಳಲಾರಂಭಿಸಿದವು. ಈ ಹಂತದಲ್ಲೇ ಎಂ.ವ್ಯಾಸ ಅವರ 'ಕೃತಿ' ಸಂಕಲನ ಬಂದಿತ್ತು, ಅದಕ್ಕೆ ಮುನ್ನುಡಿ ಬರೆದ ಡಾ.ವಿಜಯ ಅವರು 'ವ್ಯಾಸ'ರ ಕತೆಗಳಲ್ಲಿ ಬರುವ ಹೆಣ್ಣುಗಳು 'ದಿಟ್ಟನಿಲುವಿನವರು ಅವರ ಇಚ್ಛೆಯನ್ನು ಪೂರೈಸಿಕೊಳ್ಳುವವರು, ಸಾವಿನಲ್ಲೂ ಗೆಲ್ಲುವಂಥವರು, ಕಾಮದಲ್ಲೂ ವಿಜೃಂಭಿಸುವ, ಪುರುಷ ದಂಗಾಗಿ ನಿಲ್ಲುವಂಥ ಶಕ್ತ ಮೈ-ಮನಸ್ಸಿನವರು, ಅವರು ಶಾಪ-ವರಗಳೆರಡನ್ನು ಮುಖಕ್ಕೆ ರಾಚುವಂತೆ ಕೊಡಬಲ್ಲವರು' ಎಂಬ ಮಾತುಗಳನ್ನು ಸೂಚಿಸಿದ್ದರು. ಅದು ನನಗೆ ಒಪ್ಪಿಗೆ ಎನ್ನಿಸಲಿಲ್ಲ. ವ್ಯಾಸರ ಕತೆಗಳ 'ಹೆಣ್ಣು'ಗಳೂ ಕೂಡ ಅರ್ಧಾವತಾರವೇ ಎಂಬುದು ನನ್ನ ಗ್ರಹಿಕೆಯಾಗಿತ್ತು, ಇದನ್ನು ಅವರೊಂದಿಗೆ ಚರ್ಚಿಸಿದೆ, ಅವರು 'ಇದನ್ನೆಲ್ಲ ಬರೆಯಿರಿ, ವ್ಯಾಸರ ಕುರಿತು ಇಂತಹ ಚರ್ಚೆಗಳಾಗಬೇಕು.' ಎಂದರು. ಈ ಪ್ರೇರಣೆಯಿಂದಲೇ ಮಲ್ಲಿಗೆ ಮಾಸ ಪತ್ರಿಕೆಯ ನನ್ನ ಅಂಕಣದಲ್ಲಿ ಒಂದು ಲೇಖನ ಬರೆದೆ, ಅದಕ್ಕೆ ವ್ಯಾಸರು ಪ್ರತಿಕ್ರಿಯಿಸಿದರು. ಅದು ಮಾಮೂಲಿ ಕಥೆಗಾರನ ಪ್ರತಿಕ್ರಿಯೆ ಆಗಿರಲಿಲ್ಲ.

'ಬೆಳಕಿನ ಬೆರಗು' ಲೇಖನಕ್ಕೆ ಕೃತಜ್ಞತೆಗಳು. ಇನ್ನೊಂದು ಮುಖದಲ್ಲಿ ನನ್ನ ಕತೆಗಳನ್ನು ನೋಡಿದ್ದೀರಿ.. ನಿಮ್ಮ ಒಳನೋಟಗಳು ನನಗೆ ತುಂಬಾ ಖುಷಿಕೊಟ್ಟಿತು. ಬಹಳ ಸುಲಭವಲ್ಲದ ತಿರುಳನ್ನು ಬಗೆದು ನೋಡಿದ್ದೀರಿ, ಅದಕ್ಕೆ ಕುರುವೊಮ್ಮೆ ನೋಯುತ್ತದೆ, ಮರ್ಮ ಸೀಳಿದಾಗ ಹಾಗಾಗುತ್ತದೆ, ನಾನೆಂದೂ ಪರಿಪೂರ್ಣನಲ್ಲ

ಹೀಗೆ ಬರೆದ ವ್ಯಾಸರ ನಂಟು ಈ ಪತ್ರಕ್ಕೆ ಸೀಮಿತವಾಗಲಿಲ್ಲ, ನೂರಾರು ಪತ್ರ, ಎಸ್.ಎಂ.ಎಸ್‌ಗಳ ಮೂಲಕ ಚಿರಪರಿಚಿತರಾಗುತ್ತಾ ಹೋದರು. ಬೆಂಗಳೂರಿಗೆ ಬಂದಾಗಲೆಲ್ಲ ನಮ್ಮ ಮನೆಗೆ ಭೇಟಿ ನೀಡಬಲ್ಲಷ್ಟು ಖಾಸಗಿ ವಲಯಕ್ಕೆ ಬಂದರು. ಹೀಗೆ ನನಗೆ ಪರಿಚಿತರಾದ ವ್ಯಾಸರು ಬಹಳ ಜನ ಗ್ರಹಿಸಿದಂತೆ ವಿಕ್ಷಿಪ್ತರಾಗಿರಲಿಲ್ಲ, ದೈನಂದಿನ ಬದುಕಿನಿಂದ ವಿಮುಖರಾಗಿರಲಿಲ್ಲ. ಅವಧೂತರಂತೂ ಮೊದಲೇ ಆಗಿರಲಿಲ್ಲ. ಆದರೆ ಬದುಕಿನಲ್ಲಿ ಹಲವು ಸೂಕ್ಷ್ಮ ಸಂವೇದನೆಯನ್ನು ತಾಜಾವಾಗಿ ಗ್ರಹಿಸಬಲ್ಲ ಸಂವೇದನಾಶೀಲರಾಗಿದ್ದರು. ಇದಕ್ಕೆ ನನ್ನ ನೆನಪಿನಿಂದ ಕೆಲವು ಉಧಾಹರಣೆಗಳು-

ವ್ಯಾಸರಿಗೆ, ಕ್ರಿಕೆಟ್ ಕುರಿತು ಬಹಳ ಆಸಕ್ತಿ ಇತ್ತು. ಕ್ರಿಕೆಟ್ ಪಂದ್ಯಗಳನ್ನು ಅವರು ಸಂಗೀತದಂತೇ ಧ್ಯಾನಸ್ಥರಾಗಿ ಗ್ರಹಿಸುತ್ತಿದ್ದರು. ಒಂದು ಏಕದಿನ ಪಂದ್ಯದಲ್ಲಿ ಆಗತಾನೆ ಹೊಸದಾಗಿ ಭಾರತ ತಂಡಕ್ಕೆ ಬಂದಿದ್ದ ರಾಬಿನ್ ಉತ್ತಪ್ಪ ೮೫ ರನ್‌ಗಳನ್ನು ಗಳಿಸಿದ್ದ, ಆತನ ಬ್ಯಾಟಿಂಗ್ ಕುರಿತು ಮಾತನಾಡುತ್ತಾ ಎಂ. ವ್ಯಾಸರು 'ಅವನು ರನ್ ಗಳಿಸಿರಬಹುದು, ಆದರೆ ಬಾಲ್‌ಗಳ ಆಯ್ಕೆ ಸರಿಯಿಲ್ಲ ಎನ್ನಿಸಿತು, ಗೌರವ ನೀಡಬೇಕಾದ ಬಾಲ್‌ಗಳನ್ನು ಆತ ಬೌಂಡರಿಯಾಗಿ ಪರಿವರ್ತಿಸಲು ಹೋಗಿದ್ದು, ಆತ ಕಲೆಗಾರನಲ್ಲವೆಂಬುದಕ್ಕೆ ನಿದರ್ಶನವಾಗಿದೆ.' ಎಂದರು ಹೀಗೆ ಮಾತು ಬೆಳೆಸುತ್ತಾ ನಾನು ದ್ರಾವಿಡ್ ಉದಾಹರಣೆ ಹೇಳಿದೆ, ದ್ರಾವಿಡ್ ದಂಡಿಸಲು ಅರ್ಹವಾಗಿದ್ದ ಬಾಲ್‌ಗಳಿಗೂ ಗೌರವ ನೀಡುತ್ತಿದ್ದ ಹೀಗೆ

ಚರ್ಚೆ ಹಲವು ಕ್ಷೇತ್ರದತ್ತ ಹೋಯಿತು. ಈ ಮಾತುಕತೆಯಾದ ಕೆಲ ದಿನಕ್ಕೇ ವ್ಯಾಸರು ನನಗೊಂದು ಪತ್ರ ಬರೆದರು. ಅದರಲ್ಲಿದ್ದದ್ದು ಕೆಲವೇ ಸಾಲು 'ನೀವು ಅವತ್ತು ಆಯ್ಕೆ ಮತ್ತು ನಿರಾಕರಣ ಬೇರೆ ಬೇರೆ ಎಂಬಂತೆ ಮಾತನಾಡಿದಿರಿ, ವಾಸ್ತವವಾಗಿ ಹಾಗಲ್ಲ ಅವೆರಡೂ ಒಂದೇ' ಬಹಳ ಮುಖ್ಯವಾದ ತಾತ್ವಿಕತೆ ಎನ್ನಿಸಬಲ್ಲ ಈ ಒಳನೋಟ ಬಂದಿದ್ದು ರಾಜಿನ್ ಉತ್ತಪ್ಪನ ಬ್ಯಾಟಿಂಗ್ ಕುರಿತು ಮಾತನಾಡುತ್ತಾ ಎಂಬುದೇ ವ್ಯಾಸರ ಸೂಕ್ಷ್ಮ ಗ್ರಹಿಕೆಗೆ ನಿದರ್ಶನವಾಗಿದೆ. ಇನ್ನೊಂದು ಎಲ್.ಪಿ.ಜಿ ಗ್ಯಾಸ್ ಸಿಲಿಂಡರ್‌ಗೆ ಸರ್ಕಾರ ನೀಡುತ್ತಿರುವ ಸಬ್ಸಿಡಿ ಜಾಗತೀಕರಣದ ಹಿನ್ನೆಲೆಯಲ್ಲಿ ರದ್ದಾಗಿ ಬಿಡಬಹುದು ಎಂಬ ಅರ್ಥದಲ್ಲಿ ನಾನು ವಿಜಯಕರ್ನಾಟಕದಲ್ಲಿ ಲೇಖನ ಬರೆದಿದ್ದೆ, ಅದಕ್ಕೆ ವ್ಯಾಸರು ತುಂಬಾ ಆತಂಕದಿಂದಲೇ ಪ್ರತಿಕ್ರಿಯಿಸಿ ಜನರ ಬದುಕಿಗೆ ಬಹುಮುಖ್ಯವಾದ ಇಂತಹ ಸಂಗತಿಗಳು ಮುಖ ಪುಟದಲ್ಲೇ ಬರಬೇಕು ಎಂದು ಪ್ರತಿಕ್ರಿಯಿಸಿದ್ದರು. ಇದು ಅವರು ಜನ ಸಾಮಾನ್ಯರ ಬದುಕಿನ ಬಗ್ಗೆ ಇಟ್ಟಿದ್ದ ಕಾಳಜಿಗೆ ನಿದರ್ಶನವಾಗಿತ್ತು.

ಅವರು ನನ್ನ ವಿನಂತಿಯ ಮೇಲೆ 'ಮಲ್ಲಿಗೆ'ಗಾಗಿ ಎರಡು ಕತೆಗಳನ್ನು ಬರೆದರು. ಇವೆರಡೂ ಚರ್ಚೆಯ ಫಲವಾಗಿ ಮೂಡಿದವು ಎಂಬುದು ಗಮನಾರ್ಹ ಸಂಗತಿ. ವಸ್ತು ಆಧರಿತ ವಿಶೇಷಾಂಕಗಳನ್ನು ಮಾಡುವ ನಾನು 'ಅಮ್ಮ' ಎಂಬ ಪರಿಕಲ್ಪನೆ ಕುರಿತು ವಿಶೇಷಾಂಕ ತರುವ ಸಿದ್ಧತೆ ನಡೆಸಿದ್ದೆ, ವ್ಯಾಸರು ಆಗಲೇ 'ಅಮ್ಮ' ಎಂಬ ಕತೆಯನ್ನು ಬರೆದಿದ್ದರು. ಅದನ್ನೇ ಬಳಸಿಕೊಳ್ಳೋಣ ಎನ್ನಿಸಿದರೂ, ಅದು ತುಂಬಾ ಅಮೂರ್ತ ಎನ್ನಿಸಿ ಅದನ್ನೊಂದು ಘಟನಾತ್ಮಕ ನೆಲೆಯಲ್ಲಿರಿಸಿ ಮೂರ್ತವಾಗಿಸುವುದು ಸಾಧ್ಯವೆ ಎಂದು ಕೇಳಿದ್ದೆ. ಈ ಕೋರಿಕೆ ಅವರಿಗೆ ಆರಂಭದಲ್ಲಿ ಕೋಪ ತರಿಸಿತ್ತು. 'ನಿಮಗೆ ಸಂಪಾದಕ ಎಂಬ ಅಹಂಕಾರ' ಎಂದು ಸಿಟ್ಟಾಗಿದ್ದರು. ಆದರೆ ಕೆಲ ದಿನದಲ್ಲೇ ನನ್ನ ಅಪೇಕ್ಷೆಗನುಗುಣವಾದ 'ಪಕ್ಷಿ' ಎಂಬ ಕತೆ ಬರೆದರು. ಮದುವೆ ಕುರಿತು ವಿಶೇಷಾಂಕ ರೂಪಿಸಿದಾಗ, ಅವರ 'ಹದ್ದು' ಎಂಬ ಕತೆ ಬಗ್ಗೆ ಚರ್ಚಿಸುತ್ತಿದ್ದೆವು. ಆ ಚರ್ಚೆ ಹಿನ್ನಲೆಯಲ್ಲೇ 'ಹದ್ದು' ಕತೆಯ ಆಧುನಿಕ ಸಾಧ್ಯತೆ ಎಂಬಂತೆ 'ಕಾಂತ' ಎಂಬ ಕತೆಯನ್ನು ನನಗೆ ಬರೆದುಕೊಟ್ಟರು. ಹೀಗೆ 'ರಥ' ಕಾದಂಬರಿಯಲ್ಲಿ ಮೌನಿಯಾದ 'ರವಿ' ಮಾತಾಡಿದಂತೆ ಕತೆ ಬರೆದುಕೊಡಿ ಎಂದೆ, ಅವರಿಗೆ ಅದು ಒಪ್ಪಿತವಾಗಿತ್ತು. ಹಾಗೆ ನೋಡಿದರೆ 'ಕಾಲ' ವಿಶೇಷಾಂಕಕ್ಕೆ, ಈ ಕತೆಯನ್ನು ಬರೆಯಬೇಕಿತ್ತು. ಆತಂಕ, ಅನಾರೋಗ್ಯ ಆಗುತ್ತಿಲ್ಲ ಸಧ್ಯಕ್ಕೆ ಕವಿತೆ ಕೊಡುವೆ ಆದರೆ ಕೆಲವೇ ದಿನದಲ್ಲಿ ನೀವು ಬಯಸಿದ ಕತೆ ಪೂರ್ತಿ ಮಾಡಿ ಕೊಡುವೆ ಎಂದಿದ್ದರು.

ಮುಂದೆ ಹಾಗಾಗಲೇ ಇಲ್ಲ. ಅವರೇ ಕಾಲದಲ್ಲಿ ಸೇರಿ ಹೋದರು.

೨

ಪರಿಚಿತರಾದ ಆರಂಭದಲ್ಲೇ ವ್ಯಾಸರನ್ನು ಅವರ ಕತೆಗಳ ಪ್ರೇರಣೆ ಬಗ್ಗೆ ಕೇಳಿದ್ದೆ, ಅವರ ಪ್ರೇರಣೆಗಳ ಜೊತೆಗೆ ಅವರ ಖಾಸಗಿ ಬದುಕಿನ ದುರಂತ ತೆಕ್ಕೆ ಹಾಕಿಕೊಂಡಿತ್ತು. ಅದನ್ನು ಅವರು ಮುಂದೆ ಲೇಖನಗಳಾಗಿ ಬರೆದರೂ ಕೂಡ, ಬಹುಶಃ ಈ ವಿವರಗಳು ವ್ಯಾಸರನ್ನು ಅರ್ಥಮಾಡಿಕೊಳ್ಳಲು ಅಗತ್ಯ ಪರಿಕರಗಳಾಗಿವೆ.

ಸಾಹಿತ್ಯಕ್ಕೆ-ಸಾಹಿತ್ಯದ ಕಟು ವಿಮರ್ಶಕ ಯಾವ ಗುರಿಯನ್ನು ನಿರ್ದೇಶಿಸಬಯಸುತ್ತಾನೋ ನನಗೆ ಗೊತ್ತಿಲ್ಲ ಎಂದು ಅವರು ಪದೇ ಪದೇ ಹೇಳುತ್ತಿದ್ದರು. ಅವರ ಬದುಕೆಂಬ ನಿತ್ಯ ಹೋರಾಟ, ಕ್ಷಣ ಕ್ಷಣಗಳನ್ನು ಹಿಡಿದಿಡುವುದು. ಬದುಕೆಂಬ ಮಹಾಸಮುದ್ರವನ್ನು ಒಂದು ಕಣ್ಣಳತೆಯೊಳಗೆ ತರುವ 'ಕೆರೆ'ಯನ್ನಾಗಿಸುವುದು ಅವರ ಗುರಿಯಾಗಿತ್ತು. ಅವರದಲ್ಲದ ಸಾಹಿತ್ಯದಿಂದಲೂ ಅವರು ಅದನ್ನೇ

ಬಯಸುತ್ತಿದ್ದರು. ಅಳುವಿನಿಂದಲೇ ಆರಂಭವಾಗಿ ಅಳುವಿನಿಂದಲೇ ಅಂತ್ಯವಾಗುವ ಮನುಷ್ಯ ಪ್ರಪಂಚಕ್ಕೆ ದುಃಖ ಸ್ಥಾಯಿಭಾವವಾಗಿ, ಹಿನ್ನೆಲೆಯಲ್ಲಿ ಇದ್ದೇ ಇರುತ್ತದೆ. ಬಯಸಿದುದು ಬಯಸಿದ ಹಾಗೆ ಸಿಗದ ದುಃಖ-ಅ-ಶಾಶ್ವತ ಕ್ಷಣಿಕ ಸುಖಗಳನ್ನು ಜೀವಿತಪರ್ಯಂತ ನೀಡಲಾಗದ ದುಃಖ ಮನುಷ್ಯಕಲ್ಪಿತ ದುಃಖವೇ ಆದರೂ ದುಃಖವನ್ನು ಮನುಷ್ಯನೇ ಶಮನಗೊಳಿಸುತ್ತದೆ ಎಂಬುದು ವ್ಯಾಸಸಾಹಿತ್ಯದ ಸತ್ಯವಾಗಿತ್ತು. ಇಂತಹ ಸಾಹಿತ್ಯ ಕನ್ನಡದಲ್ಲಿ ಯಥೇಚ್ಛವಾಗಿ ಇಲ್ಲ. ಹೀಗಾಗಿ ಅವರೊಳಗೆ ಹುಟ್ಟಿದ ಜೀವನದಿ ಶಂಕರಿ ಸಮುದ್ರದತ್ತ ಹರಿಯುತ್ತಲೇ ಇತ್ತು. ನನ್ನ ಸಮುದ್ರ ಎಷ್ಟು ಚಿಕ್ಕ ಕೆರೆ...! ನನ್ನ ಶಂಕರಗುಡ್ಡವನ್ನು ಮುಳುಗಿಸಿದಷ್ಟು! ಹಾಗೆಯೇ ನನ್ನ ದುರ್ಗಾಪುರ ಎಷ್ಟು ದೊಡ್ಡದು....! ಬ್ರಹ್ಮಾಂಡದಷ್ಟು! ಗ್ಯಾಲಕ್ಸಿಯಷ್ಟು...! ಎಂದೂ ಅವರು ಪದೇ ಪದೇ ಹೇಳುತ್ತಿದ್ದರು.

ಅವರ ಈ ಶಂಕರೀ ನದಿ, ಒಂದು ದುರಂತದಲ್ಲಿ ಹುಟ್ಟಿತು. ಅದು ಅವರ ಊರಿನ, ಗಾಡಿ ಮಾರ್ಗದ, ಧೂಳು ಮಾರ್ಗದ ಮಧ್ಯೆ, ಕೊಲೆಯಾಗಿ ಬಿದ್ದ ಅವರ ತಂದೆಯವರ ಶವದ ಬಳಿ ಹುಟ್ಟಿಕೊಂಡಿತ್ತು. ತಂದೆಯ ಜಡ ಶರೀರದ ಇಪ್ಪತ್ತೊಂದು ಚೂರಿಯ ಇರಿತದ ಆಳವಾದ ಗಾಯಗಳಿಂದ ಬಿಂದು ಬಿಂದುಗಳಾಗಿ ಸುರಿದ ರಕ್ತದ ಬಿಂದುಗಳು ಅವರ ಕಣ್ಣುಗಳಲ್ಲಿ ಕಂಬನಿಯ ಬಿಂದುಗಳಾಗಿ ರೂಪಾಂತರಗೊಂಡಿದ್ದವು. ರಾತ್ರಿಯಿಡೀ ಮಳೆ ಧಾರಾಕಾರವಾಗಿ ಸುರಿದಿತ್ತು. ರಕ್ತದ ಬಣ್ಣ ಧೂಳಿನ ಮಾರ್ಗದ ಕೆಸರಿಗಿಂತಲೂ ಗಾಢವಾಗಿತ್ತು. ಅದಕ್ಕೆ ಮೃತ್ಯುವಿನ ಗೂಢ ವಾಸನೆ ಇತ್ತು ಅಥವಾ ಹಾರಿ ಹೋದ ಜೀವದ ಗಾಢ ಪರಿಮಳ ಇತ್ತು. ಪರಿಮಳ ಮತ್ತು ಬಣ್ಣಗಳನ್ನು ಮಳೆ ನೀರು ತೊಳೆಯುತ್ತಾ ಇತ್ತು. ತೊಳೆಯಲು ಇನ್ನೂ ಬಾಕಿ ಏನೂ ಇದ್ದಿರದಿದ್ದರೂ ಕೂಡಾ. ಜಡಶರೀರದ ಬಳಿ ರಾತ್ರಿಯಿಡೀ ಮಳೆಗೆ ತೊಯ್ಯಿಸಿಕೊಳ್ಳುತ್ತಾ ವ್ಯಾಸರು ಕುಳಿತಿದ್ದರು. ದೂರದ ಜೀಪಿನಲ್ಲಿ ಪೋಲೀಸರು ಕಾವಲಿದ್ದರು. ಆ ರಾತ್ರಿಯ ಸ್ನಾನ ಮೌನದ ನಂತರ ನಾನು ನಾನಾಗಿ ಉಳಿಯಲಿಲ್ಲ ಎಂದು ಬರೆದು ಕೊಂಡ ಅವರು ತಮ್ಮ ಗಳಿಕೆಗಳ ಕುರಿತು "ಬಹಳ ಬೇಗ ನೋವುಗಳಿಗೆ ಕರಗಿ ಹೋಗುತ್ತಿದ್ದೆ. ಆ ರಾತ್ರಿಯ ಆಳದಲ್ಲಿ ನನ್ನ ದೇವರು ಸತ್ತು ಹೋದ. ನನ್ನ ಸತ್ತುವ, ಮುತ್ತುವ. ಭೂತ ಪಿಶಾಚಿಗಳು ಸತ್ತು ಹೋದುವು. ಅಂದೂ ಇಂದೂ ಎಂದೆಂದೂ ನನಗೆ ಮನುಷ್ಯರದ್ದೇ ಭಯ. ನನ್ನ ಪ್ರೀತಿಸುವ; ನನ್ನ ಸ್ತುತಿಸುವ; ನನ್ನ ತಿರಸ್ಕರಿಸುವ; ನನ್ನ ದ್ವೇಷಿಸುವ, ನನ್ನ ಅಸ್ತಿತ್ವವನ್ನೇ ಅಲುಗಾಡಿಸುವ ಮನುಷ್ಯ ಮನಸ್ಸುಗಳ ಹಠಾತ್ ಸ್ಫೋಟದ ಭಯ-ನನ್ನನ್ನು ಕಾಡಿಸುತ್ತದೆ.... ಇನ್ನಿಲ್ಲದಂತೆ." ಎಂದು ಬರೆದು ಕೊಂಡಿದ್ದಾರೆ. ಇದು ವ್ಯಾಸರ ಕತೆಗಳಲ್ಲಿ ನಿರಂತರವಾಗಿ ಬರುವ ಶೋಕವನ್ನು ಅರ್ಥ ಮಾಡಿಕೊಳ್ಳಲು ಬಹಳ ಮುಖ್ಯವಾದ ಮಾಹಿತಿಯಾಗಿದೆ. ಪ್ರಮುಖವಾದ ಸಂಗತಿ ಎಂದರೆ ಹೀಗೆ ವೈಯಕ್ತಿಕ ಕಾರಣದಿಂದ ಹುಟ್ಟಿದ ವ್ಯಾಸರ ಕತೆಗಳ ಸ್ಥಾಯಿರೂಪವಾದ ಶೋಕ ಮುಂದೆ ಮನುಕುಲದ ಶೋಕವಾಯಿತು. ಅದರಲ್ಲಿ ಕೇವಲ ಕಂಬನಿ ಮಾತ್ರ ಇರಲಿಲ್ಲ, ಸಾಂತ್ವನ ಕೂಡ ಇತ್ತು. ಕಾರಣ ಹೇಳಲಾಗದ ಶೋಕ ಮತ್ತು ಕಾರಣ ಬೇಡದ ಸಾಂತ್ವನ ಇವೆರಡೂ ಸಾಹಿತ್ಯ ನೀಡಬಲ್ಲ ದೊಡ್ಡ ಕೊಡುಗೆ ಎಂದು ತೋರಿಸಿಕೊಟ್ಟವರು ವ್ಯಾಸರು.

ತಂದೆ ಇಲ್ಲವಾದ ಮಾರನೇ ರಾತ್ರಿ ಯಾವುದೋ ಹೊತ್ತಿನಲ್ಲಿ ವ್ಯಾಸರ ಮನೆ ದರೋಡೆಯಾಯಿತು. ಧನ-ಕನಕಗಳು ಮಾಯವಾದುವು. ಅನ್ನ ಬೇಯಿಸುವ ತಾಮ್ರದ ಹಿತ್ತಾಳೆಯ ಬೃಹತ್‌ಗಾತ್ರಗಳ ಖಾಲಿ ಹಂಡೆ ಕೊಪ್ಪರಿಗೆಗಳು ಮನೆಯಲ್ಲಿ ಉಳಿದವು. ಅವರದು ಜಮೀನುದಾರಿ ಕುಟುಂಬ. ಹತ್ತಿರ ಹತ್ತಿರ ಸಾವಿರ ಎಕರೆಗಳಷ್ಟು ಭೂಮಿ ಇತ್ತು. ನೂರಾರು ಮಂದಿ ಒಕ್ಕಲುಗಳಿದ್ದರು. ಕೇರಳದಲ್ಲಿ ಭೂಸುಧಾರಣೆಯ ಕಾನೂನು ಬರಲಿತ್ತು. ಉಳುವವನೇ ಹೊಲದ ಒಡೆಯನಾಗಲಿದ್ದ. ಒಕ್ಕಲುಗಳು

ದಿನದಿಂದ ದಿನಕ್ಕೆ ಕರಗಲಾರಂಭಿಸಿದ್ದರು. ಜತೆಯಲ್ಲಿ ಭೂಮಿಯೂ. ಸ್ವಂತಕ್ಕೆ ಐದು ಎಕರೆ ತೋಟವಿತ್ತು. ಅಲ್ಲಿ ದುಡಿಮೆ ಇತ್ತು. ಕೃಷಿ ಕಾರ್ಮಿಕನಾಗಿಯೂ ಜಮೀನುದಾರನಾಗಿಯೂ ದ್ವಿಪಾತ್ರದಲ್ಲಿ ಅವರು ನಟಿಸಲಾರಂಭಿಸಿದರು. ಉಳುವವನಾಗಿದ್ದ ಯಾವೊಬ್ಬನೂ ಮುಂದೆ ಕೃಷಿ ಕಾರ್ಮಿಕನಾಗಿ ಉಳಿಯಲಿಲ್ಲ. ಎಲ್ಲರೂ ಭೂಮಿಯನ್ನು ಚಿನ್ನದ ತಗಡಿನ ಹಾಗೆ ಕತ್ತರಿಸಿ ಮಾರಾಟ ಮಾಡಿದರು. 'ಉಳುವವನೂ' ಆಗಬೇಕಾದ ಅವರು ಜಮೀನುದಾರನೂ ಕೃಷಿಕನೂ ಆಗಿ ಉಳಿದರು.. ಈ ಅಂತರ ಅವರಿಗೆ ಆರ್ಥಿಕ ಸವಾಲಾದಂತೆ ಸಾಹಿತ್ಯ ಗ್ರಹಿಕೆಗೂ ಭಿನ್ನತೆ ತಂದಿತು. ಕೃಷಿಕನಾಗಿದ್ದು ಅವರಿಗೆ ಆಯ್ಕೆಯಾಗಿರಲಿಲ್ಲ, ಆದರ್ಶವಾಗಿರಲಿಲ್ಲ. ಬದಲಾಗಿ ಅನಿವಾರ್ಯವಾಗಿತ್ತು. ಈ ಅನಿವಾರ್ಯವೇ ಅವರಿಗೆ ಬದುಕಿನ ಹಲವು ಸಹಜ ಮುಖಗಳನ್ನು ತೆರೆದಿಡಲು ಪ್ರೇರಣೆ ನೀಡಿತು. ಕತೆಗಾರರಾಗಿ ವ್ಯಾಸರು ಹಲವಷ್ಟ ಕೃತಕ ಎನ್ನಿಸಿದರು, ಸವಕಲು ಎನ್ನಿಸಿದರು. ಬರೆದಷ್ಟನ್ನೇ ಬರೆಯುತ್ತಾರೆ ಎಂಬ ಟೀಕೆಯನ್ನು ಎದುರಿಸಿದರು. ಈಗ ತಾನೆ ಪೆನ್ನು ಹಿಡಿದ ಕತೆಗಾರನಿಂದ ನಿಮ್ಮ ಛಾಪಿನಿಂದ ಹೊರಬನ್ನಿ ಎಂಬ ಉಪದೇಶ ಕೇಳಿದರು. ಆದರೆ ಇವ್ಯಾವುದೂ ಅವರ ಏಕಾಗ್ರತೆಯನ್ನು ಬದಲಾಯಿಸಲಿಲ್ಲ. ಮುಗ್ಧತೆಯನ್ನು ಕಳೆಯಲಿಲ್ಲ. ಅಕಾಡೆಮಿಕ್ ವಲಯಕ್ಕೆ ಅರ್ಥವೇ ಆಗದ ಜೀವನಪರತೆ ಅವರ ಕತೆಗಳಲ್ಲಿತ್ತು. ಅದೇ ಅವರ ಶಕ್ತಿ ಕೂಡ ಆಗಿತ್ತು. ಮಾತ್ರವಲ್ಲ ನಿರಂತರವಾಗಿ ವ್ಯಾಸರನ್ನು ಬರೆಯುವಂತೆ ಮಾಡಿದ ಚೇತನ ಕೂಡ ಅದೇ ಆಗಿತ್ತು. ಎಸ್. ದಿವಾಕರ ಅವರ ಶತಮಾನದ ಕತೆಗಳಲ್ಲಿ ವ್ಯಾಸರ ಕತೆ ಇಲ್ಲದೆ ಹೋದಾಗ ಅವರು ನೊಂದಿದ್ದೇನೋ ನಿಜ, ಆದರೆ ಅದಕ್ಕಾಗಿ ವಾಗ್ವಾದಗಳಿಗೆ ಇಳಿಯಲಿಲ್ಲ. ಗುಂಪುಗಾರಿಕೆ ರಾಜಕಾರಣ ಮಾಡಲಿಲ್ಲ. ಸಾಹಿತ್ಯ ವಲಯಗಳಲ್ಲಿ ಪಿಸುಗುಟ್ಟಲಿಲ್ಲ. ಬದಲಾಗಿ ರೊಚ್ಚಿನಿಂದ ಇನ್ನಷ್ಟು ಕತೆಗಳನ್ನು ಬರೆದರು, ಅದೂ ತಾವು ಬರೆಯಬಹುದಾದ ಮಾದರಿಯಲ್ಲೇ ಒಳ್ಳೆಯ ಕತೆಗಳನ್ನು ಬರೆದರು. ಇದು ಸಾಹಿತ್ಯಿಕವಾಗಿಯೂ ಬಹಳ ಮುಖ್ಯ ಎನ್ನಿಸಬಲ್ಲ ಸಂಗತಿ.

ಹತ್ತೊಂಬತ್ತನೇ ವಯಸ್ಸಿನಲ್ಲಿ ವ್ಯಾಸರು ಮದುವೆಯಾದರು. ಹೆಂಡತಿಯಾಗಿ ಬಂದವರು ಶಶಿಕಲಾ. ಹದಿನಾಲ್ಕು ವರುಷದ ಮಗುವಾಗಿದ್ದವರು. ಹೆಂಡತಿ ಏನೆಂದು ತಿಳಿಯದೆ ತಾಯಿ ಏನೆಂದು ತಿಳಿಯದೆ ಎರಡೂ ಆಗಿ ಅವರು ವ್ಯಾಸರನ್ನು ಕಾಪಾಡಿದರು. ಸಂಸಾರ ಭಾರವನ್ನೆಲ್ಲಾ ಹೊತ್ತು ವ್ಯಾಸರನ್ನು ಹಗುರವಾಗಿಸಿದರು, ತೇಜಸ್ವಿ-ಕೃಪಾ, ಪ್ರತಿಮ ಎಂಬ ಮಕ್ಕಳ ಜೊತೆಗೆ ವ್ಯಾಸರನ್ನೂ ಮಗುವಿನಂತೆ ಬೆಳೆಸಿದರು. ವ್ಯಾಸರು ಹೀಗೆ ಮಗುವಾಗಿಯೇ ಉಳಿದರು ಎಂಬುವರ ಹಿಂದೆ ಶಶಿಕಲಾ ಅವರ ಕೊಡುಗೆ ಕೂಡ ದೊಡ್ಡದಾಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ. ಮುಗಿಯದೇ ಮುಗಿದ ಬಾಲ್ಯ, ಕಾಲ-ಬಂದೇ ಬರಲಿರುವ ಯೌವನದ ಸಂಧ್ಯಾಕಾಲದಲ್ಲಿ ಬಂದೆರಗಿದ ಸಿಡಿಲಿನಂತಹ ದುರಂತಗಳು ವ್ಯಾಸರ ಮನಸ್ಸನ್ನು ಬಹಳ ಬೇಗ ಮಾಗಿಸಿದವು. ಬಾಲ್ಯ, ಯೌವನ, ಮುಪ್ಪುಗಳು ಒಂದರೊಳಗೊಂದು ಪತ್ತೆಯಾಗದಂತೆ ಬೆರೆತುಕೊಂಡವು. ಬದುಕು ಸಾಗಿದಂತೆ ಬರವಣಿಗೆ ಸಾಗಿತು. ಅಥವಾ ಅವೆರಡೂ ಒಂದಾಗಿ ಸಾಗಿದವು. ಮನುಷ್ಯ ಸಂಬಂಧಗಳು ಆರ್ಥಿಕ ಕಾರಣಗಳಿಗಾಗಿ, ಧಾರ್ಮಿಕ ಕಾರಣಗಳಿಗಾಗಿ, ಸಾಮಾಜಿಕ ಕಾರಣಗಳಿಗಾಗಿ-ಸ್ವಾರ್ಥ ಸುಖಕ್ಕಾಗಿ ನಟಿಸಲ್ಪಡುತ್ತವೆ ಎಂಬ ಕಠೋರ ಸತ್ಯವನ್ನು ವ್ಯಾಸರ ಕತೆಗಳು ನಿರಂತರವಾಗಿ ಬಿಂಬಿಸುತ್ತಾ ಬಂದವು. ಇದು ಅವರ ಕತೆಗಳ ಗ್ರಹಿಕೆಗೆ ಮುಗ್ಧತೆ ಮತ್ತು ಅಭಿವ್ಯಕ್ತಿಗೆ ಸಂಕೀರ್ಣತೆ ಎರಡನ್ನು ಒಟ್ಟಿಗೇ ತಂದುಕೊಟ್ಟಿತು. ಒಂದೇ ಚಿತ್ರಕ್ಕೆ ಹಿಡಿದ ಹಲವು ಕನ್ನಡಿಗಳಂತೆ ಅವರ ಕತೆಗಳು ಮಾನವ ಸಂಬಂಧದ ಸೂಕ್ಷ್ಮಗಳನ್ನು ಹಂತ ಹಂತವಾಗಿ ಅರ್ಥ ಮಾಡಿಸುತ್ತಾ ಬಂದವು ಅಥವಾ ಹಾಗೆ ಬದುಕು ಅರ್ಥವಾಗುವಂತೆ ಮಾಡಬಲ್ಲ ವಿಶಾಲ ಭೂಮಿಕೆಯನ್ನು ಸೃಷ್ಟಿ ಮಾಡಿದವು. ಅವರ ಕಥಾ ಪಾತ್ರಗಳು ಬಹಳವಲ್ಲ ಅವುಗಳ ಹೆಸರೂ ಕೂಡ ಪುನರಾವರ್ತಿತವಾಗುವಂತಹವೇ ಅವುಗಳ

ರಂಗ ಕೂಡ ಸೀಮಿತವಾದದ್ದು. ಆದರೆ ಚಿರಪರಿಚಿತವಾದ ಭಾವಗಳ ಅಪರಿಚಿತ ಮುಖಗಳನ್ನು ಹಿಡಿದಿಟ್ಟ ಕ್ರಮ ಮಾತ್ರ ವಿಶಿಷ್ಟವಾದದ್ದು. ವ್ಯಾಸರ ಕತೆಗಳಿಗೆ ಕನ್ನಡ ಸಾಹಿತ್ಯದಲ್ಲಿ ತನ್ನದೇ ಆದ ಸ್ಥಾನವಿರುತ್ತದೆ ಎಂದು ನಾನು ದೃಢವಾಗಿ ನಂಬುವುದಕ್ಕೆ ಇದೇ ಮುಖ್ಯವಾದ ಕಾರಣ.

೨

ಎಂ.ವ್ಯಾಸರ ರಥ ಕಿರುಕಾದಂಬರಿಯ ಭಾಗ ಇದು

'ಸಾಯಂಕಾಲದ ಗಾಳಿ ಆರಂಭವಾಗಿತ್ತು. ಎಂದಿಗಿಂತ ಹೆಚ್ಚು ಬಲವಾಗಿ ತೆಂಗಿನ ಮರಗಳು ತಲೆ ತಲೆ ಚಚ್ಚಿಕೊಳ್ಳುತ್ತಿದ್ದವು. ವೃತ್ತ ಹಾಕುತ್ತಿರುವ ಹಕ್ಕಿನ ಹಾಗೆ ಮರಗಳೆಡೆಯಿಂದ ಹಾದು ಬರುತ್ತಿದ್ದ ಗಾಳಿ, ಸದ್ದು ಮಾಡುತ್ತಿತ್ತು. ಅರಳೀ ಮರದ ಕಡೆಯಿಂದ ಚಟಚಟ ಶಬ್ದವಾಯಿತು. ಎದ್ದು ನೋಡಿದೆ. ಆಸುಪಾಸಿನವರೂ ಮರದ ಅಷ್ಟು ದೂರದಲ್ಲಿ ಬಂದು ನಿಂತಿದ್ದರು. ಗೆಲ್ಲು ಮುರಿದರೂ ಕೆಳಗೆ ಬೀಳದೆ ತಾಯಿಮರಕ್ಕೆ ಜೋತು ಬಿದ್ದಿತ್ತು. ಹಾಗೆ ಜೋತು ಬಿದ್ದ ಗೆಲ್ಲು ಮರದ ಕಾಂಡದ ನಡುವೆ ನಾಗರ ಹಾವೊಂದು ಸಿಕ್ಕಿ ಬಿದ್ದಿತ್ತು. ಮಧ್ಯೆ ಅಪ್ಪಚ್ಚಿಯಾದ ಅದರ ದೇಹ ಎರಡು ಪ್ರತ್ಯೇಕ ಹಾವುಗಳ ಹಾಗೆ ಆಚೆ-ಈಚೆ ಜೋತು ಬಿದ್ದಿತ್ತು. ಎರಡು ಭಾಗದಲ್ಲೂ ವಿಪರೀತ ಚಲನೆಯಿತ್ತು. ತಲೆಯ ಭಾಗದಲ್ಲಿ ಹೆಡೆ ಅರಳಿತ್ತು, ಅಗೋಚರ ವೈರಿಯೊಂದಿಗೆ ಯುದ್ಧಕ್ಕೆ ನಿರತವಾಗಿತ್ತು. ಗಾಳಿಗೆ ವಿಷ ಸಿಂಚನವಾಗುತ್ತಿರಲಿಲ್ಲ. ನಪುಂಸಕ ಕ್ರೋಧವೊಂದು ಗಾಳಿಯಲ್ಲಿ ಯುದ್ಧ-ನಕ್ಷೆಯನ್ನು ಬರೆಯುತ್ತಿತ್ತು. ಚಕ್ರವ್ಯೂಹವನ್ನು ರಚಿಸುತ್ತಿತ್ತು. ಅದರ ಉಗ್ರ, ಭೀಕರ ಹೋರಾಟ, ಮೃತ್ಯುವಿನೊಂದಿಗೆ ನಡೆಯುತ್ತಿತ್ತು. ಈ ಚಲನೆಯ ಕೊನೆಯಲ್ಲಿ ಅದು ತನ್ನ ಇನ್ನೊಂದು ಅರ್ಧದಿಂದ ಬಿಡುಗಡೆಯಾಗಿ ನೆಲಕ್ಕೆ ಬಿದ್ದು ಕೊನೆಯ ನಾಲ್ಕು ಹೊರಳುವಿಕೆಯನ್ನು ಮುಗಿಸಿ ಹೋಯಿತು. ಆದರೆ ಗೆಲ್ಲಿನ ಮಧ್ಯೆ ಸಿಲುಕಿಕೊಂಡ ಬಾಲದ ಭಾಗ ಇನ್ನು ಚಡಪಡಿಸುತ್ತಲೇ ಇತ್ತು. ಆತ್ಮವಿಲ್ಲದ ಜೀವದ ಹಾಗೆ'

ದಟ್ಟ ವಿವರಗಳ ಈ ಭಾಗ, ಎಂ.ವ್ಯಾಸರ ಕತೆಗಳನ್ನು ಅರ್ಥ ಮಾಡಿಕೊಳ್ಳಲು ಬಹುಮುಖ್ಯವಾದ ಭೂಮಿಕೆಯಾಗಿದೆ. ನನಗೆ ಮೇಲಿನ ವಿವರಗಳಲ್ಲಿನ ಹಾವಿನ ಹೆಡೆಯ ಭಾಗ ವ್ಯಾಸರು ಸೃಷ್ಟಿಸಿದ ಪುರುಷ ಪಾತ್ರಗಳ ಹಾಗೆ ಕಾಣುತ್ತದೆ. ಆ ಪಾತ್ರಗಳದ್ದು ಅಪಾರ ಚಟುವಟಿಕೆ ಇದ್ದೂ ಗುರಿ ಇಲ್ಲದ ನಪುಂಸಕ ಹೋರಾಟದ ಹಾಗೆ; ಬಾಲದ ಭಾಗ ವ್ಯಾಸರು ಸೃಷ್ಟಿಸಿದ ಸ್ತ್ರೀ ಪಾತ್ರಗಳ ಹಾಗೆ, ವಿಲಾಸಿನಿ, ರೂಪ, ಹೀಗೆ ಪುನರಾವರ್ತಿತವಾಗುವ ಹೆಸರುಗಳ ವಿವರಗಳು, ಈ ಪಾತ್ರಗಳ ಹೋರಾಟ ಸುಲಭಕ್ಕೆ ಮುಗಿಯುವಂತಹವಲ್ಲ, ಆದರೆ ಈ ಚಡಪಡಿಕೆ ಆತ್ಮವಿಲ್ಲದ ಜೀವದಂತಹದು.

ವ್ಯಾಸರ ಕತೆಗಳಲ್ಲಿನ ಸ್ತ್ರೀ-ಪುರುಷ ಸಂಬಂಧವನ್ನು ವಿಕೃತಿ ಎಂದು ಕರೆಯುವವರಿದ್ದಾರೆ. ಇದು ಆ ಪಾತ್ರಗಳನ್ನು ಮನಃಸ್ಥಿತಿಯಾಗಿ ಗ್ರಹಿಸದೆ ಘಟನಾತ್ಮಕ ವಿವರವಾಗಿ ಹಿಡಿಯಲು ಹೋಗುವವರು ಸೃಷ್ಟಿಸಿಕೊಳ್ಳುವ ಸಮಸ್ಯೆ. ವ್ಯಾಸರು ಸ್ತ್ರೀ-ಪುರುಷ ಮುಖಾಮುಖಿಯನ್ನು ಸಾಧ್ಯತೆಗಳ ಮುಖಾಮುಖಿಯಾಗಿ ಬಿಂಬಿಸಿದ್ದರು. ಸ್ತ್ರೀ-ಪುರುಷ ಮಿಲನಗಳು ಎಲ್ಲಾ ಜೀವಿಗಳಲ್ಲೂ 'ಸುಖ'ವಾಗಿರೊಲ್ಲ ಎಂಬುದು ಅವರ ಗ್ರಹಿಕೆಯಾಗಿತ್ತು. ಸೃಷ್ಟಿ ವಿಕಾಸಕ್ಕೆ ದೈಹಿಕ ಕೂಡುವಿಕೆಯೊಂದೇ ಸಾಕಾಗದು ಎಂಬುದನ್ನು ಕಂಡುಕೊಂಡ ಮನುಷ್ಯ, ಮನಸ್ಸನ್ನೂ ರೂಡಿಸಲು ಕಲಿತ. ಹಾಗೆ ಕಲಿತವನು ಸುಖವನ್ನು ಕಲಿತುಕೊಂಡ, ಅದಕ್ಕೆ ಧರ್ಮ ಕಲ್ಪಿಸಿದ, ಹೀಗೆ ಅವರ ವೈಚಾರಿಕ ಗ್ರಹಿಕೆ ಬೆಳೆಯುತ್ತದೆ. ಯಾವ ಸಮಾಗಮದಲ್ಲಿ 'ಸುಖ' ಎಂಬುದು ಸಹಜವಲ್ಲವೋ ಅದು ನಟನೆಯಾಗುತ್ತದೆ. ಸ್ತ್ರೀ-ಪುರುಷ

ಸಂಬಂಧ ನಟನೆಯಾಗುವುದರ ಕುರಿತು ಅವರ ಕತೆಗಳಲ್ಲಿ ಮತ್ತೆ ಮತ್ತೆ ಆತಂಕದ ಮಾತುಗಳು ಕೇಳಿ ಬರುತ್ತದೆ. 'ಕ್ಷೇತ್ರ' ಕತೆಯಲ್ಲಿ ಮೀನಾ ದಾಖಲಿಸುವ ವಿವರಗಳು ಹೀಗಿವೆ,

> 'ನಾನು ಕೃತಕ ವೇಷದಲ್ಲಿ ಮಿಲನಕ್ಕೆ ಸರ್ವಸಿದ್ಧತೆಗಳನ್ನು ಪ್ರತಿ ರಾತ್ರಿಯೂ ಮಾಡುತ್ತಿದ್ದೆ. ಹೂವಿನಿಂದ ಹೊದಿಸಿಕೊಳ್ಳಲು ಸಿದ್ಧಳಾಗುತ್ತಿದ್ದವಳಿಗೆ ಹಾವಿನ ಹೊಡೆತ ಸಿಗುತ್ತಿತ್ತು.. ಮೈಯಿಡೀ ಪರಚಿ ಬಿಡುತ್ತಿದ್ದರು.'

ಇಂತಹ ಮೀನಾಳ ರವಿಯ ಜೊತೆಗಿನ ಸಂಬಂಧ ಕುಸಿದ ಮೇಲೆ ಆವನ ಮಲಸಹೋದರ ಭೂಷಣನ ಭೇಟಿಯನ್ನು ಅವಳ ಮಾವನೇ ಕಲ್ಪಿಸಿಕೊಡುತ್ತಾನೆ. ಅದೊಂದು ಪರ್ಯಾಯ ಸಾಧ್ಯತೆಯಾಗಿ ಕತೆಯಲ್ಲಿ ತುಂಬಿಕೊಳ್ಳುತ್ತದೆ. 'ಗೋರಿ' ಎಂಬ ಕತೆಯಲ್ಲಿ ಇದು ಇನ್ನಷ್ಟು ಗಾಢವಾಗಿ ಬಿಚ್ಚಿಕೊಳ್ಳುತ್ತದೆ. ಅಲ್ಲಿನ ನಿರೂಪಕ ಹೇಳುತ್ತಾನೆ.

'ಶಯ್ಯಾ ಗೃಹದಲ್ಲಾಗಲಿ, ಹಾಸಿಗೆಯಲ್ಲಾಗಲೀ, ಗಂಡಿನ ಹಾಗೆ ವರ್ತಿಸಲು ಸಾಧ್ಯವಾಗಲಿಲ್ಲ ಎಂದರೆ ಸರಿ, ಅವಳು ಬಟ್ಟೆ ಬಿಚ್ಚಿದಾಗ, ನಾನು ಶವದ ಹಾಗೆ ಬಿಳಚಿಕೊಳ್ಳುತ್ತಿದ್ದೆ ಅಂದರೆ ಅದೂ ಸರಿ. ಅವಳು ಬೆತ್ತಲಾದಾಗ ನಾನು ಅರ್ಧ ಶವವಾಗುತ್ತಿದ್ದೆ'

ಇಂತಹ ವಿವರಣೆ ವ್ಯಾಸರ ಕತೆಗಳಲ್ಲಿ ಹಲವೆಡೆ ಸಿಗುತ್ತವೆ. ಇಲ್ಲಿನ ಮುಖಾಮುಖಿ 'ಸುಖ' ಅನುಭವವಾಗುವುದೇ ಇಲ್ಲ. ಏಕೆಂದರೆ ಪೂರ್ಣಾವತಾರ ಅಲ್ಲಿನ ವ್ಯಕ್ತಿತ್ವಗಳು ಸಿದ್ಧವಾಗಿರುವುದೇ ಇಲ್ಲ. ಸುಖ ಕೂಡ ಒಂದು ನಟನೆಯಾಗುತ್ತದೆ. ಇದನ್ನೇ ವಿಸ್ತರಿಸಿದಂತೆ 'ಅಸ್ತ' ಕತೆಯಲ್ಲಿ ವ್ಯಾಸರು ಹೇಳುತ್ತಾರೆ.

'ಹೆಣ್ಣು-ಗಂಡಿನ ಸಂಬಂಧದಲ್ಲಿರೋವಷ್ಟು ವೈರುಧ್ಯ ಈ ಜಗತ್ತಿನಲ್ಲಿ ಬೇರೆ ಯಾವ ಮನುಷ್ಯ ಸಂಬಂಧಕ್ಕೂ ಇಲ್ಲ. ಇದು ಆಡಿಗಲ್ಲಾಗಿ ತಾಜ್‌ಮಹಲ್ಲಿನಂತಹ ಸೌಂದರ್ಯ ದೇಗುಲ ನಿರ್ಮಿತವಾಗಿದೆ. ಗೀತ ಗೋವಿಂದದಂತಹ ಕಾವ್ಯ ರಚಿಸಲ್ಪಟ್ಟಿದೆ. ಹಾಗೆಯೇ ನರಕ ಸಮಾನವಾದ ವೇಶ್ಯಾವಾಟಿಕೆಗಳೂ ಅಸಂಖ್ಯಾತ ಬಾಸ್ಟರ್ಡ್‌ಗಳೂ ಈ ನೆಲದಲ್ಲಿ ಜನ್ಮ ತಾಳಿವೆ'

ಹಾಗಿದ್ದರೆ ವ್ಯಾಸರು ಸ್ತ್ರೀ-ಪುರುಷ ಸಂಬಂಧವನ್ನ ಆರೋಗ್ಯಕರ ನೆಲೆಯಲ್ಲಿ ನೋಡಲಿಲ್ಲವೇ ಎಂದು ಪ್ರಶ್ನಿಸಿದರೆ ಸಿಕ್ಕುವ ಉತ್ತರ ವಿಭಿನ್ನವಾದದ್ದು, ಅವರು ಅದನ್ನು ಲೈಂಗಿಕ ಅರ್ಥದಲ್ಲಿ ಬಳಸುತ್ತಲೇ ಇರಲಿಲ್ಲ. ಬದಲಾಗಿ ಮಾನವನ ಭಾವನಾತ್ಮಕ ಮುಖಾಮುಖಿಯಾಗಿ ನೋಡುತ್ತಿದ್ದರು. ಲೈಂಗಿಕ ಅರ್ಥದಲ್ಲಿ ಗುರುತಿಸಿದರೆ, ಮನುಷ್ಯ ಮನುಷ್ಯ ಆವಿಷ್ಕರಿಸಿದ ಅಥವಾ ಅನ್ವೇಷಿಸಿದ ಅದ್ಭುತಗಳಲ್ಲಿ ಸ್ತ್ರೀ-ಪುರುಷ ಸಂಬಂಧ ಅದ್ವಿತೀಯವಾದದ್ದು ಎಂದು ಅವರು ಗುರುತಿಸುತ್ತಾರೆ. ಅವರ ಆತಂಕವಿರುವುದು ಈ ಕಾರಣಕ್ಕೇ ಹೆಣ್ಣು, ಗಂಡಿನ ಅಧೀನಳಾಗುತ್ತಿದ್ದಾಳೆ ಎಂಬುದಕ್ಕಾಗಿ. ಇಲ್ಲಿನ ಐವಾಣ್ಯರಿ ಗಂಡು-ಹೆಣ್ಣಿಗೆ ಸರಿ ಸಮನಾಗಿರಬೇಕು ಎಂಬ ಆರೋಗ್ಯಕರ ನಿಲುವು ಅವರದು. ಈ ಕಾರಣಕ್ಕೆ ಅವರು ಧರ್ಮದ ಹಸ್ತಕ್ಷೇಪವನ್ನು ಪ್ರಶ್ನಿಸುತ್ತಾರೆ. ವ್ಯಾಸರನ್ನು ಸ್ತ್ರೀವಾದಿ ಅಲ್ಲ ಎನ್ನುವವರು 'ಮೌನಗರ್ಭ' ಸಂಕಲನದಲ್ಲಿರುವ ಅವರ 'ಸ್ತ್ರೀ ಪುರುಷ ಬಂಧಗಳು ಮತ್ತು ಬಂಧನಗಳು' ಎಂಬ ಲೇಖನವನ್ನು ನೋಡಬೇಕು ವ್ಯಾಸರ ಕತೆಗಳನ್ನು ಅರ್ಥಮಾಡಿಕೊಳ್ಳಲು ಅಗತ್ಯವಾದ ಪರಿಪ್ರೇಕ್ಷೆಯನ್ನು ನೀಡಬಲ್ಲ ಲೇಖನ ಅದು. ಅಷ್ಟಕ್ಕೂ 'ರಥ' ಕಿರು ಕಾದಂಬರಿಯಲ್ಲಿ

> 'ಕತ್ತಲಿನ ಕಪ್ಪು ಮತ್ತು ಆಲಿಂಗನದ ಕಪ್ಪು ನನ್ನ ಆವರಿಸಿಕೊಂಡಿತು. ನಾನು ನನ್ನನ್ನು ನಿನ್ನನ್ನು ಅವರನ್ನು ಮರೆತೆ. ಬಿಸಿ ಕುಂಚವೊಂದು ನನ್ನನ್ನು ಅವರ ಪತ್ನಿಯನ್ನಾಗಿ ಚಿತ್ರಿಸಲಾರಂಭಿಸಿತು'

ಎಂದು ಅಪ್ಪಟ ಕಾವ್ಯಾತ್ಮಕ ಶಬ್ದಗಳಲ್ಲಿ ಮಿಲನವನ್ನು ಬರೆದವರು ಎಂ.ವ್ಯಾಸರೇ ಎಂಬುದನ್ನು ನಾವು ನೆನಪಿನಲ್ಲಿಡಬೇಕು.

೪

ವ್ಯಾಸರು ಬರೆದ ಮುನ್ನೂರಕ್ಕೂ ಹೆಚ್ಚು ಕತೆಗಳು ಒಂದು ಅರ್ಥದಲ್ಲಿ ಒಂದೇ ಕತೆಯ ಬೇರೆ-ಬೇರೆ ಎಳೆಗಳು. ಅವರೇ ಒಮ್ಮೆ ಗುರುತಿಸಿದಂತೆ 'ವಿವರಗಳ ಸರಳ ಸುಲಭವಾಗುತ್ತಿದ್ದೇವೆಂದು ಅಂದರೆ ಮತ್ತಷ್ಟು ಜಟಿಲಗೊಳ್ಳುತ್ತಿರುವುದೇ ಆಗಿದೆ.' ರೇಶಿಮೆಯ ದಾರದ ಉಂಡೆಯನ್ನು ಬಿಡಿಸುತ್ತಾ ಹೋದ ಹಾಗೆ... ಅದು ಅವರದೇ ರೀತಿಯಲ್ಲಿ ಸುತ್ತುತ್ತಿರುತ್ತದೆ. ಹಾಗೆ ಇನ್ನೊಮ್ಮೆ ಹೇಳಿದಂತೆ 'ದಾರದ ಉಂಡೆಯನ್ನು ಎಷ್ಟೇ ಎಚ್ಚರಿಕೆಯಿಂದ ಬಿಡಿಸಿದರೂ ಅದು ಗಂಟಾಗುತ್ತದೆ' ಅವರು ಹೀಗೆ ಗುರುತಿಸಿದ್ದು ಮನೋವ್ಯಾಪಾರಗಳನ್ನು. ನಾವು 'ಸಹಜ' ಎಂದು ಕರೆಯುವ ತರ್ಕ ಬದ್ಧತೆ ಜೀವನದಲ್ಲಿ ಎಂದಾದರೂ ಸಾಧ್ಯವಾಗಿದೆಯೇ? ಬದುಕಿನ ರೀತಿ ನೀತಿಗಳು ಸ್ವಭಾವದಿಂದ ಬಂದಿದೆಯೇ, ಸಮಾಜದ ರೀತಿ-ನೀತಿಗಳಿಂದ ಬಂದಿದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಹೀಗೆ ಅಂತರಂಗ ತೆರೆದಾಗ ಬದುಕಿನ ವಿಕ್ಷಿಪ್ತತೆಗಳು ಸಿಕ್ಕುತ್ತವೆ. ಅದೇ ವ್ಯಾಸರ ಕತೆಗಳ ಮೂಲ ದ್ರವ್ಯ. 'ಕಾಮ' ಮತ್ತು 'ಸಾವು' ಅವರ ಕಥಾ ಪ್ರಪಂಚದ ಮೂಲ ಬಿಂದುಗಳು. ಅವರ ಮಟ್ಟಿಗೆ ಇವೆರಡಕ್ಕೂ ವ್ಯತ್ಯಾಸವಿಲ್ಲ. ಎಷ್ಟೋ ಜೀವಿಗಳಲ್ಲಿ ಕಾಮ, ಸಾವಿನಲ್ಲೇ ಮುಕ್ತಾಯವಾಗುವುದನ್ನು ವ್ಯಾಸರು ಗುರುತಿಸುತ್ತಾರೆ. ಅದನ್ನು ಸುಖದ ಅನುಭವವಾಗಿ ಮಾರ್ಪಡಿಸಿಕೊಂಡಿರುವವನು ಮಾನವ. ಅಲ್ಲಿ ಕೂಡ ಸೋಲಿನ ಮೂರ್ಛೆಯಂತಹ ಅನುಭವ ಇರುವುದನ್ನು ವ್ಯಾಸರು ಗುರುತಿಸುತ್ತಾರೆ. 'ಲೌಕಿಕ ಪ್ರಪಂಚದಿಂದ ಅಲೌಕಿಕ ಪ್ರಪಂಚಕ್ಕೆ ಮನಸ್ಸು ಜಿಗಿಯುವುದು. ಸಾವಿನ ನಂತರವೂ ಮನಸ್ಸು ಆತ್ಮವಾಗಿ ಬದುಕುವುದು' ಎನ್ನುವಂತಹ ಮಾತುಗಳು ವ್ಯಾಸರ 'ಕುಜ' ಎಂಬ ಕತೆಯಲ್ಲಿ ಬರುತ್ತವೆ. 'ಸಾವು ಜೀವನದ ಕೊನೆಯಲ್ಲಿ ಬದುಕಿನ ರೂಪಾಂತರ' ಎಂದ ವ್ಯಾಸರು ಕಾಮವನ್ನು ಅದೇ ನೆಲೆಯಲ್ಲಿ ನೋಡುತ್ತಾರೆ. ಅವರ ಕತೆಗಳಲ್ಲಿ ಕಾಮ ಎಂಬುದು ಲೈಂಗಿಕ ನೆಲೆಯ ಕಾಮವಲ್ಲ, ಇಲ್ಲಿ ಇಂದ್ರಿಯಗಮ್ಯ ವಿವರಗಳು ಬಂದರೂ ಅದು ರೂಪಕವಾಗುವುದು ಮನಸ್ಸಿನ ವ್ಯಾಪಾರಗಳಿಗೆ. 'ಲಾವಾ' ಕತೆಯಲ್ಲಿ ಗಂಡು-ಹೆಣ್ಣಿನ ಸಂಬಂಧದಲ್ಲಿ ಪಾವಿತ್ರ್ಯ ಒಂದು ನಟನೆಯಾಗುತ್ತದೆ ಎಂಬ ಮಾತು ಬರುತ್ತದೆ. ಅದರಲ್ಲಿ ಸ್ತ್ರೀ ಪ್ರಧಾನ ಸಮಾಜ ಇತಿಹಾಸ ಚಕ್ರದ ಬದಲಾವಣೆಯಲ್ಲಿ ಕಂಡ ಪರಿವರ್ತನೆಗಳ ಬಗ್ಗೆ ಚರ್ಚೆ ಇದೆ. ಸಾಮಾನ್ಯವಾಗಿ ವ್ಯಾಸರ ಕತೆಗಳಲ್ಲಿ ಅರ್ಧಾವತಾರವಾಗುವ ವಿಲಾಸಿನಿ ಈ ಕತೆಯಲ್ಲಿ ಪೂರ್ಣಾವತಾರವಾಗುತ್ತಾಳೆ. ಅವಳ ಎರಡೂ ಸಂತಾನವೂ ವಿಕಾರವಾಗಿ, ಗಂಡನೂ ಅಕಾಲಿಕವಾಗಿ ಸತ್ತು ಅನಾಥ ಪ್ರಜ್ಞೆ ಕಾಡುತ್ತದೆ. ಆಕಸ್ಮಿಕವಾಗಿ ಪರಿಚಿತನಾದ ರಮೇಶ್ ಮೂಕ ಪಶುವಿನಂತೆ ಸಿಕ್ಕಿದ್ದಾಗ ಅವಳಿಗೆ ಆಬ್ಸೆಶನ್ ಆಗುತ್ತದೆ. ಕತೆಯ ಅಂತ್ಯದಲ್ಲಿ ದೀಪದ ಬೆಳಕು ಸೂರ್ಯನ ಬೆಳಕಿನಂತಾಗುವ ವಿವರಣೆ ಬರುತ್ತದೆ. ಇದರ ಅನ್ಯಲಿಂಗೀಯ ಸಾಧ್ಯತೆ ಎನ್ನುವಂತೆ 'ಅಸ್ತ್ರ' ಕತೆ ಇದೆ. ಅಲ್ಲಿ ರವಿಕಿರಣ ಶರ್ಮನ ಸತ್ತ ದೇಹ ಯುದ್ಧದಲ್ಲಿ ಉಪಯೋಗಿಸಿದ ಅಸ್ತ್ರದ ಹಾಗೆ ನಜ್ಜುಗುಜ್ಜಾಗಿ ಕಾಣುವ ವಿವರಗಳು ಕತೆಯಲ್ಲಿ ಬರುತ್ತವೆ. 'ಕೆಂಡ' ಕತೆಯ ನಾಯಕ ಶಿವದಾಸ್‌ಗೆ ಮಗಳು ಬಿಂದು ನಮ್ಮ ಮನೆಯ ಫ್ಯಾಮಿಲಿ ಫೋಟೋದಲ್ಲಿರುವಂತಿಲ್ಲ ಎಂಬ ಅನುಮಾನ ಅದಕ್ಕೆ ಕಾರಣವೂ ಇದೆ. ಅವಳು ಹೋಲುತ್ತಿರುವುದು ಹೆಂಡತಿಯ ಸಂಗೀತ ಗುರುಗಳನ್ನು ಅದನ್ನು ಅವನ ಹೆಂಡತಿ ರೂಪಾ ಅನೈತಿಕ ಎಂದೇನು ಕರೆಯುವುದಿಲ್ಲ.

'ನನ್ನ ಗುರುಗಳು ನನಗೆ ಒಂದು ವ್ಯಕ್ತಿಯಾಗಿರಲಿಲ್ಲ, ಒಂದು ಪುರುಷನಾಗಿರಲಿಲ್ಲ, ಅವರೊಂದು

ನಿನಾದವಾಗಿದ್ದರು. ಅವರಿಗೆ ಆಕಾರ ಇರಲಿಲ್ಲ. ಅವರು ವಯಸ್ಸಿನಲ್ಲಿ ನನಗಿಂತ ಬಹಳ ಹಿರಿಯರಾಗಿದ್ದರು.'

ಹೀಗೆ ಅಮೂರ್ತ ವಿವರಗಳಲ್ಲಿಡುತ್ತಾ ಹೋಗುತ್ತಾಳೆ.

'ಬೀಜ' ಎನ್ನುವ ಕತೆಯಲ್ಲಿ ಇದು ಸೃಷ್ಟಿ ಕ್ರಿಯೆಗೆ ಇನ್ನಷ್ಟು ಹತ್ತಿರವಾಗುತ್ತಾ ಹೋಗುವ ಪ್ರಕ್ರಿಯೆಯಾಗಿ ಮಾರ್ಪಾಡಾಗುತ್ತದೆ. ಭಾವನ ಆಕ್ರಮಣಕ್ಕೆ ಒಳಗಾಗುವ ನಾದಿನಿ ಅದನ್ನು ದಾಖಲಿಸುವ ಕ್ರಮ ಇದು.

> 'ಪ್ರಿಯತಮನಲ್ಲದ, ಗೆಳೆಯನಲ್ಲದ, ರಾಕ್ಷಸನಲ್ಲದ, ದೇವತೆಯಲ್ಲದ, ಸಂಬಂಧ ಬಯಸದ, ಕೇವಲ ಕೊಂಡಿಯಾಗುವ ರಭಸವೊಂದು ನನ್ನನ್ನು ಆಕ್ರಮಿಸಿತು. ಅತಿಕ್ರಮಿಸಿತು. ನೋಯಿಸುತ್ತಾ, ನೋವನ್ನು ನೇವರಿಸುತ್ತಾ ನೋವಿನಲ್ಲಿ ಸುಖವನ್ನು ಹುಡುಕುತ್ತಾ, ನೋವಿನ ಆಳದಲ್ಲಿ ನಗುವನ್ನು ಸುರಿಸುತ್ತಾ ಪ್ರತಿಯೊಂದು ಸ್ಪರ್ಶ ಬಿಂದುವಿನಲ್ಲೂ ಒತ್ತಡವಾಗುತ್ತಾ ಹೊರೆಯಾಗುತ್ತಾ, ಹೊರೆ ಇಳಿಸುತ್ತಾ, ಹೊರ ಒಳ ಜಗತ್ತೆಂಬ ಜಗತ್ತನ್ನೇ ಬಿಂದು ಬಿಂದುವಾಗಿಸುವಂತೆ ಹಿಂಡುತ್ತಾ ಆವರಿಸಿದ ಮೋಡದ ಬೆಟ್ಟ ಮಳೆಯಾಗಲಾರಂಭಿಸಿತು.
>
> ತೋಯ್ದು ಹೋದೆ
>
> ತೇಯ್ದು ಹೋದರು.'

ಈ ಕತೆಯ ಅಂತ್ಯದಲ್ಲಿ ವ್ಯಾಸರು ಕೊಡುವ ಟಿಪ್ಪಣಿ ಅದಕ್ಕೆ ಪೂರಕವಾಗಿದೆ. ಭೂಮಿಯ ಪ್ರತಿರೂಪ ಹೆಣ್ಣಾಗಿದ್ದಾಳೆ. ಪ್ರತಿ ಸೃಷ್ಟಿ ನಿರಂತರವಾಗಿ ನಡೆಯುತ್ತಲೇ ಇರುತ್ತದೆ. ಸೃಷ್ಟಿಗೆ ಪಾಪವಿಲ್ಲ ನಿತ್ಯ ಗರ್ಭಿಣಿ ನಿತ್ಯ ಮುಟ್ಟಿನ ಭೂಮಿಯಾಗಿದೆ. ಹಾಗೆ ಭೂಮಿಯನ್ನು ತಾಯಿಯೆಂದು ಕರೆಯಲಾಗಿದೆ. ಹೆಣ್ಣು ಯಾವತ್ತು ತಾಯಿಯೇ. ಅದಕ್ಕೇ ಹೆಣ್ಣನ್ನು ಭೂಮಿಗೆ ಹೋಲಿಸುತ್ತಾರೆ. ಈ ಅರ್ಥದಲ್ಲಿ ಕತೆಯನ್ನು ಓದಿದ ವಸುಧ ಭೂಮಿಯಷ್ಟೇ ವಿಸ್ತಾರಕ್ಕೆ ವಿಸ್ತರಿಸುತ್ತಾಳೆ. ನನ್ನೊಳಗೆ! ನಿಮ್ಮೊಳಗೆ!

ಆದರೆ ವ್ಯಾಸರು ತಾಯಿ ಎಂಬ ಕಲ್ಪನೆಯನ್ನೂ ಪರಿಶೀಲಿಸುತ್ತಾರೆ. ಅದರ ಸುತ್ತಲೂ ಇರುವ ವೈಭವೀಕರಣವನ್ನು ಬೆದಕಿನೋಡುತ್ತಾರೆ. ಅದನ್ನು ಕೇವಲ ಮಾನವ ಸ್ವಭಾವವೆಂದು ಒಪ್ಪಿಕೊಳ್ಳುವುದಿಲ್ಲ. ಅವರ 'ಪಕ್ಷಿ' ಮತ್ತು 'ಅಮ್ಮ' ಎರಡೂ ಕತೆಗಳು ಈ ಅರ್ಥದಲ್ಲಿ ಕುತೂಹಲಕರವಾಗಿದೆ. ಅಲ್ಲಿ ಅಮ್ಮ ಭಾಷೆಯ ಉಗಮದ ಹಾಗೆ ಕಾಣುತ್ತಾಳೆ. ಕುಂತಿಯ ಹಾಗೆ ಜನ ಸಮುದ್ರಕ್ಕೆ ಮಗುವನ್ನು ಎಸೆದು ಓಡಿ ಹೋಗುತ್ತಾಳೆ. 'ಹಮ್ಮು' ಕತೆಯ ನಾಯಿಕೆಗೆ ಗಂಡನಿಗೆ ತನ್ನ ಅಕ್ರಮ ಸಂಬಂಧದ ವಿವರಗಳೆಲ್ಲ ತಿಳಿದಿದೆ ಎಂಬ ಅಂತ ಭಯವನ್ನು ತರುವುದಿಲ್ಲ. ಧೈರ್ಯವಾಗಿ ತಾನು ಪ್ರೇಮಿಸಿದ ಹುಡುಗನೊಂದಿಗೆ ಸೇರಲು ಬರುತ್ತಾಳೆ ಏಕಾಂತದಲ್ಲಿ ಆತ—

> 'ನಿನ್ನ ಗಂಡ ಚಕ್ಕನೆ ರಾತ್ರಿಯೇ ಬಂದರೆ'
>
> 'ಬರೋದಿಲ್ಲ'
>
> 'ಬಂದರೆ'
>
> 'ಅವರಿಗೆ ಅವರು ಕಳೆದುಕೊಂಡಿರುವುದೇನು ಗೊತ್ತು'
>
> 'ಅದರೂ'

'ಪಡೆಯಲು ಅವರು ಇರುವ ಕಷ್ಟ ಕಳೆದುಕೊಳ್ಳಲು ಇರೋದಿಲ್ಲ' ಎನ್ನುತ್ತಾಳೆ.

ಈ ಜಗತ್ತಿನಲ್ಲಿರೋ ಎಲ್ಲಾ ಸುಖಗಳು ಪವಿತ್ರವಾಗಿರೋದೇ ಇಲ್ಲ. ದೇವರು ಸುಖವನ್ನು ಪ್ರಸಾದವಾಗಿ ನೀಡಿದರೆ ಪಾಪವೂ ಪುಣ್ಯವಾಗುತ್ತದಲ್ಲ. ಪ್ರೀತಿಯನ್ನು ಹಂಚಿಕೊಂಡರೆ ವಿಷವಾಗುತ್ತೆ ಧನ ಧಾನ್ಯ ಒಡವೆ ಹಂಚಿಕೊಂಡರೆ ದಾನವೋ' ಎನ್ನುತ್ತಾಳೆ ನಿರೂಪಕಿ.

ಹೊರಗೆ ಅವಳ ಗಂಡ ಬಂದು ಗರ್ಜಿಸುವಾಗಲೂ 'ಪಾರ್ಸಿಗಳ ಸ್ಮಶಾನದ ಟವರ್ ಆಫ್ ಸೈಲೆನ್ಸ್‌ನ ಸುತ್ತ ಹದ್ದುಗಳು ಕಾಯುತ್ತಿರುತ್ತವೆ. ಹದ್ದು ಜೀವಂತ ವಸ್ತುಗಳನ್ನು ಮುಕ್ಕುವುದಿಲ್ಲ. ತಿನ್ನುವುದಿಲ್ಲ. ನನ್ನ ಹದ್ದು ಬಂದಿದೆ' ಎನ್ನುತ್ತಾ ಪ್ರೀತಿಸಿದವನನ್ನು ಚುಂಬಿಸಿ ಮಹಡಿಯ ಕಿಟಕಿಯಿಂದ ಕೆಳಗಿರುವ ಬಾವಿಗೆ ಹಾರಿಕೊಳ್ಳುತ್ತಾಳೆ. ಇಲ್ಲಿ ಬದುಕು-ಸಾವು ಕ್ರಿಯೆಯ ಸಣ್ಣ ವ್ಯತ್ಯಾಸ ಹೊರತು ಪಡಿಸಿದರೆ ಒಂದೇ ಆಗಿ ಬಿಡುತ್ತದೆ. ಅವಳ ಸಾವಿಗೆ ಉದಾತ್ತತೆ ಇಲ್ಲ, ಆವೇಶವಿಲ್ಲ ಹಾಗೆ ತರ್ಕಬದ್ಧತೆ ಕೂಡ ಇಲ್ಲ. 'ಶವ'ದ ಕೃಷ್ಣಶರ್ಮ ಬದುಕಿನುದ್ದಕ್ಕೂ ಸಂಬಂಧಗಳ ಸೋಲನ್ನೇ ಕಂಡು ಹೆಂಡತಿಯ ಸಾವಿನ ಸುದ್ದಿಗೆ ಹೆದರಿ ಚೆಲುವೆ ರೂಪಾಳನ್ನು ಬಲಾತ್ಕರಿಸಲು ಹೋದವನು. ಈ ರೂಪ ಭಾವನೆಯೇ ಬೆಳೆಯದ ಬಾಲಿಕೆ. ಅವಳನ್ನು ಕ್ಷಮೆ ಕೇಳಿ ಎನ್ನುವಾಗ 'ಕ್ಷಮೆ'ಯ ಅರ್ಥ ಅಷ್ಟು ಚಿಕ್ಕ ಹುಡುಗಿಗೆ ಗೊತ್ತೇ ಎನ್ನುತ್ತಾನೆ. ಹಾಗೆ ಅಷ್ಟು ಚಿಕ್ಕ ಹುಡುಗಿಗೆ ಕಾಮದ ಅರ್ಥ ಕೂಡ ಗೊತ್ತ ಎಂಬ ಪ್ರಶ್ನೆ ಬರುತ್ತದೆ ಇದಕ್ಕೆ ಕೃಷ್ಣಶರ್ಮನಲ್ಲಿ ಉತ್ತರವಿಲ್ಲ. ಇವರೆಲ್ಲ ಹೆಣ್ಣಿನಲ್ಲಿ ಬಿಡುಗಡೆ ದಾರಿ ಹುಡುಕುತ್ತಿದ್ದಾರೆ. ಆದರೆ ಅವರಿಗೆ ದೇಹ ವ್ಯಾಪಾರಕ್ಕಿಂತ ಮೇಲೇರಲು ಆಗುತ್ತಿಲ್ಲ. ಅವರ ಸೋಲಿಗೆ ಮತ್ತು ಕುಸಿತಕ್ಕೆ ಇದೇ ಕಾರಣ.

ಇದೇ ಕತೆಯ ಇನ್ನೊಂದು ಸಾಧ್ಯತೆಯಾಗಿ ಕಾಣುವ 'ಹಲ್ಲೆ' ಕತೆಯಲ್ಲಿ ಅಡಿಗರ ಮಗಳು ಕೊಲೆಯಾಗಿದ್ದಾಳೆ. ಅಡಿಗರ ಇಡೀ ಬದುಕು ಅವರ ಕುರೂಪದಿಂದಾಗಿ ಭರ್ತ್ಸನೆ ಗೇಲಿಗಳಿಗೆ ಒಳಗಾಗಿ ಕುಗ್ಗಿ ಹೋಗಿದೆ. ಅವರ ಬದುಕಿನಲ್ಲಿ ಬಂದ ಒಂದೇ ಒಂದು ಸುಖದ ಕ್ಷಣವನ್ನವರು ಹೀಗೆ ವಿವರಿಸುತ್ತಾರೆ.

> '..ಒಂದು ರಾತ್ರಿ ಮುಚ್ಚಿದ್ದ ಅಂಗಡಿಯೊಂದರ ಜಗಲಿಯಲ್ಲಿ ಮಲಗಿದ್ದೆ, ರಾತ್ರಿ ಅಪರಿಚಿತ ಕೈಗಳೆರಡು ನನ್ನ ಪರಿಚಯ ಬೆಳೆಸಿಕೊಂಡವು. ಈ ಸ್ಪರ್ಶದ ಅಮಲಿನಲ್ಲಿದ್ದೆ. ಬೆಳಗಾದಾಗ ಆ ಕೈಗಳ ಬೆರಳುಗಳು ಕುಷ್ಠ ರೋಗದಿಂದ ಕರಗಿ ಹೋದ ಭಿಕ್ಷುಕಿಯ ಕೈಗಳಾಗಿದ್ದವು ಎಂದು ತಿಳಿಯಿತು... ಮತ್ತೆ ಅಂತಹ ಪ್ರತಿಫಲ ಬೇಡದ... ಆತ್ಮೀಯ ಬೇಡಿದ ಕೈಗಳ ಹಿಡಿತ ನನಗೆಂದೂ ಸಿಗಲಿಲ್ಲ.'

ವ್ಯಾಸರ ಕತೆಗಳು ಸೇರುವ ಗುರಿ ಇಂತಹದು.

೫

ವ್ಯಾಸರ ಕತೆಗಳಲ್ಲಿ ಕಾಣುವ ಇನ್ನೊಂದು ನೆಲೆ ಸಾವಿನದು. ಅದು ಅಸಹಾಯಕವೂ ಭೀಕರವೂ ಆಗಿ ವಿವರಗಳಲ್ಲಿ ಬಣ್ಣಿಸಲ್ಪಟ್ಟರೂ ಎಷ್ಟೋ ಸಲ ಬದುಕಿಗಿಂತಲೂ ಸಹನೀಯ ಎನ್ನಿಸುತ್ತದೆ. 'ಬಾಣ' ಕತೆಯಲ್ಲಿ ಒಂದೇ ತೆರನಾಗಿದ್ದ ತಾಯಿ-ಮಗಳು ಜೋಡಿಯಲ್ಲಿ ಮಗಳು ಪ್ರಿಯಕರನ ಜೊತೆ ಓಡಿ ಹೋಗಿದ್ದಾಳೆ. ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. 'ಹಸಿವು' ಸಾಯುತ್ತದೆಯೇ ಎಂಬ ಪ್ರಶ್ನೆ ಸಾವಿನೊಳಗಿನಿಂದ ಮಗಳನ್ನು ಬಾಣವಾಗಿ 'ಕಾಡುತ್ತದೆ' 'ಭ್ರಷ್ಟ' ಕತೆಯಲ್ಲಿ ತಂದೆ ಸಾಯುವುದನ್ನು ಕಾಯುತ್ತಲೇ ಮಧುವಿನ ಭಾವನೆಗಳು ಸಾಯುತ್ತದೆ. ಹೆಂಡತಿಯ ಜೊತೆಗಿನ ಸಂವಾದ ಕುಸಿದು ಬೀಳುತ್ತದೆ.

ತಂದೆಯ ಸಾವು ಕೂಡ ಅವನನ್ನು ಈ ಅಸಹಾಯಕತೆಯಿಂದ ಬಿಡುಗಡೆಗೊಳಿಸುವುದಿಲ್ಲ. ಕತೆಯ ಅಂತ್ಯದಲ್ಲಿನ ಅಸ್ಪಷ್ಟ ಸಾವಿನ ವಿವರಗಳು ವೈಚಾರಿಕವಾಗಿ ಹೊಸ ಸಾಧ್ಯತೆಗೆ ದಾರಿಯಾಗಬಲ್ಲವಾಗಿವೆ. 'ಬಕ' ಕತೆಯಲ್ಲಿ ಮತ್ತೆ-ಮತ್ತೆ ಸಾವಿನ ವಿವರಗಳು ಬರುತ್ತವೆ. ಇಲ್ಲಿ ನಿರಂಜನಶರ್ಮ ಮತ್ತು ರಾಮಚಂದ್ರಶಾಸ್ತ್ರಿ ಒಂದೇ ವಿವರಗಳ ಭಿನ್ನ ಸಾಧ್ಯತೆಯಾಗಿ ಕಾಡುತ್ತಾರೆ ಮತ್ತು ಬದುಕು ಕೂಡ ಈ ಸಾಧ್ಯತೆಯೊಳಗೆ ಸುಸುಳುತ್ತದೆ. 'ಅಸ್ತ್ರ' ಕತೆಯಲ್ಲಿ ರವಿಕಿರಣ ಶರ್ಮನ ಎಚ್ಚರವಾಗಿ 'ಸಾವು' ಬರುತ್ತದೆ. 'ನದಿ' ಕತೆಯಲ್ಲಿ ಕೇಶವನ ತಂದೆಯ ಸಾವಿನ ವಿವರಗಳು ಬರುತ್ತದೆ. ಅಡಿಗ ಮನೆಯ ಬಳಿ ಶವವಾಗಿ ಬಿದ್ದ ಅವರು ಚಾಚಿದ ಕೈ ನೀರಿನ ಪಾತ್ರೆಯನ್ನು ತೋರಿಸುತ್ತಿರುತ್ತದೆ. ವ್ಯಾಸರ ವಿಶಿಷ್ಟವಾದ ಕತೆ 'ಕಾಂತ'ದಲ್ಲಿ 'ಸೌಂದರ್ಯ'ವೇ ನಾಯಕನಲ್ಲಿ ಖಾಲಿತನ ತುಂಬುತ್ತಾ ಕೊನೆಗೆ ಸಾವಿಗೆ ಕಾರಣವಾಗುತ್ತದೆ. ಅಲ್ಲಿನ ಶ್ರೀನಿವಾಸ ಡಿ (ಡಿಫರ್ ಡೆಡ್'ನ) ಸಾವಿನ ವಿವರಗಳು ಹೀಗಿವೆ.

> 'ಚಿಕ್ಕ ಚಿಕ್ಕ ಮೋಡದ ತುಣುಕುಗಳು ಮೇಲಿಂದ ಮೇಲೆ ಧಾವಿಸಿ ಬಂದು ಚಂದ್ರನ ಬೆಳಕನ್ನು ಮಲಿನ ಮಾಡುತ್ತಿದ್ದವು. ಆಮೇಲೆ ಗಜ ಗಾತ್ರದ ಕಾರ್ಮೋಡಗಳು ಬಂದವು. ಅಂಡಮಾನಿಗೆ ಎಂದೋ ಬಂದಿದ್ದ ಮುಂಗಾರು. ಈ ಕರಾವಳಿಗೂ ಬಂದಿತ್ತು. ನಿರೀಕ್ಷೆಗಿಂತ ತಡವಾಗಿ, ಗಾಳಿ ರಭಸವಾಗಿ ಭರದಿಂದ ಬೀಸುತ್ತಿತ್ತು. ಮರಗಿಡಗಳು ಎತ್ತ ಏನು ತಿಳಿಯದೆ ಗಾಳಿ ತಿರುಗಿಸಿದಂತೆ ತಿರುಗುತ್ತಿದ್ದವು. ಹಣ್ಣೆಲೆಗಳು ಉದುರುತ್ತಿದ್ದವು. ಎಲೆ ಚಿಗುರುಗಳ ಸಹಿತ ಮೋಡಗಳ ಹಿಂದಿನ ಚಂದ್ರನ: ಸಂಜೆಯನ ಬೆಳಕು; ಭಾರವಾಗಿ ಘನವಾಗಿ, ಬಂಧನ ಒಡೆದು ಧುಮುಕುವ ಹಾಗೆ ಮಿಂಚುಗಳು ಆಗೊಮ್ಮೆ ಈಗೊಮ್ಮೆ ಕಗ್ಗತ್ತಲನ್ನು ಕ್ರೂರವಾಗಿ ಸೀಳಿ ಹಾಕುತ್ತಿದ್ದವು. ಬೆಳಕಿನ ಸ್ಫೋಟದ ಹಾಗೆ: ಬೆಳಕಿನ ಶಬ್ದದ ಅಪರಿಚಿತ ಲಿಪಿಗಳ ಹಾಗೆ ಜಿರು ಮಳೆ ಇಬ್ಬನಿಯ ಹನಿ-ಹನಿ ಪತನವಾಗುವಂತೆಯೂ ಬಿರುಗಾಳಿ ತಂಗಾಳಿಯಂತೆಯೂ ಸಿಡಿಲ ಅಬ್ಬರದ ಧ್ವನಿಗಳು ಮೃದು-ಮೃದಂಗದ ತಾಡನಗಳಂತೆಯೂ ಕೇಳಿಸುತ್ತಿರಲು ಭಾರವಾದುದೆಲ್ಲ ಹಗುರವಾದಂತೆನಿಸಿ ಶ್ರೀನಿವಾಸ ಚಿರನಿದ್ರೆಗೆ ಜಾರುತ್ತಾ ಇದ್ದ, ಉಳಿದ ಕೋಟ್ಯಾನು ಕೋಟಿ ಜೀವಿಗಳ ಸುಖನಿದ್ರೆಗೆ ಜೊತೆಯಿಲ್ಲದ-ಜೊತೆಯಾಗುತ್ತ ಸಾಯುತ್ತಾ...'

ಇದನ್ನು ಅನುಸರಿಸಿದಂತೆ 'ಕೂಪ' ಕತೆಯಲ್ಲಿ ವ್ಯಾಸರು ಹೇಳುತ್ತಾರೆ.

> 'ನಿಜ. ಜೀವಿತ ಇಷ್ಟು ಸರಳವಾಗಿರೊದಿಲ್ಲ. ಗಣಿತದ ಕೂಡಿಸು-ಕಳೆ ಚಿಹ್ನೆಗಳಲ್ಲಿ ಜೀವಿಸುತ್ತಿರೊ ಮನುಷ್ಯ ನಿಮಿಷ ನಿಮಿಷಗಳನ್ನು ಜೀವಿತಕ್ಕೆ ಕೂಡಿಸುತ್ತೇನೆ ಎಂದು ಕೊಳ್ಳುತ್ತಾನೆ. ಆದರೆ ಅದೇ ಕ್ಷಣದಲ್ಲಿ ವಾಸ್ತವವಾಗಿ ಆತ ನಿಮಿಷ ನಿಮಿಷಗಳನ್ನು ಕಳೆಯುತ್ತಿರುತ್ತಾನೆ. ಶವವಾಗಿ ನಾಲ್ಕು ಮಂದಿ ಹೊರಲ್ಪಡುವ ಮುನ್ನ ಮನುಷ್ಯ ತನ್ನ ಶವವನ್ನೇ ಸ್ವಲ್ಪ ಕಾಲ ಹೊರಲೇಬೇಕಾಗುತ್ತದೆ.'

ಇದನ್ನು ಅವರು ಸಾವನ್ನು ತಮ್ಮ ಕತೆಗಳಲ್ಲಿ ಹೇಗೆ ಬಳಸಿ ಕೊಳ್ಳುತ್ತಿದ್ದಾರೆ ಎಂಬ ಹಿನ್ನೆಲೆಯಲ್ಲಿ ಗುರುತಿಸ ಬಹುದು. ಅವರು ಪ್ರತಿ ಜೀವಿಯೂ ತನ್ನ ಬದುಕನ್ನು ಸಾವಿನತ್ತ ಸಾಗುತ್ತಲೇ ಸಾಧಿಸುತ್ತಿದ್ದಾನೆ ಎಂಬುದನ್ನು ವಿಷಾದದಿಂದ ಗುರುತಿಸುತ್ತಾರೆ. ಅವರು ಗುರುತಿಸುವ ಸಾವು ಕೇವಲ ದೇಹದ ಸಾವಲ್ಲ. ಅದು ಸಾಧ್ಯತೆಗಳ ಸಾವು. ಹೀಗಾಗಿ ದೇಹ ಮತ್ತು ಮನಸ್ಸು ಭಿನ್ನವಾಗಿ ಸಾಗುತ್ತವೆ. ಹೀಗೆ ಸಾಗುವುದರಿಂದಲೇ ಜಟಿಲತೆ ಉಂಟಾಗುತ್ತದೆ. ದೇಹದ ಸಾವು ಪ್ರಕೃತಿ ಸಹಜವಾದ ಕ್ರಿಯೆ. ಇದರಲ್ಲಿ

ಆತಂಕ ಪಡುವಂತಹದು ಏನೂ ಇಲ್ಲ. ಆದರೆ ದೇಹವಿದ್ದಾಗಲೇ ಸಂಬಂಧಗಳು ಸಾಯುತ್ತವೆ, ಆ ಮೂಲಕ ಸಾಧ್ಯತೆಗಳು ಸಾಯುತ್ತವೆ. ಇದರಿಂದ ಜೀವನ ಕೃತಕವಾಗುತ್ತದೆ, ಅಸಹನೀಯವಾಗುತ್ತದೆ. ಇದು ವ್ಯಾಸರ ಕತೆಗಳಲ್ಲಿ ಮೂಲದ್ರವ್ಯವಾಗಿರುವ ವಿಷಾದ. ಕೃತಕವಾದ ಬದುಕಿಗೆ ಅವರ ಕತೆಗಳಲ್ಲಿ ಎಷ್ಟೋ ಸಲ ಸಹಜವಾದ ಸಾವು ಪರಿಹಾರದಂತೆ ಬರುತ್ತದೆ. ಅವರ ಕತೆಗಳನ್ನು ಈ ತಾತ್ವಿಕ ನೆಲೆಯಲ್ಲಿ ಗುರುತಿಸಿಕೊಂಡರೆ, ಹಲವಾರು ಆಯಾಮಗಳು ಲಭಿಸಬಲ್ಲವಾಗಿವೆ. ದೇಹದ ಅಸ್ತಿತ್ವಕ್ಕಿಂತ ಮನಸ್ಸಿನ ಅಸ್ತಿತ್ವ ಭಿನ್ನ ಎಂದಷ್ಟೇ ಹೇಳದ ವ್ಯಾಸರು, ದೇಹವಳಿದ ಮೇಲೂ ಉಳಿಯುವ ಮನಸ್ಸಿನ ಬಗ್ಗೆ ಕುತೂಹಲ ವ್ಯಕ್ತಪಡಿಸುತ್ತಾರೆ. ವ್ಯಕ್ತಿ ನೆಲೆಯನ್ನು ಮೀರಿ ಸಮುದಾಯದ ಸುರುಳಿಯಲ್ಲಿ ಸೇರುವ ನೆನಪಿನ ಕೊಂಡಿ ಬಗ್ಗೆ ಹಲವೆಡೆ ಅವರ ಕತೆಗಳಲ್ಲಿ ಚರ್ಚೆಗಳಿವೆ. ವ್ಯಾಸರು ಸಾವಿನ ಬಗ್ಗೆ ಮಾತಾಡುತ್ತಿದ್ದರೂ ಅದರ ಅಂತರಾಳದಲ್ಲಿರುವುದು ಬದುಕಿನ ಕುರಿತಾದ ಕಾಳಜಿಯೇ ಎಂದು ನಾನು ಭಾವಿಸುವುದು ಈ ಕಾರಣಕ್ಕಾಗಿಯೇ.

೬

ವ್ಯಾಸರ ಕತೆಗಳು ನಡೆಯುವುದು ಕೆಲವು ಸ್ಥಾಯಿ ವಿವರಗಳಲ್ಲಿ. ಅವುಗಳ ಪುನರಾವರ್ತನೆ ಅವರ ಕತೆಗಳ ಸಾವಯವ ಶಿಲ್ಪವನ್ನು ಓದುಗರಿಗೆ ಪರಿಚಿತವನ್ನಾಗಿಸಿ ಬಿಡುತ್ತದೆ. ಸಾಲು ಸಾಲು ಮರಗಳು, ಕಾಡಿನಂತಹ ನಾಡು, ಕಾಡಿನಿಂದ ಬಂದ ದಾರಿಯಿಲ್ಲದ ದಾರಿ, ಯಾರೋ ಕರೆದಂತೆ ಗುಡ್ಡದಿಂದ ತಳ್ಳಿಸಿಕೊಂಡಂತೆ ಬರುವ ಪಾತ್ರಗಳು, ಎದುರಾದ ಕಣ್ಣುಗಳಲ್ಲಿ ತೀರದ ಭ್ರಮೆ. ಹೀಗೆ ಕಾಣುವ ಈ ಪಾತ್ರಗಳು ಹೆಸರು ಕೂಡ ವಿಲಾಸಿನಿ, ರೂಪ, ಶ್ರೀನಿವಾಸ ಶರ್ಮ, ರವೀ, ಹೀಗೆ ಪುನರಾವರ್ತಿತವಾಗುತ್ತಾ ಹೋಗುತ್ತವೆ. ಇವೆಲ್ಲದರ ಸ್ಥಿರ ನೆಲೆಯಾಗಿ ದುರ್ಗಾಪುರವಿದೆ, ಅಲ್ಲಿ ಶಂಕರಗುಡ್ಡವಿದೆ. ಮತ್ತು ಈ ಮೂರ್ತ-ಅಮೂರ್ತಗಳೆಲ್ಲ ಗ್ರಹಿಕೆಗೆ ಸಂಬಂಧಪಟ್ಟ ವಿಚಾರಗಳೇ ಹೊರತು ವ್ಯಾಸರ ಅಭಿವ್ಯಕ್ತಿಗೆ ಸಂಬಂಧದ ವಿಚಾರಗಳಲ್ಲ ಅವರೇ ಅದನ್ನು ಹೀಗೆ ಗುರುತಿಸಿದ್ದಾರೆ.

> ಮನುಷ್ಯನ ಇತಿಹಾಸ ನದಿಯ ಹಾಗೆ ಮೂಲದಲ್ಲಿ, ಅಕ್ಷರ ಒರತೆ ಇರುವ ನದಿಯ ಹಾಗೆ, ಹರಿವು ವರ್ತಮಾನದಿಂದ ಭವಿಷ್ಯದ ಕಡೆಗಿರುತ್ತದೆ. ಯಾವತ್ತೂ ಅದು ಹಾಗೆಯೇ ಇರುತ್ತದೆ. ನೀರಿನ ಬಿಂದುಗಳು ಹೊಸತೆ, ಆದರೆ ರೂಪ ಒಂದೇ, ದೃಶ್ಯ ಒಂದೇ. ಆದರೆ ಇದು ಅದಲ್ಲ ಆದರೂ ಇದೂ.... ಅದೇ... ಅದೇ..
>
> *(ಕೆಂಡ)*

ಶಂಕರೀ ನದಿ, ಮನುಕುಲದ ನೆನಪುಗಳ ನಿರಂತರ ಪ್ರವಾಹದಂತೆ ಹರಿಯುತ್ತಿರುತ್ತದೆ. ಶಂಕರಗುಡ್ಡ ಮನುಕುಲದ ಅಹಂಕಾರದ ಹಾಗೆ ಎದ್ದು ನಿಂತಿದೆ. ಇದರ ದಡದಲ್ಲಿ ದುರ್ಗಾಪುರವಿದೆ. ಅದು ನಾಗರೀಕತೆಯ ಸೋಂಕಿಗೆ ಹೆದರುತ್ತಿರುವ ಆದರೆ ಇನ್ನು ಸ್ವಜತೆ ಕಳೆದು ಕೊಳ್ಳದ ಇತ್ತ ನಗರವೂ ಅಲ್ಲದ ಅತ್ತ ಹಳ್ಳಿಯೂ ಅಲ್ಲದ ಚಿಕ್ಕ ಪಟ್ಟಣ. ಇಲ್ಲಿ ವಾಸಿಸುತ್ತಿರುವವರೂ ಕೂಡ ಆಧುನಿಕತೆಗೆ ತೆರೆದು ಕೊಳ್ಳಲಾಗದೆ, ಅದರ ಆಕ್ರಮಣದಿಂದ ತಪ್ಪಿಸಿಕೊಳ್ಳಲಾಗದೆ ಒದ್ದಾಡುತ್ತಿರುವವರು. ಬಿಡುಗಡೆ ದಾರಿಯನ್ನು ಹುಡುಕುತ್ತಾ ವರ್ತಮಾನದಲ್ಲಿ ಸಿಕ್ಕಿಬಿದ್ದವರು. ವ್ಯಾಸರ ಈ ಸ್ಥಾಯಿ ವಿವರಗಳು ಸರಿಸುಮಾರು ಮೂರು ದಶಕಗಳಷ್ಟು ಕಾಲ ಹಾಗೆ ಉಳಿದು ಕೊಂಡು ಬಂದಿದೆ. ಈ ಅವಧಿಯಲ್ಲಿ ನಮ್ಮ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ನೆಲೆಗಳು ಸಾಕಷ್ಟು ಬದಲಾಗಿವೆ, ಹೀಗಿದ್ದರೂ ಬದಲಾಗದ ದುರ್ಗಾಪುರ ನಮಗೆ

ಅಸಹಜ ಎನ್ನಿಸಲಿಲ್ಲ. ಇದೇ ವ್ಯಾಸರ ಕತೆಗಳಲ್ಲಿರುವ ಸಾರ್ವತ್ರಿಕ ಗುಣಲಕ್ಷಣಕ್ಕೆ ಉದಾಹರಣೆ. ಇಲ್ಲಿಂದ ಅನತಿ ದೂರದಲ್ಲೇ ಹೊಸದುರ್ಗವಿದೆ. ಈ ಹೊಸದುರ್ಗ ದುರ್ಗಾಪುರದ ಆಧುನಿಕ ವಿಕಾರದಂತೆ ಕಾಣುತ್ತದೆ. ಅದು ಕಾಂಕ್ರೀಟ್ ಅರಣ್ಯ. ಕಳ್ಳ ಸಾಗಾಣಿಕೆಗಾರರ, ಅರಬ್ ಹಣದ ಅಟ್ಟಹಾಸ ಬೀದಿ ಬೀದಿಗಳಲ್ಲಿ ಮೆರೆಯುತ್ತಿರುತ್ತದೆ. ಜನರಿಂದ ಗಿಜಿಗಿಜಿ ಅನ್ನುವ, ಅಲ್ಲಿನ ವ್ಯಕ್ತಿಗಳಿಗೆ ಅವರು ಹೊರಗಿನಿಂದ ಹೇಗೆ ಕಾಣುತ್ತಾರೋ ಅಷ್ಟೇ ಬೆಲೆ ಇರುತ್ತದೆ. ಮಾತ್ರವಲ್ಲ ಎದುರಾಗುವ ಪ್ರತೀ ಮುಖದಲ್ಲೂ ಯೋಜನೆಯ ಚಿಂತೆಯ ಗೆರೆಗಳು ಇದ್ದೇ ಇರುತ್ತವೆ. ಇಂತಹ ಕೃತಕ ಆಧುನಿಕತೆಯ ಹೊಸದುರ್ಗ, ನೈಜ ಪ್ರಕೃತಿ ಹಿರಿಮೆಯ ಆದರೆ ನಿಗೂಢ ಭಾವಲೋಕದ ದುರ್ಗಾಪುರಕ್ಕೆ ವ್ಯಾಸರ ಕತೆಗಳಲ್ಲಿ ನಿರಂತರವಾಗಿ ಮುಖಾಮುಖಿಯಾಗುತ್ತಾ ಹೋಗುತ್ತದೆ. ದುರ್ಗಾಪುರದಲ್ಲಿ ಸಿಕ್ಕಿಬಿದ್ದ ಅವರ ಪಾತ್ರಗಳು ಹೊಸದುರ್ಗದಲ್ಲಿ ಬಿಡುಗಡೆ ಕಾಣುತ್ತವೆ. ದುರ್ಗಾಪುರದಲ್ಲಿ ಪ್ರಕೃತಿ ವಿವರಗಳಂತೆಯೇ, ಹೀಗೆ ಮನೋ ಪ್ರಪಂಚ ದಟ್ಟ ವಿವರಗಳಲ್ಲಿ ಇಲ್ಲಿ ಮೈದಾಳುತ್ತದೆ. ಅಪರೂಪಕ್ಕೆ ಅಲ್ಲಿನ ಸಾಧು ಮಠವೂ ಚಿತ್ರಿತವಾಗಿರುವುದಿದೆ. ಈ ವಿವರಗಳಲ್ಲಿ ಹಳೆಯ ಮನೆಗಳ ಚಿತ್ರಣವಿದೆ. ಅದನ್ನು ಪರಿಣಾಮಕಾರಿಯಾಗೇ ವ್ಯಾಸರು ಬಳಸಿಕೊಳ್ಳುತ್ತಾರೆ.

> '...ನದಿ ನೀರಿಗೆ ತಾಗಿಕೊಂಡು ಅರ್ಧ ಕುಸಿದ ದೊಡ್ಡ ಹಳೆಯ ಮನೆಯೊಂದಿದೆ. ಇಪ್ಪತ್ತು ಕೋಣೆಗಳು ಹತ್ತು. ಈ ಹತ್ತು ಕೋಣೆಗಳಲ್ಲಿ ರಾಜ ಮನೆತನಕ್ಕೆ ಸೇರಿದ ಎರಡು ಕುಟುಂಬಗಳು ವಾಸಿಸುತ್ತವೆ. ಬ್ರಿಟಿಷರ ಕಾಲದಲ್ಲಿ ಸಾವಿರಾರು ಎಕರೆ ಭೂಸ್ವಾಮಿಗಳಾಗಿದ್ದ ಈ ಮನೆತನಕ್ಕೆ ಈಗ ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ಮಾತ್ರ ಭೂಮಿ ಇದೆ' (ಯಕ್ಷಿ)

> '...ಮನೆ ಹಳೆಯ ಕಾಲದ ಅರಮನೆಯ ಹಾಗಿದೆ. ಇಂಗ್ಲೀಷ್ ಅಕ್ಷರದ 'ಬಿ' ಆಕಾರದಲ್ಲಿ ಕಟ್ಟಿದ ಮನೆಗೆ, ಮೊಗಸಾಲೆ ಇದೆ. ಸುತ್ತಲೂ ಬಣ್ಣಗಟ್ಟು, ವಿಶಾಲವಾದ, ಎತ್ತರದ ಕಬ್ಬಿಣದ ಕಿಟಕಿಗಳಿವೆ. ಮುಂಬಾಗಿಲು ದೇವಸ್ಥಾನದ ಬಾಗಿಲಿನ ಹಾಗೆ ವಿವಿಧ ಚಿತ್ರಗಳು ಕೊರೆಯಲ್ಪಟ್ಟು ಬೃಹದಾಕಾರದ್ದಾಗಿದೆ. ಹಿತ್ತಾಳೆ, ಕಂಚುಗಳಿಂದ ಮಾಡಿದ ಚಿತ್ರಗಳಿರುವ ಮೊಳೆಗಳು ಬಾಗಿಲಿಗಿವೆ. ಎಲ್ಲಿ ಒತ್ತಿದರೆ ಅಲ್ಲಿ ಗಾಯವಾಗುವ ಹಾಗೆ, ಹಿತ್ತಾಳೆಯ ತಗಡುಗಳು ಎದ್ದು ನಿಂತಿವೆ. ವಿಶಾಲವಾದ ನೆಲದ ಮೇಲೆ ತುಂಬಾ ಧೂಳು ಕಣಗಳಿರುತ್ತದೆ.' (ಗತ)

ಹೀಗೆ ದಟ್ಟವಾದ ಮೂರ್ತ ವಿವರಗಳನ್ನು ಕೊಡುವ ವ್ಯಾಸರು ಅಷ್ಟೇ ಅಮೂರ್ತವಾಗಿ ಸಂಗೀತ-ಚಿತ್ರಕಲೆ ವಿವರಗಳನ್ನು ತಮ್ಮ ಕತೆಯ ಅಭಿವ್ಯಕ್ತಿಯಲ್ಲಿ ಬಳಸಿಕೊಳ್ಳುತ್ತಾರೆ.

ವ್ಯಾಸರ ಕತೆಗಳಲ್ಲಿನ ವಿವರಗಳು ಬೀರುವ ಪರಿಣಾಮವೂ ಇಂತಹದೇ. ಅದನ್ನು ಅವರೇ ಹೀಗೆ ವಿಶ್ಲೇಷಿಸುತ್ತಾರೆ.

ಶಂಕರೀ ನದಿ ನನ್ನ
ಸುಖದ ಹೊಳೆ
ದಃಖದ ಹೊಳೆ
ಪ್ರಶಾಂತ ಸರೋವರ
ನನ್ನ ಉಗಮ

ನನ್ನ ಅಲ್ಲೋಲ-ಕಲ್ಲೋಲ
ಸಮುದ್ರ ಶಂಕರೀ ನದಿಯಲ್ಲಿ
ನೀರು ಬತ್ತಿದರೆ ಇನ್ನೊಂದು
ಕ್ಷಣದಲ್ಲಿ ನೆರೆ ಬರುತ್ತದೆ.
ಶಂಕರಗುಡ್ಡ ನನ್ನ ಅಹಂಕಾರ
ನನ್ನ ಎತ್ತರ ನನ್ನ ಕೀರ್ತಿ
ನನ್ನ ನಿಶ್ಚಲತೆ, ದುರ್ಗಾಮರ
ನನ್ನ ರಂಗ, ರಣರಂಗ
ನನ್ನ ಅಹಂಕಾರ
ನನ್ನ ಕ್ರಿಯಾಕ್ಷೇತ್ರ
ನನ್ನ ರುದ್ರಭೂಮಿ
ನನ್ನ ತೊಟ್ಟಿಲು, ನನ್ನ ಮಡಿಲು
ವಾಸ್ತವವಾಗಿ ಇವೆಲ್ಲ ಇಲ್ಲ
ನಾನು ಕೂಡ ನನ್ನ ಕಲ್ಪನೆ

೭

ವ್ಯಾಸರು ನನಗೆ ಇನ್ನೂರಕ್ಕೂ ಹೆಚ್ಚು ಪತ್ರ ಬರೆದಿದ್ದಾರೆ. ಅವುಗಳು ಅವರ ಕತೆಗಳಿಗಿಂತ ಭಿನ್ನವಲ್ಲ. ಅದೇ ಪ್ರಶ್ನೆಗಳು, ಅವೇ ಸಂವೇದನೆಗಳು ಒಂದು ಅರ್ಥದಲ್ಲಿ ಅವನ್ನು ನಿರುತ್ತರ ಸಂವಾದ ಎಂದರೂ ನಡೆದೀತು. ನಾವು ಏನು ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ಅಷ್ಟಾಗಿ ಗಮನಕ್ಕೆ ತಂದುಕೊಳ್ಳದಂತೆ ಅವರ ಪತ್ರಗಳು ಬೆಳೆಯುತ್ತಿದ್ದವು. ಅವರು ಬರೆದ ಕೊನೆಯ ಪತ್ರ, ಅವರು ನಮ್ಮನಗಲಿದ ನಂತರ ನನ್ನ ಕೈ ಸೇರಿತು. ಒಂದು ಅರ್ಥದಲ್ಲಿ ಅವಲೋಕನದಂತಿರುವ ಈ ಪತ್ರವನ್ನು ಹಾಗೇ ಇಲ್ಲಿ ನೀಡುತ್ತಿದ್ದೇನೆ.

ಆತ್ಮ ಬಂಧು

ನಿಮಗೆ ಕೂಡಲೇ ಬರೆಯಲಾಗಲಿಲ್ಲ. ಮನಸ್ಸೇಕೋ ಸತ್ತಂತಿದೆ. ಸುಮ್ಮನೆ ಅತ್ತಿತ್ತ ಹೋಗುತ್ತಿರುತ್ತೇನೆ, ಬರುತ್ತಿರುತ್ತೇನೆ ಓಡಾಡುತ್ತಿರುತ್ತೇನೆ. ಮೇಜಿನ ಮುಂದೆ ಕುಳಿತು ಕಾಗದದಲ್ಲಿ ಏನೇನೋ ಗೀಚುತ್ತಿರುತ್ತೇನೆ. ಕವನಗಳಂತಿರುವ ಗೆರೆಗಳು, ಗೀಚುಗೆರೆಗಳು, ಅಕ್ಷರ ಪ್ರಪಂಚದಲ್ಲಿ, ಯಾರು ಯಾರೋ ಕೆತ್ತಿದ ಶಬ್ದಗಳ ವಾಕ್ಯಗಳ ಸಾಲುಗಳಲ್ಲಿ ಸಾಲು ದಾರಿಗಳಲ್ಲಿ ಸುಮ್ಮನೆ ಯಾತ್ರೆ ಹೋಗುತ್ತವೆ. ತಟ್ಟನೆ ಎಲ್ಲೋ ದಾರಿ ತಪ್ಪುತ್ತವೆ. ಅಥವಾ ದಾರಿಯೇ ಇರುವುದಿಲ್ಲವೇನೋ, ಮನಸ್ಸಿಗೆ ಶಾಶ್ವತವಾದ ಕಲ್ಲು ಗೀಟುಗಳು ಬಿದ್ದಿವೆ. ಅಳಿಸಲಾಗದ ಶಾಸನದಂತಹ ರೂಪಗಳು ಸಾಹಿತ್ಯ-ಸಾಹಿತ್ಯ ಎಂದು ಈ ಎಲ್ಲಾ ದಶಕಗಳಲ್ಲಿ ಕುಣಿದಾಡಿದೆ ಅಥವಾ ನಟಿಸಿದೆ. ಒಳಗೆ ಭೀಕರವಾದ ಟೊಳ್ಳು ಇದೆ. ನನಗೆ ಜಗತ್ತಿನ ರೀತಿ-ನೀತಿಗಳೆರಡೂ ಗೊತ್ತಿಲ್ಲ. ಜಗತ್ತಿನ ಸಾಹಿತ್ಯ ರಚನೆಗಳ, ಮೇರು ಪರ್ವತಗಳು

ನನಗೆಂದೂ ಗುರುತಾಗಲಿಲ್ಲ. ಹಳ್ಳಿಯ 'ಕುರುಬ'ನಾಗಿಯೇ ಉಳಿದೆ. ಮಹತ್ವದ ಮನುಷ್ಯರ ಪರಿಚಯವೂ ನನಗಾಗಲಿಲ್ಲ, ಹಾಡಿ ಹೊಗಳಲು ಕೀರ್ತನೆ ಮಾಡಲು ಹಿಂಬಾಲಕರಿಲ್ಲ. ಚದುರಂಗ ಆಡಲಿಲ್ಲ, ಕುಟ್ಟಿ ದೊಣ್ಣೆ ಆಡಿದ್ದೆ ಚಡುಗುಡು ಆಡಿದ್ದೆ ಜೀವಮಾನವಿಡೀ ಅತೃಪ್ತನಿದ್ದೆ. ಸುತ್ತಲೂ ನೀರಿದ್ದ ದ್ವೀಪದ ಮಧ್ಯೆ, ಅತಿ ನೀರು ಕುಡಿದು ಸತ್ತ ಬೇರುಗಳ ಹಾಗೆ ಮರದ ಹಾಗೆ ಇಂಚು ಇಂಚಾಗಿ ನಶಿಸುತ್ತಿದ್ದೇನೆ. ಹೀಗೆ ಬರೆಯುತ್ತಾ ಹೀಗೆ ನಟಿಸುತ್ತಾ ಭರಪೂರ ಸುಖದಲ್ಲಿ ಮುಳುಗಿರುತ್ತ ದುಃಖಿಯ ಹಾಗೆ ಬದುಕುತ್ತಿದ್ದೇನೆ. ಸೃಷ್ಟಿ-ಸ್ಥಿತಿ-ಲಯಗಳಲ್ಲಿ ಪೂರ್ಣಗೊಳ್ಳುವ ಜೀವಿತಾವ, ಜೀವಿತ ಚಕ್ರ, ಸೃಷ್ಟಿಯಾಯಿತು ಎಂದಾಗಲೇ ಸಾಯಲಾರಂಭಿಸಿತು ಅನ್ನಿಸುತ್ತದೆಯಲ್ಲ? ಇದು ಜ್ಞಾನವೇ ಅಜ್ಞಾನವೇ ಮುಗ್ಧತೆಯೇ, ಕಪಟವೇ

ಮೋಸವೇ?

ಮೋಸವೇ?

ಮೋಸವೇ?


ಪತ್ರ ಬರೆಯುತ್ತಾ.... ಬರೆಯುತ್ತ ಕೃತಿಯೊಂದು ತಟ್ಟನೆ ಮೂಡಿ ಬರಬಹುದು. ಇಲ್ಲವಾಗಲೂಬಹುದು ಅಂತರ್ಧಾನವಾಗಲಿರುವ ಮಂಜಿನ ಹನಿಯ ಹಾಗೆ... ಕರಗಿ ಹೋಗುವ ಹಾಗೆ,

ಬರೆಯುತ್ತಿರಿ ಬರೆಯುತ್ತಲಿರಿ.

ಪ್ರೀತಿ ಇರಲಿ

ವ್ಯಾಸ

ಸಹ ಸಂಪಾದಕ, ಮಲ್ಲಿಗೆ ಮಾಸ ಪತ್ರಿಕೆ
೨೮, ಶಿರಸಿ ರಸ್ತೆ ಎದುರು
ಬೆಂಗಳೂರು - ೫೬೦ ೦೧೮
ಮೊಬೈಲ್ : ೯೩೪೨೨೭೯೮೨೫.
ಈಮೈಲ್ : nimmamallige@yahoo.com



ದಿನಚರಿಯ ಕೆಲವು ಪುಟಗಳು

ಖಾಸಗಿ ದಿನಚರಿಯೆಂದರೆ ಅದು ಅಚ್ಚರಿಗಳ ಸುಗ್ಗಿ ಎಂದರೇ ಭಾವಿಸಲಾಗುತ್ತದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಈ ದಿನಚರಿಯು ಅಂತಹುದೇನನ್ನೂ ಹೊರಚೆಲ್ಲುವುದಿಲ್ಲ. ಬದಲಾಗಿ ನಾವು ಮುಂದೆ ಹೆಚ್ ವೈ ಶಾರದಾ ಪ್ರಸಾದ್ ಎಂದು ಅರಿತುಕೊಂಡ ಮತ್ತು ಜನ ಮಾನಸದಲ್ಲಿ ಉಳಿದ ಸಜ್ಜನ ವ್ಯಕ್ತಿಯನ್ನೇ ಈ ದಿನಚರಿ ದೃಢೀಕರಿಸುತ್ತದೆ. ಈ ದಿನಚರಿಯ ಪುಟಗಳಲ್ಲಿ ನಮಗೆ ಗೋಚರಿಸುವುದು ಪರಿಪೂರ್ಣತೆಯನ್ನು ಸಾಧಿಸಬೇಕೆಂಬುದು ಹದಿಹರೆಯದಲ್ಲೇ ಜಾಗೃತವಾದ ಹಂಬಲ ಮತ್ತು ಅದನ್ನು ಸಾಧಿಸಲು ಬೇಕಾದ ಎಲ್ಲ ರೀತಿಯ ತಯಾರಿ. ಈ ದಿನಚರಿಯನ್ನು ಕ್ವಿಟ್ ಇಂಡಿಯಾ ಚಳವಳಿಯ ಐತಿಹಾಸಿಕ ಸಂದರ್ಭದಲ್ಲಿ ಬರೆದಿದ್ದರೂ ಕೂಡ ಇದು ತನಗೆ ಚರಿತ್ರೆಯನ್ನು ಆರೋಪಿಸಿಕೊಳ್ಳುವುದಿಲ್ಲ. ಇದರಲ್ಲಿ ಅವರ ಮುಂದಿನ ಬರವಣಿಗೆ ಮತ್ತು ವ್ಯಕ್ತಿತ್ವದಲ್ಲಿ ಕಾಣುವ ವಿನಯಶೀಲತೆ ಅಡಕವಾಗಿದೆ. ನಮ್ಮ ದೇಶದ ಇತಿಹಾಸದ ಅಸಾಮಾನ್ಯ ಘಟನೆಗಳ ಅತ್ಯಂತ ಹತ್ತಿರದ ಪ್ರತ್ಯಕ್ಷದರ್ಶಿಯಾದರೂ, ಅದನ್ನು ತಮ್ಮ ಆತ್ಮಸಾಕ್ಷಿಯ ಮೂಲಕ ಅಳೆದರೇ ಹೊರತು ತಮ್ಮ ಮಾತುಗಳಿಂದಲ್ಲ.

- ಸಂಪಾದಕರು)

'ಅರಿವಿನ ಆಡುಂಬೊಲ'
ಸಂಪಾದಕರು : ಸುಗತ ಶ್ರೀನಿವಾಸರಾಜು, ಕನ್ನಡಕ್ಕೆ : ರೋಸಿ ಡಿ'ಸೋಜ಼ಾ
ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಎಂಬೆಸಿ ಸೆಂಟರ್, ಬೆಂಗಳೂರು - ೫೬೦ ೦೦೧
ಬೆಲೆ : ರೂ. ೭೫.೦೦ ಪ್ರಕಟಣಾ ವರ್ಷ: ೨೦೧೦

೨೨.೨.೧೯೪೩

ಗಾಂಧೀಜಿಯ ದೇಹಸ್ಥಿತಿ ಬಿಗಡಾಯಿಸುತ್ತಿದೆ. ಇದು ಹೇಗೆ ಕೊನೆಯಾಗುವುದೊ ಕಾಣೆ! ಈ ಬಾರಿಯಂತೂ ಬ್ರಿಟಿಷ್ ಸರಕಾರ ತಾನು ಇಷ್ಟರ ತನಕ ಮಾಡಿದ ಪ್ರಮಾದಗಳಿಗಿಂತಲೂ ದೊಡ್ಡದಾದ ಪ್ರಮಾದ ಮಾಡುತ್ತಿದೆ ಎಂದು ನನಗನ್ನಿಸುತ್ತಿದೆ. ತನ್ನ ಜೀವಮಾನದ ಒಂದು ಮಹಾಪ್ರಮಾದ ಮಾಡದೆ ಒಂದು ಸಾಮ್ರಾಜ್ಯ ಕೊನೆಗೊಳ್ಳುವುದಾದರೂ ಹೇಗೆ? ಆದರೆ ಪವಿತ್ರ, ಪೂಜನೀಯ ಮತ್ತು ಅಪೂರ್ವವಾದ ಗಾಂಧೀಜಿಯ ಜೀವ ನಮ್ಮ ದೇಶದ ಸ್ವಾತಂತ್ರ್ಯ ಮತ್ತು ಬ್ರಿಟಿಷ್ ಸಾಮ್ರಾಜ್ಯದ ಅಳಿವಿಗೆ ನಾವು ತೆರಬೇಕಾದ ಒಂದು ಸಣ್ಣ ಬೆಲೆ ಮಾತ್ರ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯ ರಚನೆಗೆ ಒಂದು ಹತ್ಯಾಕಾಂಡವೇ ನಡೆಯುತ್ತದೆ ಎಂದಾದರೆ ಆ ಹತ್ಯಾಕಾಂಡದಲ್ಲಿ ಬಲಿಯಾಗುವುದು ಒಂದೇ ಜೀವ – ಬಡ, ವಿನಯಶೀಲ, ದುರ್ಬಲ, ಮೊರದಗಲ ಕಿವಿಯ, ಪಿಳಿ ಪಿಳಿ ಕಣ್ಣುಗಳ ಒಂದು ಜೀವ!

ಕಳೆದ ಬಾರಿಯ ಮತ್ತು ಈ ಬಾರಿಯ ನನ್ನ ಜೈಲು ವಾಸದಲ್ಲಿ ಒಂದು ವ್ಯತ್ಯಾಸವಿದೆ. ಕಳೆದ ಬಾರಿ ನಾನು ಹೆಚ್ಚಾಗಿ ಹಳೆಯ ನೆನಪುಗಳಲ್ಲಿ ಕಳೆದುಹೋಗದೆ, ಯಾರನ್ನೂ ಹೆಚ್ಚಾಗಿ ಹಚ್ಚಿಕೊಳ್ಳದೆ, ಯಾರಿಗೂ ಹಪಹಪಿಸದೆ ಇದ್ದರೂ, ಆಗಾಗ್ಗೆ ನನ್ನ ಕಾಲೇಜಿನ ಸ್ನೇಹಿತರನ್ನು ಮತ್ತು ಹೊರಗೆ ಕಳೆದ ಪ್ರಶಾಂತ ದಿನಗಳನ್ನು ನೆನಪು ಮಾಡಿಕೊಳ್ಳುತ್ತಿದ್ದೆ. ನೆನಪು ಮಾಡಿಕೊಳ್ಳುತ್ತಿದ್ದುದು ಹೌದಾದರೂ, ಮತ್ತೆ ಅಂತಹ ದಿನಗಳು ಮರುಕಳಿಸಿ ಬರಬಾರದೇ ಎಂದು ಯಾವತ್ತೂ ಆಶಿಸಿದ್ದಿಲ್ಲ. ಆದರೆ ಈ ಬಾರಿ ಹಾಗಿಲ್ಲ. ನಾನು ಯಾವುದೇ ವ್ಯಕ್ತಿಯನ್ನು ನೆನಪು ಮಾಡಿಕೊಳ್ಳುತ್ತಿಲ್ಲ. ಬದಲಾಗಿ ನಡೆದುಹೋದ ಘಟನೆಗಳ ಬಗ್ಗೆ, ಹೊಸ ಯೋಚನೆಗಳ ಬಗ್ಗೆ ಚಿಂತಿಸುತ್ತಿದ್ದೇನೆ.

ಇವತ್ತು ಮಾವಿನ ಮರದ ಮೇಲೆ ಹತ್ತಿ ಕುಳಿತಿದ್ದೆ. ಆಹಾ! ಇದನ್ನು ನೆನಪಿಸಿಕೊಳ್ಳುವುದೇ ಒಂದು ಸಂತೋಷ! ನಾನು ಈ ಸೆರೆಮನೆ ವಾಸ ಮುಗಿಸಿ ಹೊರಗೆ ಹೋದ ಮೇಲೆ ಈ ತರಹದ ದಿನಗಳು ಮತ್ತೆ ಸಿಗುವುವೆ? ನನ್ನ ಮುಂದಿನ ಜೀವನದಲ್ಲಿ ವಿರಾಮ ಅನ್ನುವುದು ಇದೆಯೇ ಎನ್ನುವ ಬಗ್ಗೆ ನನಗೆ ಸಂಶಯ ಇದೆ.

ಒಂದು ಸುತ್ತು ವಾಲಿಬಾಲ್ ಆಡಿದೆ. ಆಟ ಆಡಿ ಹಲವು ತಿಂಗಳುಗಳಾಗಿತ್ತು.

ತಂದೆ ಏನು ಮಾಡುತ್ತಿರಬಹುದು? ಡೈರೆಕ್ಟರ್ ಕಡೆಯಿಂದ ಅವರ ಮೇಲೆ ಒತ್ತಡ ಬರುತ್ತಿದ್ದರೂ ಆಶ್ಚರ್ಯವಿಲ್ಲ. ಸುಬ್ಬಣ್ಣ ಮತ್ತು ಕೃಷ್ಣಪ್ಪ ಅವರ ಸಾಹಸಗಾಥೆಗಳನ್ನು ಹೇಳುತ್ತಿದ್ದರು. ಸಾಹಸ, ಸಾಹಸ, ಸಾಹಸ. ಸಾಧನೆ ಏನೂ ಇಲ್ಲ! ಅವರ ಕೆಲವೊಂದು ಕಥೆಗಳಂತೂ ತುಂಬಾ ತಮಾಷೆಯಾಗಿದ್ದವು. ಆದರೆ ಇವೆಲ್ಲವರ ಉದ್ದೇಶ ಏನು? ದಿಕ್ಕು ದೆಸೆಯಿಲ್ಲದ ಮಂದಿ. ಇವರ ಚರ್ಯೆಯನ್ನು ಶೌರ್ಯಾಟೋಪ ಎಂದು ನಾನು ಹೇಳಲಾರೆ.

ಹಿಂದೆ ಜೈಲಿನಲ್ಲಿದ್ದಾಗ ಹೊರಗಡೆ ಏನೇ ನಡೆದರೂ ಅವರ ಬಗ್ಗೆ ನನಗೆ ಒಂದು ವಿಧ ನಿರ್ಲಕ್ಷ್ಯವಿತ್ತು. ಅದೇ ಮನಃಸ್ಥಿತಿಗೆ ಮತ್ತೆ ಹಿಂದಿರುಗಿದ್ದೇನೆ.

೩.೩.೧೯೪೩

ಇಪ್ಪತ್ತೊಂದು ದಿನಗಳ ಸತ್ವಪರೀಕ್ಷೆಯ ನಂತರ ಇವತ್ತು ಗಾಂಧೀಜಿ ತಮ್ಮ ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸಿದರು. ನಮ್ಮಲ್ಲಿ ಅನೇಕ ತೀವ್ರಗಾಮಿಗಳು ಉಪವಾಸವನ್ನು ಒಂದು ರಾಜಕೀಯ ಅಸ್ತ್ರವನ್ನಾಗಿ ಬಳಸುವುದನ್ನು ಒಪ್ಪದೇ ಇರಬಹುದು. ಆದರೆ ಹೇಳಿ, ಬೇರೆ ಯಾರಾದರೂ ಏನು ಮಾಡಬಹುದಿತ್ತು? ಅದರಿಂದ ನಡೆದ ತೀಕ್ಷ್ಣ ಪರಿಣಾಮ ನೋಡಿ. ರಾಜಕೀಯ ನೆಲೆಯಲ್ಲಿ ಕೂಡ ಅದು ಬೇರೆ ಬೇರೆ ಗುಂಪುಗಳನ್ನು ಒಟ್ಟಿಗೆ ತಂದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅದು ಒಂದು ಮುಖ್ಯ ಅಪಾದನೆಯನ್ನು ಇಲ್ಲವಾಗಿಸಿದೆ. ವಿಧ್ವಂಸಕ ರಾಜಕಾರಣ ಕಾಂಗ್ರೆಸ್ ಪದ್ಧತಿ ಅಲ್ಲ ಎಂಬುದನ್ನು ಇದು ಸ್ಪಷ್ಟವಾಗಿ ನಿರೂಪಿಸಿದೆ. ಎಷ್ಟೊಂದು ಜನ ಹದಿನಾಲ್ಕು ಅಂಶಗಳ ಕಾರ್ಯಕ್ರಮವನ್ನು ನಂಬಲಿಲ್ಲ! ಆದರೆ ಜೈಲಿನ ಒಳಗೆ ಇರುವುದಕ್ಕಿಂತ ಹೊರಗಡೆ ನಿರಾಶತೆ ಹೆಚ್ಚಿದೆ. ಜೈಲು ಹಕ್ಕಿಗಳಿಗೆ – ಹೆಚ್ಚಿನವರು ಇನ್ನೂ ವಿಧ್ವಂಸಕ ಶಕ್ತಿಯಲ್ಲಿ ನಂಬಿಕೆ ಇಟ್ಟಿರುವವರೇ ಆಗಿದ್ದಾರೆ.

ಉಪವಾಸದ ಆರಂಭದ ದಿನಗಳಲ್ಲಿ ಎಲ್ಲವೂ ಒಂದು ವಿವರಿಸಲಾಗದ ಉದ್ವಿಗ್ನತೆಯಿಂದ ಕೂಡಿತ್ತು. ನನ್ನನ್ನು ಇಲ್ಲಿಗೆ ಕರೆತಂದ ದಿನ, ನಮ್ಮೆಲ್ಲರ ದಿಗಿಲು ಗಾಂಧೀಜಿಯ ಪರಿಸ್ಥಿತಿಯಿಂದಾಗಿ ವಿಪರೀತ ಸ್ಥಿತಿಯನ್ನು ತಲುಪಿತ್ತು. ನಮ್ಮ ಈ ನತದೃಷ್ಟ ದೇಶಕ್ಕೆ ಒದಗಬಹುದಾದ ಎಲ್ಲಾ ಸಂಕಷ್ಟಗಳನ್ನು ನಾವು ಕಲ್ಪಿಸತೊಡಗಿದೆವು. 'ಗಾಂಧೀಜಿಯ ಬದುಕು ನಮ್ಮ ದೇಶದ ಸ್ವಾತಂತ್ರ್ಯಕ್ಕೆ ನಾವು ತೆರಬೇಕಾದ ಸಣ್ಣ ಬೆಲೆ' ಎಂಬ ದಾರ್ಶನಿಕ ಸಮಾಧಾನ ಕೂಡ ನಮ್ಮಲ್ಲಿ ಕೆಲವರಿಗಿತ್ತು. ಅದು ಹೇಗೋ ಈಗ ಆ ಆಪತ್ತು ಕಳೆದುಹೋಯಿತು. ಆದರೆ ನಾವು ಹಿಂದೆ ಎಲ್ಲಿ ಇದ್ದೆವೋ ಅಲ್ಲೇ ಬಂದು ನಿಂತಿದ್ದೇವೆ. ಆಗಿದ್ದು ಏನೂ ಇಲ್ಲ. ಅಬ್ಬಾ! ಉಪವಾಸದ ಮೊದಲ ಎರಡು ವಾರದಲ್ಲಿ ನಾವು ಅನುಭವಿಸಿದ ಅನಿಶ್ಚಿತತೆ! ಇದು ಗಾಂಧಿತತ್ವದ ವಿಶಿಷ್ಟ ಉತ್ಪನ್ನ ಕೂಡ ಹೌದು. ಒಂದು ವೇಳೆ ಗಾಂಧಿ ಸತ್ತಿದ್ದರೆ ಏನಾಗಬಹುದೆಂದು ಯಾರಿಗೆ ಗೊತ್ತಿತ್ತು? ಏನಾಗಬಹುದೆಂಬುದನ್ನು ಯೋಚಿಸಿಯೇ ನಾವೆಲ್ಲ ನಾಕಷ್ಟು ಭಯಪಟ್ಟುಕೊಂಡಿದ್ದೆವು. ಇಂತಹ ತುರ್ತಿನ ಸಂದರ್ಭಗಳಲ್ಲಿ ಏನು ಮಾಡಬೇಕೆಂಬ ಬಗ್ಗೆ ಕೂಡ ಸ್ಪಷ್ಟತೆ ಇರಲಿಲ್ಲ.

ಪ್ರಾಯಶಃ ಗಾಂಧೀಜಿ ಇನ್ನೊಮ್ಮೆ ಇಂತಹುದೇ ಇನ್ನೊಂದು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಕೊಳ್ಳಬಹುದು. ಆದರೆ ಅದರ ಉಪಯೋಗ ಏನು? ಒಂದಾ ಅವರು ಸತ್ತು ನಮಗೆ ಸ್ವರಾಜ್ಯ ಸಿಗುವಂತಾಗಬೇಕು(ಹಾಗೆ ನೋಡಿದರೆ ಭಾರತ ಮತ್ತು ಸ್ವಾತಂತ್ರ್ಯದ ನಡುವೆ ಇರುವುದು ಗಾಂಧೀಜಿಯ ಜೀವವೇ?) ಅಥವಾ ಸಂಪೂರ್ಣವಾಗಿ ಸಂಧಾನದ ಅಥವಾ ಮಧ್ಯವರ್ತಿ ಮಾದರಿಯ ವಿಧಾನವನ್ನು ಅಳವಡಿಸಿಕೊಳ್ಳಬೇಕು. ಒಂದು ಸಮಾಧಾನಕರ ಸ್ಥಿತಿ ತಲುಪುವವರೆಗೂ ನಾವು ಅವರಿಗೆ ಅದನ್ನು ಮಾಡಲು ಬಿಡುವುದಿಲ್ಲ. ಇನ್ನೊಂದು ಗಾಂಧಿ-ಇರ್ವಿನ್ ಒಪ್ಪಂದ ನಡೆಯುವುದಾದರೆ ಅದನ್ನು ತಡೆಯಲೇಬೇಕು, ಪ್ರತಿಭಟಿಸಬೇಕು.

ಟಿ ಎಸ್ ಸುಬ್ಬಣ್ಣ ನಿರ್ದೇಶನದಲ್ಲಿ ಧ್ವಜವಂದನೆ ನಡೆಯಿತು. ಇದಂತೂ ಒಂದು ಅಣಕವೇ. ಗಾಂಧೀಜಿಯ ಉಪವಾಸದ ಬಗ್ಗೆಯಾಗಲಿ ಅಥವಾ ಅದರ ಸಮಾಪ್ತಿಯ ಬಗ್ಗೆಯಾಗಲಿ ಯಾರೂ ವಿವರಿಸಲೇ ಇಲ್ಲ. ಅಸಮರ್ಪಕ ನಿರ್ದೇಶನ.

★

೨.೪.೧೯೪೩

ಅಜ್ಜರನಿಂದ ಪತ್ರ ಬಂತು; ಅದೂ ನಾನು ಬಟ್ಟೆ ಒಗೆಯುತ್ತಿರುವಾಗ. ಸುಡುವ ಸೂರ್ಯನ ಬಿಸಿಲಿಗೆ ನನ್ನ ತಲೆ ಮತ್ತು ಕತ್ತು ಚುರುಗುಡುತ್ತಿತ್ತು. ತುಂಬಾ ಹೊತ್ತು ನೀರಲ್ಲಿ ಇದ್ದುದರಿಂದ ಕಾಲುಗಳು

ತಣ್ಣಗೆ ಕೊರೆಯುತ್ತಿದ್ದವು. ಪ್ರಕೃತಿಯು ಈ ಸಹಜ ವಾತಾವರಣದಲ್ಲಿ ಅಜ಼ರನ ಪತ್ರ ಉಡುಗೊರೆಯಂತೆ ಬಂದು ಸಂತೋಷ ತಂದಿತು. 'ನನಗೆ ಏನು ಬೇಕು' ಎಂಬುದನ್ನು ನಾನು ಅಜ಼ರನಿಗೆ ಹೇಳದೆ ಹೋದರೆ ನಾನು ಇಸ್ಲಾಂ ಧರ್ಮಪಾಲನೆಯಲ್ಲಿ ಎಡವಿದ ಹಾಗಾಗುತ್ತದೆ ಎಂದು ಅವನು ಬರೆದಿದ್ದ. ಸೂರಿ ಮತ್ತು ಅವನು ಒಂಬತ್ತನೇ ತಾರೀಖಿಗೆ ಬರುವ ಬಗ್ಗೆ ಕೂಡ ಉಲ್ಲೇಖ ಇತ್ತು. ಪತ್ರದ ಜೊತೆಗೆ ಅಜ಼ರ್ ನನಗೆ ಪುಸ್ತಕಗಳ ಒಂದು ಪಾರ್ಸೆಲ್ ಕೂಡ ಕಳುಹಿಸಿದ್ದಾನೆ; Modern Review ಪತ್ರಿಕೆಯ ಕಟ್ಟು ಹಾಕಿದ ೧೯೩೧ರಲ್ಲಿ ಪ್ರಕಟವಾದ ಹಳೆಯ ಮೂರು ಸಂಚಿಕೆಗಳು; ಕ್ವಾಜಾ ಕಮಾಲುದ್ದೀನ್ ಅವರ The Ideal Prophet ಮತ್ತು Sound ಪತ್ರಿಕೆಯ ಒಂದು ಸಂಚಿಕೆ. ಸ್ನೇಹ ಎನ್ನುವುದು ಯಾವುದೇ ದೂರವನ್ನು ಇಲ್ಲವಾಗಿಸುತ್ತದೆ ಎಂಬುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕಿಲ್ಲ. ಹೌದು, ಮೈಸೂರಿನಲ್ಲಿ ತುಂಬಾ ಮಂದಿ ಸ್ನೇಹಿತರು ಇದ್ದಾರೆ ಎಂದು ನಾನು ನಂಬಿದ್ದೆ!

ಸೀತಾರಾಮನ ಮೊಡವೆ ವಿಪರೀತವಾಗಿ ಊದಿಕೊಂಡು ಅವನಿಗೆ ಸಹಿಸಲಿಕ್ಕೆ ಆಗದಷ್ಟು ನೋವು ಕೊಡುತ್ತಿದೆ. ಕೆ.ಆರ್. ಆಸ್ಪತ್ರೆಯ RMO ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲು ಅವನಿಗೆ ಸಲಹೆ ಮಾಡಿದ್ದಾರೆ. ಶಸ್ತ್ರಚಿಕಿತ್ಸೆ ಬೇಕಾಗಿಲ್ಲ ಎಂಬುದು ನಮ್ಮ ಅಭಿಪ್ರಾಯ.

ಈ ಮೊಡವೆಯಿಂದಾಗಿ ನಮ್ಮ ಇವತ್ತಿನ ವಾಲಿಬಾಲ್ ಆಟ ಕೆಟ್ಟುಹೋಯಿತು. ಸೀತಾರಾಮನಿಗೆ ಸಂಯಮ ಕಡಿಮೆ. ಇವತ್ತು ಆಟ ಆಡುವುದು ಬೇಡ ಎಂದರೆ ಅವನು ಕೇಳಲಿಲ್ಲ. ಅವನು ಆಟಕ್ಕೆ ಇಳಿದರೆ ನಾನು ಭಾಗವಹಿಸುವುದಿಲ್ಲ ಎಂದು ನಾನು ಹೇಳಿದೆ. ಪರಿಣಾಮ: ಇಬ್ಬರೂ ಕೈ ಕೈ ಹಿಡಿದುಕೊಂಡು ಹಿಂದೆ ಬಂದೆವು.

ಕೊನೆಗೂ ಖಾದಿ ಸರಂಜಾಮು ಕಾರ್ಯಾಲಯದವರು ಪಾರ್ಸೆಲ್ ಕಳುಹಿಸಿಕೊಟ್ಟಿದ್ದಾರೆ. ನಮ್ಮ ದೇಶ ವ್ಯವಹಾರ ಎಂದರೆ ಏನು ಎಂಬುದನ್ನು ಯಾವಾಗ ಕಲಿಯುತ್ತದೆ? ವ್ಯವಹಾರ ಜ್ಞಾನದ ಕೊರತೆ ಮತ್ತು ಅಪ್ರಾಮಾಣಿಕ ನಡತೆಗಳಿಂದಾಗಿಯೇ ನಮ್ಮ ದೇಶ ಮತ್ತು ಇಲ್ಲಿಯ ವ್ಯವಹಾರೋದ್ಯಮ ಬೇರೆ ದೇಶಗಳಿಗಿಂತ ಹಿಂದುಳಿದಿರುವುದು.

ಬೋರೆ ಗೌಡ ಶೇಂಗಾ ಮತ್ತು ಬಾಳೆ ಹಣ್ಣು ತಂದಿದ್ದ. ಬಿಡುಗಡೆಯ ಹೊತ್ತಿಗೆ ಮಾಡಿದ ಆಶ್ವಾಸನೆಗಳನ್ನು ಉಳಿಸಿಕೊಂಡಿರುವ ಕೆಲವೇ ಕೆಲವರಲ್ಲಿ ಇವನೊಬ್ಬ

ಇವತ್ತು ಜೈಲರ್ ತನ್ನ ಬಿಗಿಪಟ್ಟು ಸಡಿಲಿಸಿ, ರಂಗೇ ಗೌಡ ಎಷ್ಟು ಬಾಟಾ ಕೇಳಿದ್ದನೋ ಅಷ್ಟನ್ನೂ ಕೊಟ್ಟ. ಇದನ್ನು ಅವನು ನಿನ್ನೆಯೇ ಮಾಡಬಹುದಿತ್ತು. ಭಾರತದ ಅಧಿಕಾರಶಾಹಿಯ ಬುದ್ಧಿವಂತಿಕೆ ಮತ್ತು ದಕ್ಷತೆ ಎಷ್ಟಿದೆಯೆಂದರೆ ಪರಕೀಯ ಶಕ್ತಿಗಳು ತಮ್ಮ ನಿರ್ದಯ ಬಲ ಮತ್ತು ದುರಾಗಹದಿಂದಷ್ಟೆ ಅಧಿಕಾರ ಉಳಿಸಿಕೊಳ್ಳಲು ಸಾಧ್ಯ ಆಗಿದೆ ಎಂಬುದು ಸ್ಪಷ್ಟ.

ಅಂತೂ ಇವತ್ತು ರಂಗೇಗೌಡನ ಬಿಡುಗಡೆಯಾಯಿತು. ಅವನ ಸಹೋದರ ಸಂಬಂಧಿ ಇವತ್ತು ಪ್ರಸವದಲ್ಲಿ ತೀರಿಕೊಂಡಳು ಎಂಬ ಸುದ್ದಿ ಬಂತು. ಅದು ಗೊತ್ತಾಗುವ ಮೊದಲೇ ಅವನು ಸಾಕಷ್ಟು ಒಂಟಿತನ ಮತ್ತು ಖಿನ್ನತೆಯಲ್ಲಿದ್ದ. ಪ್ರಾಯಶಃ ತನಗೆ ಬಿಡುಗಡೆ ಸಿಗುವುದೇ ಇಲ್ಲವೇನೋ ಎಂದು ಅವನು ಅಂದುಕೊಂಡಿರಬಹುದು ಅಥವಾ ಅವನು ಹಾಕಿಕೊಂಡಿದ್ದ ಸೊಗಸಾದ ಯೋಜನೆಗಳು ಕೆಟ್ಟುಹೋಗಿದ್ದರ ಬಗ್ಗೆ ತಲೆಕೆಡಿಸಿಕೊಂಡಿರಬೇಕು... ಇತರರ ಸಂಪರ್ಕ ಇಲ್ಲದಂತೆ ಕೂಡಿ ಹಾಕಿದ್ದ ಕೈದಿಗಳ ತಂಡದಿಂದ ಐದು ಮಂದಿಯನ್ನು ಇವತ್ತು ಬಿಡುಗಡೆಗೊಳಿಸಲಾಯಿತು – ಸಿಂಹದ ಮುಖವನ್ನು ನೆನಪಿಗೆ ತರುವಂತಹ ಹಿರಿಯರಾದ ಯಜಮಾನ್ ಮತ್ತು ಕಾಫಿ ಪ್ರಿಯ ಗುಳ್ಳನರಿ ಸಾಂಬಯ್ಯ.

ಬಂಗಾಲದಲ್ಲಿ ಗವರ್ನರ್ ಅವರ ಕಾರ್ಯಾಚರಣೆಯ ಬಗ್ಗೆ ನಮಗೆ ವಿವರ ಸಿಕ್ಕಿತು. ಶಾಸಕಾಂಗ

ಸಭೆಗಳನ್ನು ವಿಸರ್ಜಿಸಿ, ಗವರ್ನರ್ ಎಲ್ಲಾ ಅಧಿಕಾರವನ್ನು ತಮ್ಮ ಹತೋಟಿಗೆ ತೆಗೆದುಕೊಂಡಿದ್ದಾರೆ. ನನ್ನ ಪ್ರಕಾರ ಇದು ಅಮೇರಿಯ ಭಾಷಣದ ಪ್ರತಿಫಲ. ಫಜ್ಲುಲ್ ಹಕ್[1]ಗೆ ಬಂಡಾಯ ಪಕ್ಷಗಳ ಬಗ್ಗೆ ಹೆಚ್ಚಿನ ಒಲವಿದೆ ಅನ್ನುವುದು ಅವರ ಅಪಾದನೆ. ಹಕ್ ಅವರು ಎಸ್ ಪಿ ಮುಖರ್ಜಿ[2]ಯ ಹೇಳಿಕೆಯನ್ನು ಖಂಡಿಸಬೇಕು ಎಂಬುದು ಕೂಡ ಅವರ ಅಪೇಕ್ಷೆಯಾಗಿತ್ತು.

ಎಲ್ಲರನ್ನು ಬಡಿದೆಬ್ಬಿಸುವ ಅಮೇರಿಯ ಭಾಷಣ ಮತ್ತು ಎಂದೂ ಇಲ್ಲದಂತೆ ಈ ಬಾರಿ ನಾಯಕರೊಂದಿಗೆ ಚರ್ಚೆ ನಡೆಯಲಿದೆ ಎಂಬ ಸೂಚನೆಯಿಂದಾಗಿ ಸಿ ಆರ್[3] ನಿಯೋಗವು ವೈಸ್‌ರಾಯ್ ಜೊತೆ ಆಯೋಜಿಸಿದ್ದ ಭೇಟಿಯನ್ನು ರದ್ದುಗೊಳಿಸಿದೆ. ಸಿ ಆರ್ ಅವರು ಮನಮುಟ್ಟುವಂತಹ ಒಂದು ಹೇಳಿಕೆಯಲ್ಲಿ ತಮ್ಮ ಎಲ್ಲಾ ನಿರಾಸೆಯನ್ನು ವ್ಯಕ್ತಪಡಿಸಿದ್ದಾರೆ. ರಾಜಿ ಸಂಧಾನಕ್ಕೆ ಭಾರತ ದೇಶ ಚಾಚಿದ ಕೈಯನ್ನು ಬ್ರಿಟಿಷ್ ಸರ್ಕಾರ ನಿರಾಕರಿಸುವ ಮೂಲಕ ಸಂವಿಧಾನದ ಎಲ್ಲಾ ಸಾಧ್ಯತೆಗಳನ್ನು ತಿರಸ್ಕರಿಸಿದೆ ಎಂದು ಅವರು ಹೇಳಿದ್ದಾರೆ.

ಇವತ್ತಿನ ಇನ್ನೊಂದು ಸುದ್ದಿಯೆಂದರೆ ಸಿ ಆರ್ ಅವರ ಜಿನ್ನಾ ಭೇಟಿ. ಈ ಭೇಟಿಗಳಿಂದ ಏನಾದರೂ ಸಾಧ್ಯ ಎಂದು ನಂಬುವುದನ್ನು ನಾವು ಯುವಕರು ಬಿಟ್ಟುಬಿಟ್ಟಿದ್ದೇವೆ. ಹಾಗಾದರೆ ಭಾರತಕ್ಕೆ ಯಾವುದೇ ಭರವಸೆಯೇ ಇಲ್ಲವೇ? ಪರಿಸ್ಥಿತಿ ಸುಧಾರಣೆಯಾಗಲು ನಾವು ಯುದ್ಧ ಮುಗಿಯುವವರೆಗೂ ಕಾಯಬೇಕೆ? ಅಲ್ಲಿಯ ತನಕ ನಾವೆಲ್ಲರೂ ಜೈಲಿನಲ್ಲಿಯೇ ಇರಬೇಕೇ?

ಪಂಚಮ ದಳದ ಧಾಟಿಯಲ್ಲಿ ಅಥವಾ ತೀವ್ರ ಹತಾಶೆಯ ಭಾವದಲ್ಲಿ, ಜಪಾನಿಯರ ಆಕ್ರಮಣವೊಂದೇ ಭಾರತಕ್ಕೆ ವಿಮೋಚನೆ ದೊರಕಿಸಿಕೊಡಬಲ್ಲುದು ಎಂದು ಹೇಳುವುದು ನೀಚತನದ ಮತ್ತು ಹೇಡಿತನದ ಲಕ್ಷಣ. ಅಂತರರಾಷ್ಟ್ರೀಯ ಮಧ್ಯವರ್ತಿಕೆ ಸಾಧ್ಯವಾಗದು ಮತ್ತು ಇದು ಸಾಧ್ಯವಾಗದೆ ಇರುವಂತಹ ಒಂದು ಅವಾಸ್ತವಿಕವಾದ ಮರೀಚಿಕೆ. ಸಾಮೂಹಿಕ ಹೋರಾಟ ಎನ್ನುವುದು ಇನ್ನೂ ಇದೆ ಅಥವಾ ಯಾವುದೇ ಸಮಯದಲ್ಲಾದರೂ ಆರಂಭವಾಗಬಹುದು ಎಂದು ನಂಬುದವುದು ಕೂಡ ಮೂರ್ಖತನ. ಇದು ವಾಸ್ತವ ಕೂಡ ಅಲ್ಲ. ಈ ಎಲ್ಲಾ ದಬ್ಬಾಳಿಕೆ ಮತ್ತು ಗಾಢವಾಗಿ ಆವರಿಸಿರುವ ಹತಾಶಭಾವದ ವಾತಾವರಣದಲ್ಲಿ ಯಾವುದೇ ರೀತಿಯಾಗಿ ಚಳುವಳಿಯ ಪುನರುಜ್ಜೀವನ ಕೂಡ ಸಾಧ್ಯವಿಲ್ಲ. ಬಹುಶಃ ಇಲ್ಲಿ ಎರಡು ಪರಿಹಾರಗಳಿವೆ: ಸರಕಾರದಿಂದ ಪರಿಹರಿಸಲಾಗದ ಆಹಾರ ಸಮಸ್ಯೆ— ಅದು ನಮಗೊಂದು ಮಾರ್ಗ; ಇನ್ನೊಂದು, ಎಲ್ಲಾ ಪ್ರಮುಖ ಪಕ್ಷಗಳು ಒಟ್ಟಾಗುವುದು. ಮೊದಲ ಬಾರಿಗೆ ಕಮ್ಯುನಿಸ್ಟ್ ಪಕ್ಷ ಒಳ್ಳೆಯ ಕೆಲಸ ಮಾಡುತ್ತಿದೆ; ಇದನ್ನೇ ಅವರು ಮುಂದುವರೆಸಿದಲ್ಲಿ ಮುಂದೊಮ್ಮೆ ಸರಕಾರಿ ವ್ಯವಸ್ಥೆಯ ಮೇಲಿನ ನಮ್ಮ ಅವಲಂಬನೆ ಕಡಿಮೆಯಾಗಬಹುದು. ಆದರೆ ಅದು ಏಕೋ ಈ ಪಕ್ಷದ ಕಾರ್ಯಕ್ರಮಗಳು ತಮ್ಮ ಅಸ್ಪಷ್ಟತೆ ಮತ್ತು ಅನಿರ್ದಿಷ್ಟತೆಯ ಕಾರಣದಿಂದಾಗಿ ತಮ್ಮ ಗುರಿಮುಟ್ಟುವಲ್ಲಿ ವಿಫಲವಾಗುತ್ತಿವೆ. ಜನರು ಕೂಡ ಈ ಕಾರ್ಯಕಮದಲ್ಲಿ ಭಾಗಿಯಾಗಲು ಹಿಂಜರಿಯುತ್ತಿರುವುದಕ್ಕೆ ಅನೇಕ ಕಾರಣಗಳಿವೆ: ನಮ್ಮಲ್ಲಿ ಪರಂಪರಾನುಗತವಾಗಿ ಬಂದಿರುವ ಜಡತೆ; ಯುದ್ಧದಲ್ಲಿ ಭಾಗವಹಿಸಲು

---

೧. ಫಜಲ್ ಹಕ್ : ಅಬ್ದುಲ್ ಕಾಸಿಮ್ ಫಜ್ಲುಲ್ ಹಕ್. ಬಂಗಾಲದ ರಾಷ್ಟ್ರನಾಯಕರಾಗಿದ್ದರು. ೧೯೩೭ ರಿಂದ ೧೯೪೩ರ ಅವಧಿಯಲ್ಲಿ ಅವಿಭಜಿತ ಬಂಗಾಲದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಬಂಗಾಲದ ವಿಭಜನೆಯ ತರುವಾಯ ಪೂರ್ವ ಪಾಕಿಸ್ತಾನದ ಗೃಹಮಂತ್ರಿಯಾಗಿದ್ದರು. ಗವರ್ನರ್ ಆಗಿಯೂ ಸೇವೆ ಸಲ್ಲಿಸಿದ್ದರು.

೨. ಎಸ್ ಪಿ ಮುಖರ್ಜಿ : ಬಂಗಾಲದ ರಾಷ್ಟ್ರನಾಯಕ ಶ್ಯಾಮಪ್ರಸಾದ್ ಮುಖರ್ಜಿ. ಇವರು ಭಾರತೀಯ ಜನ ಸಂಘದ ಸಂಸ್ಥಾಪಕರು ಕೂಡ.

೩. ಸಿ ಆರ್ : ಸಿ. ರಾಜಗೋಪಾಲಾಚಾರಿ. ಭಾರತದ ಕೊನೆಯ ಗವರ್ನರ್ ಜನರಲ್. ಮದ್ರಾಸ್ ರಾಜ್ಯದ ಮೊದಲ ಮುಖ್ಯಮಂತ್ರಿ. ಇವರು ಕ್ವಿಟ್ ಇಂಡಿಯಾ ಚಳವಳಿಯನ್ನು ವಿರೋಧಿಸಿದ್ದರು.

ಹುಟ್ಟಿಕೊಂಡಿರುವ ವಿರೋಧ; ಗಾಂಧಿಯ ಶಾಂತಿವಾದ ಮತ್ತು ಬ್ರಿಟಿಷರ ಬಗ್ಗೆ ಬೆಳೆದಿರುವ ಬೇಸರ. ಇದಕ್ಕೆಲ್ಲಾ ಕಲಶವಿಟ್ಟಂತೆ ಕಮ್ಯುನಿಸ್ಟರ ಬಗ್ಗೆ ಆಳವಾಗಿ ಬೇರೂರಿರುವ ಸಂಶಯ ಮತ್ತು ಪೂರ್ವಗ್ರಹ.

ಉಳಿದಿರುವ ಇನ್ನೊಂದು ಮಾರ್ಗದ ಬಗ್ಗೆ ಕೂಡ ಮುಂದಿನ ಕೆಲವು ತಿಂಗಳುಗಳಲ್ಲಿ ಹೆಚ್ಚೇನೂ ನಿರೀಕ್ಷಿಸಲಾಗದು. ಎಲ್ಲಾ ಪಕ್ಷದ ನಾಯಕರುಗಳು ತಮ್ಮ ತಮ್ಮ ಸ್ವಪ್ರತಿಷ್ಠೆಯಲ್ಲಿ ಮುಳುಗಿಹೋಗಿದ್ದಾರೆ; ನಮ್ಮಂತಹ ಬಡಜೀವಿಗಳ ಪಾಡು ಕೇಳುವವರಿಲ್ಲ. ಆದರೂ ಕೊನೆಗೂ ಪಿಸಿ, ಸಿ ಆರ್ ಮತ್ತು ಮುಖರ್ಜಿಯವರ ಪ್ರಯತ್ನದ ಫಲವಾಗಿ ಯಾವುದೋ ಒಂದು ರೀತಿಯ ಪರಿಹಾರ ಸಿಗಬಹುದು ಎಂದು ಭಾವಿಸುತ್ತೇನೆ.

★

೧೫.೪.೧೯೪೩

ಹತ್ತೊಂಬತ್ತು ವರ್ಷಗಳ ಹಿಂದೆ ಏಪ್ರಿಲ್ ತಿಂಗಳ ಮಧ್ಯದ ಈ ಒಂದು ದಿನ, ಈ ಸಮೃದ್ಧ ಭಾರತ ದೇಶದಲ್ಲಿ ಒಂದು ಮಗುವಿನ ಜನನವಾಯಿತು. ಭಾರತ ಸಿಕ್ಕಿಹಾಕಿಕೊಂಡಿರುವ ಎಡರುತೊಡರುಗಳಿಗೆ ಇನ್ನೊಂದು ನತದೃಷ್ಟ ತೊತ್ತಿನ ಕೂಸು ಇನ್ನೊಂದು ಹತ್ತು ಪೌಂಡನ್ನು ಸೇರಿಸಿತು.

ಇವತ್ತು ನನ್ನ ಇಪ್ಪತ್ತನೆಯ ಹುಟ್ಟಿದ ದಿನ. ನನ್ನ ಸ್ನೇಹಿತರಲ್ಲೊಬ್ಬರು, ಯಾರು ಅಂತ ನೆನಪಿಗೆ ಬರುತ್ತಿಲ್ಲ, ತಮ್ಮ ಹುಟ್ಟಿದ ಹಬ್ಬದ ದಿನವೆಂದು ಸಂಪೂರ್ಣ ಉಪವಾಸ ಮಾಡುತ್ತಿದ್ದರಂತೆ; ಈ ನೀರಸ, ಅರ್ಥಶೂನ್ಯ ಬದುಕೆಂಬ ನಾಟಕದಲ್ಲಿ ಪಾತ್ರಧಾರಿಯಾಗಿ ಬಂದ ಆ ದುಃಖಕರ ದಿನವನ್ನು ಆಚರಿಸುವ ಸಲುವಾಗಿ.

ಹತ್ತೊಂಬತ್ತು ವರುಷಗಳು ಉರುಳಿ ಇಪ್ಪತ್ತಕ್ಕೆ ಕಾಲಿಟ್ಟೆ. ಈ ವಯಸ್ಸಿಗೆ ಬರುವಷ್ಟರಲ್ಲಿ ಎಷ್ಟೋ ಮಂದಿ ಮಾನವಕುಲಕ್ಕೆ ಅಗಾಧವಾದ ಸೇವೆ ಸಲ್ಲಿಸಿರುತ್ತಾರೆ. ಆದರೆ ನಾನಿಲ್ಲಿ ಬೆಳೆದು ನಿಂತ ಒಂದು ಎಳೆ ಮಗು. ಅಷ್ಟೇ ಅಲ್ಲ, ಎಳೆ ಮಗು ಎಂದು ಕರೆಯಿಸಿಕೊಳ್ಳುವಷ್ಟು ನಿಷ್ಕಲ್ಮಷತೆಯಾಗಲಿ, ಮುಗ್ಧತೆಯಾಗಲಿ ನನ್ನಲ್ಲಿ ಉಳಿದಿಲ್ಲ. ನನ್ನ ಈ ಹತ್ತೊಂಬತ್ತು ವರುಷಗಳ ಬಗ್ಗೆ ಕಿಂಚಿತ್ತೂ ಹೆಮ್ಮೆಯಿಂದ ನೋಡಲು ಕೂಡ ನನಗೆ ಸಾಧ್ಯವಾಗುತ್ತಿಲ್ಲ; ಏಕೆಂದರೆ ಅದನ್ನು ನಾನು ಸಮರ್ಥಿಸಿಕೊಳ್ಳುವುದಾದರೂ ಹೇಗೆ? ನಾನು ಸಾಧಿಸಿದ್ದು ಏನೂ ಇಲ್ಲ. ಏನು ಅಂದ್ರೆ ಏನೂ ಇಲ್ಲ. ಬೇರೆ ದೇಶಗಳಲ್ಲಿ ನನ್ನ ವಯಸ್ಸಿನ ಹುಡುಗರಿಗೆ ಇಷ್ಟರಲ್ಲೇ ಅವರ ಹೆಗಲ ಮೇಲಿನ ಜವಾಬ್ದಾರಿಗಳ ಅರಿವು ಬಂದಿರುತ್ತದೆ. ಆದರೆ ನಮ್ಮ ದೇಶದಲ್ಲಿ ಈ ವಯಸ್ಸಿಗೂ ಗೊತ್ತುಗುರಿ ಇಲ್ಲದೆ, ತಂದೆ ಕಷ್ಟಪಟ್ಟು ದುಡಿದು ಮಾಡಿಟ್ಟ ಆಸ್ತಿಯನ್ನು ಪೋಲು ಮಾಡುತ್ತಾ ದಿನ ಕಳೆಯುತ್ತಾರೆ. ನಾನು ಅಂಥವರಲ್ಲೊಬ್ಬ, ಆದರೆ ನನಗೆ ಈ ತರಹದ ಜೀವನದ ಬಗ್ಗೆ ತಿರಸ್ಕಾರವಿದೆ. ಈ ಜಡತ್ವ ಮತ್ತು ನಿಃಸತ್ವದ ಕೊಳಕು ಗುಂಡಿಯಿಂದ ಮೇಲೆದ್ದು ಬರಲು ನಿರಂತರವಾಗಿ ಶ್ರಮಿಸುತ್ತಿದ್ದೇನೆ.

ಕಳೆದ ವರ್ಷ ನನ್ನ ಹುಟ್ಟಿದ ಹಬ್ಬದ ದಿನ ನಾನು ಯೂನಿವರ್ಸಿಟಿಯಲ್ಲಿದ್ದೆ. ಆ ರಾತ್ರಿ ಬಹುಹೊತ್ತಿನವರೆಗೆ ಎಚ್ಚರ ಇದ್ದವನು. ಸೋಮಯಾಜಿ[1]ಯ ಜೊತೆ ಕುಳಿತು ಮಾತನಾಡುತ್ತಿದ್ದೆ; ಈ ಜೀವನ ಎಂಬ ಹದಿನೆಂಟು ಒಂಟೆಗಳ ಜಟಕಾ ಬಂಡಿ ಹೇಗೆ ತನ್ನ ಮೇಲೆ ಎಲ್ಲಾ ರೀತಿಯ ನೆನಪುಗಳನ್ನು, ರಾಗದ್ವೇಷಗಳನ್ನು ಭವಬಂಧನಗಳನ್ನು, ಎಲ್ಲಾ ರೀತಿಯ ಬಾಲಿಶತನಗಳನ್ನು, ಒಣ ಡೌಲುಗಳನ್ನು, ನಿಷ್ಪ್ರಯೋಜಕತೆಗಳನ್ನು

---

೧. ಸೋಮಯಾಜಿ: ಹೆಚ್ಚೆಸ್ಕೆ ಅವರ ಸಹಪಾಠಿ. ಮುಂದಕ್ಕೆ ರಾಯಿಸ್ಟ್ ಆದರು. (ಎಂ ಎನ್ ರಾಯ್ ಅವರ ರ್ಯಾಡಿಕಲ್ ಹ್ಯೂಮೇನಿಸಂ ಅನುಯಾಯಿ)

ಹೇರಿಕೊಂಡು ತೆವಳುತ್ತಾ ಸಾಗುತ್ತಿದೆ ಎಂದು ಹೇಳುತ್ತಾ ಕುಳಿತಿದ್ದೆ. ಕೆಲವೊಮ್ಮೆ ನೋಡಿದರೆ ಈ ಒಂದು ವರ್ಷ ನನ್ನ ಜೀವನದ ಅತ್ಯಂತ ಮಹತ್ವದ ವರ್ಷವೇನೋ ಅನ್ನಿಸುತ್ತದೆ. ಇದಕ್ಕಿಂತ ಮೊದಲು ನಾನು ಕಳೆದ ಅಷ್ಟೂ ವರ್ಷಗಳು, ಕಳೆದ ವರ್ಷವಷ್ಟೆ ಗಂಭೀರವಾಗಿ ಆರಂಭವಾದ ನನ್ನ ಜೀವನ ನಾಟಕಕ್ಕೆ ಬರೆದ ಪೀಠಿಕೆಯೇನೋ ಅನ್ನಿಸುತ್ತದೆ. ಪೀಠಿಕೆ ಎಂಬುದು ನಾಟಕದ ಮುಖ್ಯ ಭಾಗ ಏನೂ ಅಲ್ಲವಲ್ಲ.

ನನ್ನ ದೃಷ್ಟಿಕೋನಗಳಲ್ಲಿ ಆಗಿರುವ ಬದಲಾವಣೆ, ನನ್ನ ಸಂಬಂಧಗಳಲ್ಲಿ ನಾನು ಕಂಡುಕೊಂಡಿರುವ ವ್ಯತ್ಯಾಸ ನನ್ನಲ್ಲಿ ಭೀತಿಯನ್ನು ಹುಟ್ಟಿಸುತ್ತದೆ. ನಾನು ಮಹಾಜ್ಞಾನಿ ಏನೂ ಅಲ್ಲ, ನನ್ನ ತಲೆ ಪೂರ್ತಿ ಗೋಜಲಾಗಿದೆ. ನನ್ನ ಬೌದ್ಧಿಕ ಮತ್ತು ಭಾವನಾತ್ಮಕ ತಯಾರಿಗಳು, ನನ್ನ ವಿವೇಚನಾಶೀಲತೆ ಮತ್ತು ತಾರ್ಕಿಕತೆ, ಬದುಕನ್ನು ನಾನು ನೋಡುವ ಬಗೆ ಎಲ್ಲವೂ ಎಷ್ಟೊಂದು ದೈನ್ಯಸ್ಥಿತಿಯಲ್ಲಿದೆ ಎಂದರೆ ನನಗೆ ನನ್ನ ಇತಿಮಿತಿಗಳೆಲ್ಲವೂ ಸ್ಪಷ್ಟವಾಗಿ ಅರ್ಥವಾಗುತ್ತವೆ. ನನ್ನ ಈವರೆಗಿನ ಎಲ್ಲ ಅನುಭವಗಳ ಸಾರತತ್ವವನ್ನು ಅಡಗಿಸಿಕೊಂಡಂತೆ, ಈ ವರ್ಷ ನಾನು ಕಂಡುಕೊಂಡ ಒಂದು ದೊಡ್ಡ ಸತ್ಯ ಎಂದರೆ 'ಮನುಷ್ಯನ ನಾಲಗೆ ಅವನ ಬುದ್ಧಿಯ ಅಥವಾ ಹೃದಯದ ಅಂಕೆಯಲ್ಲಿ ಇರುವುದಿಲ್ಲ.' ಹಾಗಾಗಿ ಅವರ ಮಾತುಗಳನ್ನು ಗೌರವಿಸುವುದಾಗಲಿ, ಗಂಭೀರವಾಗಿ ತೆಗೆದುಕೊಳ್ಳುವುದಾಗಲಿ ಸ್ವಲ್ಪ ಸೂಕ್ಷ್ಮವಾದ ವಿಚಾರವೇ ಸರಿ. ಇದು ತುಂಬಾ ಕಟುವಾದ ಅಥವಾ ತೀರಾ ಸರಳವಾದ ಹೇಳಿಕೆ ಅಂತ ಅನ್ನಿಸಬಹುದು. ಆದರೆ ಮುಂಬರುವ ವರ್ಷಗಳಲ್ಲಿ ನಾನು ಪಡೆದುಕೊಳ್ಳುವ ಅನುಭವಗಳಷ್ಟೇ ಈ ನನ್ನ ಅನುಮಾನಗಳನ್ನು ತಪ್ಪೆಂದು ಸಾಬೀತು ಪಡಿಸಬೇಕು.

ನನ್ನ ಜೀವನದ ಹರಿವಿನ ಈ ತಿರುವು ನಾನು ನಡೆದು ಬಂದ ಹಾದಿಯನ್ನು ಮರೆಮಾಚಿದೆ. 'ಬಂಡಾಯ'ದ ಈ ಹೊಸ ಜೀವನಕ್ಕೆ ನಾನು ಎಷ್ಟು ಒಗ್ಗಿಹೋಗಿದ್ದೇನೆ ಅಂದರೆ ಇದು ನನ್ನಲ್ಲಿ ಮೊದಲಿದ್ದ ಗುಣಗಳನ್ನು ನಗಣ್ಯ ಎನ್ನುವಂತೆ ಮಾಡಿದೆ. ಬೇರೆಯವರು ನನ್ನ ಬಗ್ಗೆ ಅಂದುಕೊಂಡಿರುವಂತೆ ನಾನು ಒಬ್ಬ ನಿರಾಳ ವ್ಯಕ್ತಿ ಅಲ್ಲ. ಆಗಿನ ನನ್ನ ಮನಃಸ್ಥಿತಿಗೆ ಹೋಲಿಸಿದರೆ, ಒಂದು ವರ್ಷದ ಹಿಂದೆ ನನ್ನ ಭಾವನೆಗಳು ನನ್ನ ಹತೋಟಿಯಲ್ಲಿ ಇರುತ್ತಿದ್ದವು ಅಷ್ಟೆ. ಅದನ್ನೇ 'ನಿರಾಳತೆ' ಎಂದು ಕರೆಯಬಹುದೇನೋ. ನಾನು ಬದುಕುತ್ತಿರುವ ಈ ಸಮಾಜದ ಬಗ್ಗೆ ನನ್ನಲ್ಲಿ ಸಾಕಷ್ಟು ಅಸಮಾಧಾನ ಇದೆ. ಈ ನಂಬಿಕೆಯಿಂದಾಗಿಯೇ ನಾನು ಚಳುವಳಿಗೆ ಧುಮುಕಿರುವುದು.

ಅಜ಼ರ್ ಅಲಿ ಬಂದಿದ್ದ. ಇದರಿಂದ ನಾನು ಬಯಸುವ ನನ್ನ ಹುಟ್ಟುಹಬ್ಬದ ಅತ್ಯಂತ ಮೌಲಿಕ ಉಡುಗೊರೆ ಸಿಕ್ಕಿದ ಹಾಗಾಯಿತು. ಅದೃಷ್ಟಕ್ಕೆ ಮುಖ್ಯ ಜೈಲಾಧಿಕಾರಿ ಅವನು ತಂದ ಊಟವನ್ನು ಒಳಗೆ ತರಲು ತಕರಾರು ಮಾಡಲಿಲ್ಲ. ನಾವು ಮೂರು ಗಂಟೆ ಹೊತ್ತು ಸಂತೋಷವಾಗಿ ಕಾಲ ಕಳೆದೆವು. ಇದು ಖಂಡಿತವಾಗಿ ನನ್ನ ಸೌಭಾಗ್ಯಗಳಲ್ಲಿ ಒಂದು.

ತಂದೆ ಮತ್ತು ತಾಯಿ ಅಜ಼ರ್ ಜೊತೆ ನನಗೆ ಒಂದು ಪತ್ರ ಕಳುಹಿಸಿದ್ದರು. ಅವರಿಗೆ ದೀರ್ಘವಾದ ಇನ್ನೊಂದು ಪತ್ರವನ್ನು ಶೀಘ್ರದಲ್ಲೇ ಬರೆಯುವುದಾಗಿ ಹೇಳಿ, ಅವಸರದಲ್ಲಿ ನಾಲ್ಕು ಸಾಲು ಬರೆದು ಕಳುಹಿಸಿದೆ.

ಮೌಲ್ವಿ ಮತ್ತಿತರರು ತಮ್ಮ ವಿಚಾರವನ್ನು ತಿಳಿಸಿ ಸೂಪರಿಂಟೆಂಡೆಂಟ್‌ಗೆ ಒಂದು ಅಹವಾಲು ಸಲ್ಲಿಸಿದ್ದಾರೆ. ಆದರೆ ಆತನಿಗೆ ಪರಿಸ್ಥಿತಿಯ ಗಂಭೀರತೆ ಅರ್ಥ ಆದಂತಿಲ್ಲ. ಹೇಗೋ ಗಂಗಪ್ಪನನ್ನು ವರ್ಗಾಯಿಸಲು ಒಪ್ಪಿಕೊಂಡಿದ್ದಾನೆ.

ಕೃಪೆ: ಅರಿವಿನ ಆಡುಂಬೋಲ ಕೃತಿಯಿಂದ

ಚಿಯೋ ನಿ ಹಾಯ್ಕುಗಳು

ಜಪಾನೀ ಮೂಲ : **ಚಿಯೋ ನಿ** (೧೭೦೩-೧೭೭೫)
ಇಂಗ್ಲಿಷಿನಿಂದ ಕನ್ನಡಕ್ಕೆ : **ಡಾ. ಸಿ. ರವೀಂದ್ರನಾಥ್**

ಅದೃಶ್ಯ ಕೊಕ್ಕರೆಗಳ
ಕೂಗು
ಬೆಳಗಿನ ಹಿಮ

❖

ಶರತ್ಕಾಲದ ಗಾಳಿ
ಪರ್ವತದಲ್ಲಿ ಪ್ರತಿಧ್ವನಿಸಿದೆ
ಗುಡಿಯ ಗಂಟೆ

❖

ಕುಕ್ಕರಗಾಲಲ್ಲಿ ಕುಳಿತ
ಕಪ್ಪೆಯ ಕಣ್ಣುಗಳಲ್ಲಿ
ಮೋಡ

❖

ಪರ್ವತದ ಆ ಬದಿ
ಹರಡಿಲ್ಲ
ಮಾಗಿಯ ಬಣ್ಣ ಪ್ರೀತಿ.

❖

ಹಕ್ಕಿಗಳ ನೆರಳು
ಈ ದುಃಖತಪ್ತ ಎಲೆಗಳು
ಮಾಗಿಯ ಚಂದ್ರ.

❖

ತಣ್ಣನೆಯ ತಿಳಿನೀರು
ಮಿಂಚುಹುಳು ಮಾಯ
ನೀರವ ಕ್ಷಣ.

❖

ಮಲಗಿ ಏಳುತ್ತೇನೆ
ಇನಿಯನಿಲ್ಲದ ಹಾಸಿಗೆ
ತೀರ ಅಗಲ.

❖

ಹಸಿರು ಹಾಸು
ಎಳೆ ಗರಿಕೆಗಳ ಮಧ್ಯೆ
ಇಬ್ಬನಿಯ ಬಣ್ಣ.

❖

ಒಂದು ಬಳ್ಳಿಯ ಮನ
ಅರಳಿವೆ
ವಿಧ ವಿಧದ ಕಾಯಿ.

❖

ತುಟಿಗಳ ರಂಗು
ಮರೆತಿವೆ
ತಿಳಿನೀರ ಚಿಲುಮೆ.

❖

ತುಸುತುಸುವೇ ಇಣುಕುತ್ತಿದೆ
ಅವಳ ಚರ್ಮ
ಚಂದ್ರ ಅರಳಿದ!

❖

ವಿರಹ ಅರಿಯದ
ಬೊಂಬೆಗಳು
ಒಂಟಿ ಮುಂಜಾವು.

❖

ಚಿಟ್ಟೆಗಳ ಬೆನ್ನಟ್ಟಿ
ಎಲ್ಲಿ ಹೋಯಿತು ಮಗು
ಚಿಟ್ಟೆಯಾಗಿ?
(ಚಿಯೋ ನಿ ಯ ಒಂಬತ್ತು ವರ್ಷದ ಮ
ತೀರಿಕೊಂಡಾಗ ಬರೆದದ್ದು

❖

ಬಾವಿಯ ಹಗ್ಗ ಸುತ್ತಿದೆ
ಮಲ್ಲಿಗೆಯ ಬಳ್ಳಿ
ಬೇರೆಡೆ ನೀರು ಹುಡುಕುತ್ತೇನೆ.

❖

ಯಾವ ಕನಸುಗಳ
ರೆಕ್ಕೆ ಬಿಚ್ಚಿ ಹಾರುತ್ತಿವೆ
ಚಿಟ್ಟೆ?

❖

ಹೂವುಗಳಿಲ್ಲ
ನಾನು
ನಿರ್ಲಿಪ್ತ ವಿಲ್ಲೋ ಮರ.
(ಚಿಯೋ ನಿಯ ಪತಿ ಹಾಗೂ ಮಗ ತೀರಿಕೊಂಡಾ.
ಗೆಳತಿಯ ಸಾಂತ್ವನದ ಮಾತಿಗೆ ಪ್ರತಿಕ್ರಿಯೆಯಾಗಿ

❖

ಚಂದಿರನ ನೋಡಿದೆ
ಕೊನೆಯ ಸಾಲು ಬರೆಯುತ್ತಿದ್ದೇನೆ
'ಇಂತಿ ನಿಮ್ಮ ಪ್ರೀತಿಯ'



ನಂ. ೧೩೩, ೫ನೇ ಕ್ರಾಸ್, ೨ನೇ ಸ್ಟೇಜ್,
ಬೃಂದಾವನ ಬಡಾವಣೆ, ಮೈಸೂರು
ಮೊಬೈಲ್ : ೯೪೪೯೭೮೮೧೯೫

ಅಕ್ಷರಶಃ

ಅರುಂಧತಿ ರಮೇಶ್

ಅಕ್ಷರವೊಂದು ಬಿದ್ದಿತ್ತು
ಕನಸುಗಳ ಕಾಣುತ್ತ
ಕಮ್ಮಾರನೆತ್ತಿ ಹಿಡಿದು ಟಣಟಣಿಸಿ
ಕಾಸಿ ಬಡಿದು ಕೊಡಲಿಯಾಗಿಸಿದ
ಅಕ್ಷರಕ್ಕೆ ಮೈ ಬಿಸಿಯಾಗಿ ಜ್ವರ ಬಂತು.

ಚಮ್ಮಾರನೊಬ್ಬ ಹಿಡಿದು ಎಳೆದಾಡಿ ಜಗ್ಗಿ
ತೋಯಿಸಿ ತಟ್ಟಿ ಬಿಗಿದು ಉಂಗುಷ್ಟಕ್ಕಿಟ್ಟ
ಅಕ್ಷರ ನಡೆಯಿತು ಯಾರದೋ ದಾರಿಗೆ.

ವ್ಯಾಪಾರಿ ಅಳೆದು, ತೂಗಿ, ಗುಣಿಸಿ ಭಾಗಿಸಿ
ಕಿಮ್ಮತ್ತು ಬೇಡಿ ಮಾರಿ ಲಾಭ ಗಳಿಸಿದ.
ಅಕ್ಷರ ಕೊಂಡವರ ಸೊತ್ತಾಯಿತು.

ಶಿಲ್ಪಿಯಂತೂ ಸವರಿ ಸಾವರಿಸಿ
ನೀರುಣಿಸಿ ಕಟೆಕಟೆದು ಆಕೃತಿಯ ನೀಡಿ
ದೂರ ನಿಂತು ನೋಡಿ ತಲೆದೂಗಿದ
ಅಕ್ಷರ ಭಂಗಿಯಾಗಿ ಅಂಕು-ಡೊಂಕು.

ಬಡಿಗಾರನೋ ಉಜ್ಜಿ ಹೊಳೆಯಿಸಿ
ಅಳತೆ ಆಕಾರಕ್ಕೆ ಬಣ್ಣ ಹಚ್ಚಿ ಗೆಜ್ಜೆ ಕಟ್ಟಿದ.
ಅಕ್ಷರ ಅತ್ತಿತ್ತ ತೂಗುತ್ತ ಒಲಾಡಿತು.

ಕವಿ... ಆಹಾ... ಅದನೆತ್ತಿ ಕಣ್ಮುಚ್ಚಿ
ಧ್ಯಾನಿಸಿ, ಅಲ್ಲಿ-ಇಲ್ಲಿ ಹಾಗೆ-ಹೀಗೆ ಕುಣಿಸಿ
ಆಡಿ ಹಾಡಿ ಕುಣಿದು ಧನ್ಯನಾದ
        ಅಕ್ಷರ ಅರ್ಥ-ಭಾವ ಸ್ವರವಾಗಿ ತಡವರಿಸಿತ್ತು.

ಓಹ್, ಸನ್ಯಾಸಿ ಮುಖ ತಿರುವಿ
ಕೈ ಅಡ್ಡವಿರಿಸಿ, ಅತ್ತಿತ್ತ ಸರಿಸಿದನೋ
ಹಾರಿ, ದಾಟಿಕೊಂಡು ಹೋದನೋ
ಅಕ್ಷರ ಬಿದ್ದು ಬಿದ್ದು ನಕ್ಕಿತು.

ಪೂಜಾರಿ, ತುದಿಬೆರಳಲೆತ್ತಿ ನೀರು
ಚಿಮುಕಿಸಿ, ಮಡಿ ಮಾಡಿ ಗಂಧಾಕ್ಷತೆ
ಧೂಪ-ದೀಪ ನೈವೇದ್ಯ ಕರ್ಪೂರ ಸಲ್ಲಿಸಿದ,
        ಕೃತಾರ್ಥನಾದ - ಅಕ್ಷರಕ್ಕೆ ಉಸಿರು ಕಟ್ಟಿತು.

ಮಗುವೊಂದು ಕಂಡದ್ದೇ ಓಡಿ ಬಂದು
ಬಗ್ಗಿ ಪುಟ್ಟ ಕೈಗಳಲೆತ್ತಿ ಅಂಗೈಯ ಬೊಗಸೆಯಲ್ಲಿ
ಕೆನ್ನೆಗೊತ್ತಿ ನಾಲಿಗೆ ಚಾಚಿ ಅಕ್ಷರದ ರುಚಿ ನೋಡಿತು.
ಎದೆಗಪ್ಪಿ ಗೊಂಬೆಯಾಗಿಸಿಕೊಂಡಿತು.
ಸ್ನಾನ-ಊಟ ಮಾಡಿಸಿ ಜೋಗುಳದ
ತೊದಲಿನಲಿ ಮಲಗಿಸಿತು, ತನ್ನ ಮಗುವಿನಂತೆ
ಅದನ್ನೇ ತಬ್ಬಿ ನಿದ್ದೆಹೋಯಿತು.
ನಿದ್ರಿಸುತ್ತಿದ್ದ ಅಕ್ಷರ ಮೆಲ್ಲಗೆ ಎಚ್ಚರಾಗಿ
ಮಗುವಿನೆದೆಯ ಪ್ರೀತಿಗೆ ಮುದ್ದಿಗೆ ಕಾಯುತ್ತ..
ಒಳ-ಹೊರಗು ಕದಲದಂತೆ ಕಾವಲು ಕಟ್ಟಿನಲಿ,
ಬೆಚ್ಚಿ ಬೆದರದಂತೆ ಅಚ್ಚರಿಯ ದಿಟ್ಟಿಯಲಿ.

೧೬೮೦/೧೧,
೧೨ನೇ 'ಎ' ...
ಸಿದ್ದವೀರಪ್ಪ ಬ...
ದಾವಣಗೆರೆ -
ಮೊಬೈಲ್ : ...

ನೆನಪಿನ ಹಿಂದೆ

ಶ್ರೀಪಾದ

ಕಾಗೆ ಕೂಗಿತ್ತು ಕಾ ಕಾ ಕಾ
ಬಾಲ್ಯದಲ್ಲಿನೆನಪು
ಕತ್ತಲ ಗವಾಕ್ಷಿ
ಬೆಳಕು.

ಶಿಲಾಯುಗದಲ್ಲಿ ನಿದ್ದೆಗೆಟ್ಟಿದ್ದೆ
ಗುಹಾಲಯ ವಾಸ
ಭೂಮಿ ಮೇಲೊತ್ತಿದ
ಭಾವೀ ಕಟ್ಟೆ

ಗಾಜಿನ ಮಂಚ ತೂಗುತ್ತಿತ್ತು
ಕಣ್ಣಾ ಮುಚ್ಚೇ...
ನದೀ ತೀರ ಹತ್ತುತ್ತಿದ್ದ
ಮೆಟ್ಟಿಲುಗಳು.

ಹುಡುಕಿದಿರಾ ಮರಳಡಿಯಲ್ಲಿ
ಮೂಳೆಗಳ ಸಂಸ್ಕೃತಿ
ಕನ್ನಡಿಯೊಳಗೆ ಚಂದ್ರ
ಚೌತಿ.

ಗಾಡಿಗೊರಗಿದ ಬಾವುಟಗಳು
ತೇಲುವ ಕನಸು
ಊರ ಸೇರುವ ತನಕ
ರಾತ್ರಿ ರಾಣಿ


ಮುಗಿಯಿತೇ ಸೇತುವೆ ಕೆಲಸ?
ಷಷ್ಟ್ಯಬ್ದಿ
ಪೀಪಿಗೀಗಲೆ ನೆನಪು
ಊರುಗೋಲು.

ಮರಿ ಹುಲಿಯಾಗಿರಬಹುದು
ಆನೆ ಮಲಗಿ
ಬೆನ್ನಾದ ವಾಹನಕ್ಕಿನ್ನೂ
ಛಡಿಯೇಟು

ಊರೂರು ತಿರುಗುತ್ತಿದ್ದವರ
ಮನಸ್ಸಿನಲ್ಲೇ ಅಪಘಾತ.
ಅಜ್ಜಿ ಹೊಸೆದ ಬತ್ತಿ
ನಂದಾದೀಪ

ಹೆಜ್ಜೆಗಳ ಮೇಲೆ ಒಜ್ಜೆ
ಬೇರಾದ ಜೀವದ್ದು
ಸುಡದ ಮೂಳೆ ಶಿಲೆಯಾಗಿ
ಕರಗಿದ್ದು ಸಮುದ್ರದಲ್ಲಿ

ನೆನಪಿನಂತಿದೆ ವರ್ತಮಾನ
ನಾಳೆ ಭೂತ
ವರ್ತುಲ ಗಿರಗಟ್ಟಲೆ ಚಕ್ರ
ಸಿನಿ ಶೈಲಿ.



ಹಿಮಾಲಯ - ೧

ಶಿಖರದ ಮೇಲೆ
ಯಾರೋ ಅಳುವ ಸದ್ದು.

ಚಾಚಿದ್ದಾವೆ ಕೈಗಳು
ಎಲ್ಲಿಗೆ?

ಸಾವಿರಾರು ಹೂವಿನ ಕಣಿವೆ
ಸತ್ತುಹೋದ ಜಾತಿಗಳೂ ಬಿಟ್ಟು.

ಬಾಲವರಸುತ ಬಂದ ಸುಗಂಧ
ಮರೆಸಿತ್ತು ಯುಗದೃಶ್ಯ.

ಅಡ್ಡವಾಗಿದೆ ಮೇಘ
ನೀಲಕಂಠ.

ಕಿವಿಗೊಟ್ಟು ಕೇಳಿ
ಸದ್ದಿಲ್ಲ; ಹಕ್ಕಿಗಳಿಲ್ಲ.

ಕಿವಿಚುಚ್ಚುವ ನಿರಂತರ ಶಾಸ್ತ್ರ
ಎಚ್ಚರ– ಬಂಡೆಗಳಿಲ್ಲಿ ನಿದ್ರಿಸಿವೆ.

ಸಿಡಿಲಿಗೊಡೆಯುವ ಲಿಂಗ
ಬೆಳಕಿಗೆ ಪ್ರವರ್ಧಮಾನ!

ಮುಳುಗಿದರೆ ಪರಿಹಾರ
ದಂಡೆಯ ಮೇಲೆ.

ಮುಳುಗಲಾರದ ಸೇತುವೆಗಳು
ಗಣಗಣ ಗಂಟೆಯ ನಾದ

ಕಾಡು ಬಿಸಿಲಿಗೆ ಬೆವರದ ಜನ
ಬೀಸಣಿಕೆಗಳ ಸಾಲು

ತಿರುಗುತ್ತಾ ತಿರುಗುತ್ತಾ ಕಪ್ಪು ಚಕ್ರ
ಕತ್ತರಿಸುತ್ತಾ ಮೈದಾನ.

ಆಟ-ಪಾಠ ಆಸ್ಥಾನ
ಅಜ್ಞಾತಿಗಳ ವನವಾಸ.

ಮತ್ತೆ ಗುಹೆಯೊಳಗೆ ಹೊಸ ಸಿದ್ಧಿ
ಕಲ್ಲು ಕಬ್ಬಿಣ ಶ್ರಾದ್ಧ

ಪಠಿಸುತಿದೆ ಬಾವುಟ ಪಟಪಟ
ಮುಂದೆಲ್ಲಿಗೆ?

'ಶ್ರೀಧರ ಆಶ್ರಮ', ಬಿ.ಹೆಚ್.ರಸ್ತೆ ಸೋಮಯ್ಯ ಲೇಔಟ್, ಶಿವಮೊಗ್ಗ - ೫೭೭ ೨೦೧

‘ಬಹುವಚನ’ ಒಂದು ಕೃತಿಯ ಬಗ್ಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡುವ ಪ್ರಯತ್ನ. ಚಂದ್ರಶೇಖರ ಕಂಬಾರ ಅವರ ‘ಎಲ್ಲಿದೆ ಶಿವಾಪುರ’ ಕವನ ಸಂಕಲನದ ಓದು ‘ಬಹುವಚನ’ದ ಪ್ರಯೋಗ.

ಬಹುವಚನ

ಶಿವಾಪುರಕ್ಕೆ ಹೀಗೆ ಬನ್ನಿ

ಡಾ. ಎನ್. ಸುರೇಶ್ ನಾಗಲಮಡಿಕೆ

ಕಂಬಾರರು ಜನಪದ ಲೋಕವನ್ನು ಮತ್ತು ಬದುಕನ್ನು ತತ್ವಜ್ಞಾನಿಯಂತೆ ನಂಬಿಕೊಂಡು ಬಂದವರು. ಪ್ರಾಯಶಃ ಆಧುನಿಕೋತ್ತರ ಸಂದರ್ಭದಲ್ಲಿ ಜನಪದವನ್ನು ನೋಡುವ ಕ್ರಮ ಹಾಗೂ ಅದಕ್ಕೆ ಉಂಟಾಗುತ್ತಿರುವ ಘರ್ಷಣೆಗಳನ್ನು ಭಿನ್ನ ರೀತಿಯಲ್ಲಿ ವಿಶ್ಲೇಷಿಸುವ ಅಗತ್ಯವಿದೆ ಎಂದು ಕಾಣುತ್ತದೆ. ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ದೇಸಿ ಜ್ಞಾನ ಪರಂಪರೆಗಳನ್ನು ತಮ್ಮದೇ ರೀತಿಯ ತಾತ್ವಿಕತೆಯಲ್ಲಿ ಮತ್ತು ಪರಿಭಾಷೆಯಲ್ಲಿ ಕಟ್ಟಿಕೊಡುತ್ತಿರುವವರಲ್ಲಿ ಕಂಬಾರ, ಎಚ್.ಎಸ್. ಶಿವಪ್ರಕಾಶ್, ಎಸ್.ಜಿ. ಸಿದ್ದರಾಮಯ್ಯ ಮುಂತಾದವರು ಮುಖ್ಯರೆಂದು ಹೇಳಬಹುದು. ಶಿವಪ್ರಕಾಶ್ ಅವರಿಗೆ ವಚನ ಪರಂಪರೆಯೊಳಗೆ ಮತ್ತು ಸೂಫಿಲೋಕದಲ್ಲಿ ಅಡಗಿ ಕೂತಿರುವ ಅನುಭಾವವನ್ನು ದೇಸಿ ಪರಂಪರೆ ಎಂದು ಭಾವಿಸಿದರೆ, ಸಿದ್ದರಾಮಯ್ಯ ಅವರಲ್ಲಿ ಜೀವ ಪರಂಪರೆ, ಕೃಷಿಲೋಕ, ಅನುಭಾವ ಇವನ್ನು ದೇಸಿ ಪರಂಪರೆ ಎಂದು ಭಾವಿಸಿದಂತಿದೆ.



ಆದರೆ ಕಂಬಾರರು ಶಿವಾಪುರವನ್ನ ಮೊದಲಿಂದಲೂ ಇವರಿಗೊಂದು ರೂಪಕ ಮಾತ್ರವಾಗದೇ, ಸಾಂಸ್ಕೃತಿಕವಾದ ಪ್ರಶ್ನೆಗಳನ್ನು ಎತ್ತಿಕೊಳ್ಳುವಲ್ಲಿ ನಿರಂತರ ಪ್ರಕ್ರಿಯೆ ಎಂದು ಭಾವಿಸಬಹುದು. ಒಬ್ಬ ಕವಿ ತನ್ನ ರಚನಾ ಕಾಲದಲ್ಲಿ ತನ್ನನ್ನು ಕಾಡುವ ಸಮಸ್ಯೆಗಳನ್ನೆ ಆ ಕ್ಷಣಕ್ಕೆ ಗಂಭೀರ ಎಂದು ಭಾವಿಸುತ್ತಾನೆ. ಕ್ರಮೇಣ ಮುಂದಿನ ನಿರಚನದಲ್ಲಿ

ಎಲ್ಲಿದೆ ಶಿವಾಪುರ, ಕವನ ಸಂಕಲನ

ಕವಿ	:	ಚಂದ್ರಶೇಖರ ಕಂಬಾರ
ಪ್ರಕಾಶಕರು	:	ಅಭಿನವ, ಮಾರೇನಹಳ್ಳಿ, ವಿಜಯನಗರ ಮೊದಲನೇ ಮುಖ್ಯರಸ್ತೆ ಬೆಂಗಳೂರು - ೫೬೦ ೦೪೦
ಬೆಲೆ	:	ರೂ. ೧೦೦.೦೦
ಪ್ರಕಟಣಾ ವರ್ಷ	:	೨೦೦೯

ಅವುಗಳನ್ನು ಅನುಸಂಧಾನ ಮಾಡುತ್ತಾನೆ. ಇದನ್ನು ಕವಿಯ ಕವಿತ್ವದ ತಾತ್ವಿಕತೆಯ ಪಲ್ಲಟವೆಂದೂ ಹೇಳಬಹುದು. ಕಂಬಾರರ ಹೇಳತೇನ ಕೇಳ (೧೯೬೪), ತಕರಾರಿನವರು(೧೯೭೦), ಸಾವಿರದ ನೆರಳು(೧೯೭೯), ಬೆಳ್ಳಿಮೀನು(೧೯೮೯), ಅಕ್ಕಕ್ಕ ಹಾಡುಗಳೇ (೧೯೯೪) ಈ ಸಂಕಲನಗಳಲ್ಲಿ ಕಂಬಾರರು ತಮ್ಮ ಕಾವ್ಯದಲ್ಲಿ ಹಲವು ಪಲ್ಲಟಗಳನ್ನು ಕಂಡುಕೊಂಡಿದ್ದಾರೆ.

ಸುಮಾರು ಹದಿನೈದು ವರ್ಷಗಳ ನಂತರ ಪ್ರಕಟಗೊಂಡಿರುವ ಕಂಬಾರರ 'ಎಲ್ಲಿದೆ ಶಿವಾಪುರ' ಹಲವು ವಿಚಾರಗಳಿಂದಾಗಿ ಮುಖ್ಯವೆನಿಸಿದೆ. ಕಂಬಾರರ ಕಾವ್ಯ ಬದುಕಿನಲ್ಲಿ ಹಲವು ನಿರ್ಣಾಯಕ ಅಂಶಗಳನ್ನು ಹೊರಗೆಡಹುತ್ತದೆ. ಅವರು ಕೊಟ್ಟಿರುವ ಶೀರ್ಷಿಕೆಯನ್ನು ಎರಡು ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಅವಕಾಶವಿದೆ. ಒಂದು ಶಿವಾಪುರ ಯಾವ ದಿಕ್ಕಿನಲ್ಲಿದೆ ಎಂಬುದು. ಇದು ಕವಿಯ ಆಶಾವಾದವನ್ನು ಸೂಚಿಸುತ್ತದೆ. ಇನ್ನು ಪ್ರಶ್ನಾರ್ಥಕವಾಗಿ ಸ್ವೀಕರಿಸಿದರೆ ಎಲ್ಲಿದೆ ಶಿವಾಪುರ? ಎಲ್ಲೋ ಇದೆ, ಅಥವಾ ಕಳೆದುಹೋಗಿರಬಹುದು, ಮುಂದೆಯೂ ಅಗೋಚರವಾಗಿಯೇ ಇರಬಹುದು ಎಂಬುದು. ಶಿವಾಪುರವನ್ನು ಕುರಿತು ಈಗಾಗಲೇ ಕಂಬಾರರ ಕಾವ್ಯವನ್ನು ಗಂಭೀರವಾಗಿ ನೋಡಿರುವ ವಿಕ್ರಮ ವಿಸಾಜಿಯವರು ಹೇಳುವ ಧಾಟಿ ಹೀಗಿದೆ – ಕಂಬಾರರಿಗೆ ಶಿವಾಪುರ 'Nostalgia' ಆಗಿಯೂ ಮತ್ತು 'utopia' ಆಗಿಯೂ ಕಾಣಿಸುತ್ತಿದೆ. ಅಂದರೆ ಕಳೆದುಹೋಗುತ್ತಿರುವ ಜಗತ್ತೂ ಹೌದು, ಅವರು ಕಟ್ಟಿಕೊಳ್ಳಲು ಬಯಸುವ ಆದರ್ಶ ಜಗತ್ತೂ ಹೌದು. ಹೀಗಾಗಿ ಕಳೆದುಹೋಗುತ್ತಿರುವುದರ ಕುರಿತಾದ ಹಳಹಳಿಕೆ ಮತ್ತು ಈಗ ಕಾಣುತ್ತಿರುವ ವಾಸ್ತವದ ಪ್ರಖರತೆಗಳೆರಡೂ ಇಲ್ಲಿ ಅಭಿವ್ಯಕ್ತಿಗೊಂಡಿವೆ"(ಪು. ೨೧, ನಾದಗಳು ನುಡಿಯಾಗಲೀ, ಪಲ್ಲವ ಪ್ರಕಾಶನ, ಚನ್ನಪಟ್ಟಣ). ವಿಕ್ರಮರ ಈ ಅಭಿಪ್ರಾಯವನ್ನು ನಾವು ಒಪ್ಪಿಕೊಂಡರೂ ಪ್ರಸ್ತುತ ಸಂಕಲನದಲಲಿ ಶಿವಾಪುರ ಯಾವ ಗೊಂದಲಗಳನ್ನು ಎದುರಿಸಿದೆ? ಎಂಬುದನ್ನು ಆಲೋಚಿಸುವ ಅನಿವಾರ್ಯತೆ ಇದೆ.

ಕಂಬಾರರು ಈ ಸಂಕಲನವನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ೧. ಘೋಡಗೇರಿ, ೨. ಹಂಪಿ, ೩. ಅಮೇರಿಕ, ೪. ಆಕಾಶ ಮತ್ತು ಬಯಲು. ಘೋಡಗೇರಿಯ ಭಾಗದ ಅನೇಕ ಕವಿತೆಗಳು ನೆನಪುಗಳಲ್ಲಿ ಜೀವಿಸುತ್ತವೆ. ಇಲ್ಲಿ ಬರುವ ಅವ್ವ, ಅಪ್ಪ, ಶಿವಾಪುರ, ನಿಂಗವ್ವ, ಜಂಗಮ, ಪರಾಂಬಿಮರ, ಬೇಡರ ಹುಡುಗ ಇವರೆಲ್ಲರೂ ಕಂಬಾರರನ್ನು ಕಾಡಿರುವ ಜಗತ್ತು. ಶಿವಾಪುರವು ತಮ್ಮ ಹಿಂದಿನ ಕಾವ್ಯದಲ್ಲಿ ಪಡೆದುಕೊಂಡಿದ್ದ ವ್ಯಾಪಕತೆಗೂ ಪ್ರಸ್ತುತ ಕಾವ್ಯದಲ್ಲಿ ವಿಸ್ತರಿಸಿಕೊಂಡಿರುವ ಅರ್ಥದ ಜಾಡುಗಳಿಗೂ ವ್ಯತ್ಯಾಸವಿದೆ. ಪ್ರಾಯಶಃ ಕಂಬಾರರನ್ನು ಇತ್ತೀಚಿನ ದಿನಗಳಲ್ಲಿ ಹೆಚ್ಚು ಕಾಡಿದ ಅಂಶವೆಂದರೆ, 'ಪರಿಸರನಾಶ'. ಇದು ಅವರ ಹಿಂದಿನ ಕಾವ್ಯಗಳಲ್ಲಿ ವ್ಯಕ್ತವಾಗಿಲ್ಲವೆಂದಲ್ಲ, ಗಂಗಾಮಾಯಿ ಕವಿತೆಯಲ್ಲಿ

ಪ್ರಬಲವಾಗಿ ಕಾಣಿಸಿದರೂ ಅಂದಿನ ವಿಮರ್ಶಾಲೋಕ ಸಿದ್ಧಮಾದರಿಗಳಲ್ಲಿ ಚರ್ಚಿಸಿಟ್ಟರು. ಗಂಗಾಮಾಯಿ ಕವಿತೆಯನ್ನು ನೆನಪಿಸಿಕೊಂಡು, 'ಘಟಪ್ರಭಾ ನದಿ'ಯನ್ನು ಗಮನಿಸಿದರೆ ಈ ಅಂಶ ಗೋಚರಿಸುತ್ತದೆ. 'ನೆನಪು ಮತ್ತು ನಾಶ' ಇವೆರಡೂ ಅಂಶಗಳು ಒಟ್ಟಿಗೆ ಬರುವುದು ನೋಡಿ.

ಈ ಮಧ್ಯೆ ನಡೆದ ಕರ್ಮಕಾಂಡಗಳ ಕಥೆಯನೇನ ಕೇಳುವಿರಯ್ಯ?
ಹೇಳಲಿಕ್ಕಿದೆ ಬೇಕಾದಷ್ಟು
ಈಗಿಷ್ಟು ತಿಳಿಯಿರಿ ಸಾಕು
ನಮ್ಮ ನದಿಯ ಯೌವನವಾಗಲೇ ದುಂದುವೆಚ್ಚವಾಗಿ
ತಂಗುಳಾಗಿದೆ ನೀರು (ಪುಟ ೧೧, ಘಟಪ್ರಭಾ ನದಿ)

ಕಂಬಾರರ ಕಾವ್ಯ ಪ್ರಸ್ತುತ ದಿನಗಳಲ್ಲಿ ಸ್ಮೃತಿ ಮತ್ತು ವಿಸ್ಮೃತಿಗಳಲ್ಲಿ ಜೀವಿಸುತ್ತಿದೆ ಎಂದು ಕಾಣುತ್ತದೆ. ಇದರಿಂದ ಒಬ್ಬ ಕವಿಗೆ ಆಗುವ ತಾತ್ವಿಕ ಲಾಭವೆಂದರೆ ತಾನು ಇದ್ದ, ಅನುಭವಿಸಿದ ಕಾಲವನ್ನು ಮತ್ತು ಈಗ ಅನುಭವಿಸುತ್ತಿರುವ ಕಾಲವನ್ನು ಅನುಸಂಧಾನಗೊಳಿಸುವುದು. ಒಂದು ರೀತಿಯಲ್ಲಿ ನೆನಪುಗಳಲ್ಲೇ ಜೀವಂತಿಕೆಯನ್ನು ರೂಪಿಸುವ ಮತ್ತು ರೂಪಿಸಿಕೊಳ್ಳುವ ಕಾವ್ಯವಾಗುತ್ತದೆ. ಕಂಬಾರರ ಕಾವ್ಯ ಕೂಡ ಈ ಜಾಡಿನಲ್ಲಿ ಸಾಗಿದೆ ಎನಿಸುತ್ತದೆ. ನಿದರ್ಶನಕ್ಕೆ ಪಾರಂಜಿ ಮರ – ೧ ರಲ್ಲಿ ಅನುಭವಿಸಿದ ಲೋಕವಾದರೆ, ಪಾರಂಜಿಮರ - ೨ರಲ್ಲಿ ರೂಪಿಸಿಕೊಳ್ಳುವ ಆಶಾವಾದವನ್ನು ನೋಡಬಹುದು. ಮತ್ತು ಒಟ್ಟಿಗೆ ಮನುಷ್ಯನ ವಿನಾಶಕಾರಿ ಬೌದ್ಧಿಕ ಕ್ರಮದಿಂದ ಈ ಎರಡೂ ಕವಿತೆಗಳು ನನಗೆ ಮುಖ್ಯವೆಂದು ಕಾಣುತ್ತವೆ. ಈ ಮರ ಸಾಮಾನ್ಯದ್ದಲ್ಲ, ಬುದ್ಧನಿಗೆ ಆಶ್ರಯಕೊಟ್ಟ ಮರ ಮತ್ತು ಜನಪದರು ಅದನ್ನೊಂದು ಜಗತ್ತೆಂದು ಭಾವಿಸಿದ ಮರ. ಆದರೆ ಪಾರಂಜಿ ಮರಕ್ಕೆ ಆದ ದುರಂತವೆಂದರೆ –

ಕೆಂಡದ ಮಳೆಗೂ ಜಗ್ಗದ ಈ ಮರದ ಮ್ಯಾಲೆ
ಹುಲಿಯು ನೆರಳು ಬಿದ್ದಾಗಲೇ ನಡುವಿನ ಮುಳಿಯೊಣಗಿತ್ತು
ನನಗೆ ನೆನಪಿದ್ದಂತೆ ಅಮವಾಸ್ಯೆಯ ದಿನ
ಕಡಿದರು ಈ ಮರವ ಬೆಳಗಾವಿಯ ಜನ
ಮಾರನೆಯ ದಿನ ಯುಗಾದಿಯಂದೇ ಸತ್ತ ಕರಿಯಜ್ಜ

(ಪುಟ-೧೩, ಪಾರಂಜಿಮರ -೧)

ಪಾರಂಜಿ ಮರ - ೨ರಲ್ಲಿ ಕವಿ ಉತ್ಸಾಹದಿಂದ ಬರೆಯುತ್ತಾರೆ. ಒಂದನೇ ಕವಿತೆಯಲ್ಲಿ ಕಳೆದುಹೋಗಿದ್ದ ಪರಿಸರದ ಸೃಜನಶೀಲತೆಯನ್ನು ಎರಡನೇ ಕವಿತೆಯಲ್ಲಿ ತುಂಬಿಕೊಳ್ಳುತ್ತಾರೆ. ಇದು ಕವಿಯ ಆಶಯ ಮಾತ್ರವಾಗುವುದು ದುರಂತ. ಕರಿಮಾಯಿ ಮತ್ತು ಬೇಡರ ಹುಡುಗ ಎರಡೂ ಕವಿತೆಗಳಲ್ಲಿ ಜನಪದ ಜಗತ್ತು ಮಾಯವಾಗುವಿಕೆಯೇ ವಸ್ತುವಾಗಿದೆ. ಕರಿಮಾಯಿ, ಹಿಂದೆ ಮಾಡಿರುವ ಕೆಲಸವನ್ನು ಈಗ ಮಾಡಲು 'ಕೇವಲ' ಸಿದ್ಧವಾಗಿರುವಳಷ್ಟೇ. ಆದರೆ ಅವಕಾಶವಿಲ್ಲ. ಬೇಡರ ಹುಡುಗನದು ಇದೇ ರೀತಿಯ ಪರಿಸ್ಥಿತಿಯಾಗಿದೆ.

೧೯೮೯ರಲ್ಲಿ ರಚಿತಗೊಂಡಿರುವ 'ಬೆಳ್ಳಿಮೀನು' ಸಂಕಲನ ಹಲವು ಮಹತ್ವದ ಕವಿತೆಗಳನ್ನು ನೀಡಿದೆ. ಈ ಕಾಲಘಟ್ಟದಲ್ಲಿ ಕಂಬಾರರನ್ನು ಭಾರತೀಯ ಪ್ರಜಾಪ್ರಭುತ್ವ, ರಾಜಕಾರಣ, ಗಾಂಧೀಜಿಯ ತತ್ವಗಳು ಹೆಚ್ಚು ಪರೀಕ್ಷಿಸಿದ ಕಾಲವೆನ್ನಬಹುದು. ಭಾರತದ ರಾಜಕೀಯದ ಕೇಂದ್ರಬಿಂದುವಾದ ದಿಲ್ಲಿಯ ಅಂತರಂಗವನ್ನು ಕ್ಯಾಬರೆಗೆ ಹೋಲಿಸಿ ಬರೆದಿದ್ದಾರೆ. ಪ್ರಸ್ತುತ ಸಂಕಲನದ 'ದಿಲ್ಲಿ' ಎಂಬ

ಕವಿತೆಯಲ್ಲಿ ಅದನ್ನು ಮುಂದುವರೆಸಿದ್ದಾರೆ. ದಿಲ್ಲಿಯ ಮುಖಾಂತರವೇ ಪ್ರಜಾಪ್ರಭುತ್ವ ಭಗ್ನತೆಯು ಇಲ್ಲಿ ಮೈಗೂಡಿಸಿಕೊಂಡಿದೆ. ಕಳೆದುಹೋದ ಚರಿತ್ರೆಯನ್ನು ಪುನರ್ ವಿಮರ್ಶಿಸುವ ಸೂಚನೆಗಳು ಕಾಣುತ್ತವೆ.

ಬೆಲೆಯುಳ್ಳ ನಕಲಿ ನಗೆಯನ್ನು
ವಿದೇಶಿ ವಿನಿಮಯ ಸರಬರಾಜಿನಲ್ಲಿ
ಹರಾಜು ಮಾಡುವ
ಗಾಂಧೀ ಬಜಾರಿಯ ನೋಡಿದೆ

(ಈವರೆಗಿನ ಹೇಳತೇನ ಕೇಳ - ೬೧)

ಈ ಕವಿತೆ ಬೆಳ್ಳಿ ಮೀನು ಸಂಕಲನದ್ದು. ದಿಲ್ಲಿಯ ಪರಿಸ್ಥಿತಿ (ಆ ಮೂಲಕ ರಾಜಕಾರಣದ)ಯನ್ನು ಗಾಂಧೀ ಬಜಾರಿ ಎಂಬ ಶಬ್ದದಿಂದಲೇ ಗುರುತಿಸಬಹುದು. ಗಾಂಧೀ ಬಜಾರ್ ಆಗದೇ 'ಬಜಾರಿ' ಎಂಬುದನ್ನು ಕುತೂಹಲದಿಂದ ಗಮನಿಸಬೇಕು. ದಿಲ್ಲಿ ಬಗ್ಗೆ ಕಂಬಾರರು ಮತ್ತೊಮ್ಮೆ ಹೀಗೆ ಬರೆಯುತ್ತಾರೆ :

ಕುಲಗೆಟ್ಟ ವೋಟಿನ ರಾಜಕಾರಣಗಳ ದಿಬ್ಬಣಾ
ಅವನವನಿಗೆ ಅವನವನ ಖಯಾಲಿಯ
ಪಂಚೇಂದ್ರಿಗಳಿಗೆ ಪ್ರತ್ಯೇಕ ಸುಖ ಕೊಡುವ
ವಿವಿಧ ಭಾರತಿಯಾಗಿ
ಹರ್ಷದ ಡೋಜು ಕೊಡವೀ
ಖುಶಿ ಬೀಸುವ ಗಿರಣಿಗೆ
ಸೋಬಾನ ಹೇಳಿರೇ
ಮೀಡಿಯಾಂಗನೆಯರೇ! (ಪುಟ ೫೧ರಲ್ಲಿ)

ರಾಷ್ಟ್ರೀಯತೆಯ ವಿಘಟನೆಯ ಸ್ವರೂಪ ೮೦ರ ದಶಕಕ್ಕಿಂತ ಪ್ರಸ್ತುತ ದಿನಗಳು ಕಂಬಾರರನ್ನು ಹೆಚ್ಚು ಕಾಡಿವೆ ಎನ್ನಬಹುದು. ಸ್ವತಃ ಕಂಬಾರರು ದಿಲ್ಲಿಯ ರಾಜಕಾರಣವನ್ನು ಕಣ್ಣಾರೆ ಕಂಡವರು. ದಿಲ್ಲಿ ಎಂಬ ಮಾಯಾಂಗನೆಯು ಭಾರತದ ಇತರ ರಾಜ್ಯಗಳನ್ನು ತನ್ನ ಮಾಯೆಯೊಳಗೆ ಗರ್ಭೀಕರಿಸಿಕೊಳ್ಳುವುದು ಮುಖ್ಯವಾದ ವಿಚಾರವೆನ್ನಬಹುದು.

ಕಂಬಾರರು ಕೆಲವು ಕಡೆ ಹಿಂದಿನ ಕಾವ್ಯಗಳಲ್ಲಿ ಎತ್ತಿಕೊಂಡಿರುವ ಪ್ರಶ್ನೆಗಳನ್ನು ಪುನಃ ಕೇಳಿಕೊಂಡಿದ್ದಾರೆ. ಅವರೆ ಮೂಲ ಕವಿತೆಗಳ ಮಾದರಿಯನ್ನು ಎಲ್ಲೂ ಅನುಸರಿಸಿಲ್ಲ. ಯಾವುದೇ ಒಬ್ಬ ಕವಿಗೆ ಹಿಂದಿನ ಕಾಲಘಟ್ಟದಲ್ಲಿ ರಚಿತಗೊಂಡಿರುವ ಕವಿತೆಯ ವಸ್ತುವನ್ನು ಹಲವು ವರ್ಷಗಳ ನಂತರ ಮುಂದುವರೆಸುವಾಗ ಎದುರಾಗುವ ಸವಾಲುಗಳೆಂದರೆ 'ನಿರ್ಧಾರ'ಗಳದ್ದು. ತಾನು ಹಿಂದೆ ಒಪ್ಪಿಕೊಂಡ ವಸ್ತುವನ್ನೇ ಸಮರ್ಥಿಸಿಕೊಳ್ಳುವುದು ಒಂದು ಕಡೆಯಾದರೆ ಅದೇ ವಸ್ತುವನ್ನು ಪುನರ್ ನಿರ್ಮಿಸುವುದು ಮತ್ತೊಂದು ರೀತಿಯದು. ಹೀಗೆ ಪುನರ್ ಕಟ್ಟುವಾಗ 'ಅನುಭವ' ಮತ್ತು 'ಕಾಲ'ದ ಸಂದರ್ಭ ಮುಖ್ಯಪಾತ್ರ ವಹಿಸುತ್ತವೆ. ಕಂಬಾರರ ಎಲ್ಲಿದೆ ಶಿವಾಪುರದಲ್ಲಿನ ಹಂಪಿ ಭಾಗದ ಕವಿತೆಗಳು ಈ ಸವಾಲನ್ನು ಎದುರಿಸಿವೆ. ಈ ಮಾತು ಭಾಷಿಕ, ಸಾಂಸ್ಕೃತಿಕ ದೃಷ್ಟಿಯಿಂದಲೂ ವಾಸ್ತವವಾದುದು. ಮುಖ್ಯವಾಗಿ ಇಲ್ಲಿ ಪುನರಾವರ್ತನೆಗೊಂಡಿರುವ ಗೋಡ್ಸೆ ಗಾಂಧೀ, ಇಬ್ಬರೂ ದೇಶಭಕ್ತಿಗೆ ಮಾತ್ರ ಸೀಮಿತಗೊಳ್ಳದೆ, ದೇಶದ ಇನ್ನಿತರ ಗಂಭೀರವಾದ ಸಮಸ್ಯೆಗಳಿಗೆ ಮುಖಾಮುಖಿಯಾಗಿದ್ದಾರೆ. ಕಂಬಾರರು ೮೦ರ ದಶಕದಲ್ಲಿ ಗೋಡ್ಸೆ ಬಗ್ಗೆ ಬರೆದಾಗ ಗೋಡ್ಸೆ ಹೇಳುತ್ತಾನೆ :

ರಕ್ತವಿದೆಕೋ ಮಾಂಸವಿದೆಕೋ ಅಂತ ಹಲುಬಿದಾಗ
ಹಸುವಿನ ರಕ್ಷಣೆಗೆ ವೈಕುಂಠ ಅವತರಿಸಲಿಲ್ಲ
ರಾಮನ ಮುಖವಾಡ ನಿನ್ನ ಕಾಪಾಡಲಿಲ್ಲ
ನೀ ಬಿದ್ದ ಭಂಗಿ ನಡುಗುವ ನನ್ನ ನೋಡಿ
ಕನಿಕರಿಸಿದಂತಿತ್ತು
ನೆಲದ ಮೇಲಿನ ನೆರಳು ನೆತ್ತರಲ್ಲದ್ದಿ
ಒದ್ದೆಯಾಗಿತ್ತು (ಈ ವರೆಗಿನ ಹೇಳತೇನ ಕೇಳ, ಪುಟ - ೬೭)

೮೦ರ ದಶಕದ ಕವಿತೆಯ ಅಂತರ್ಯದಲ್ಲಿ ಗಾಂಧೀಜಿ ತತ್ವಗಳ ಸರ್ವನಾಶವನ್ನು ನೋಡಬಹುದು. ಭಾರತದಂತಹ ಭಾರತದಲ್ಲೇ ಗಾಂಧೀ ತತ್ವಗಳ ಹತ್ಯೆ ದುರಂತದ ಸೂಚನೆ ಕಂಡು ಗಾಂಧೀಯನ್ನು ಸಾಯಿಸಿದ ಗೋಡ್ಸೆ ಹೀಗೆ ವ್ಯಂಗ್ಯವಾಡಿದ್ದು ಸತ್ಯವೆನಿಸಿದೆ. ಅಹಿಂಸೆ, ಪ್ರಾಮಾಣಿಕತೆಗಳು ಗಾಂಧಿಯೊಂದಿಗೆ ಶವಪೆಟ್ಟಿಗೆ ಸೇರಿವೆ. ಕಂಬಾರರು ಗಾಂಧೀ ಬಗೆಗಿನ ಚಿಂತನೆಗಳು ಮುಂದುವರೆದು, 'ಗೋಡ್ಸೆ' ಇಂದು ಬೇರೆ ಬೇರೆ ಮುಖವಾಡಗಳನ್ನು ತೊಡುತ್ತಿದ್ದಾನೆ. ಈ ಬಗೆಗೆ ಕಂಬಾರರ ಇತ್ತೀಚಿನ ನಿಲುವನ್ನು ಈ ಸಾಲುಗಳು ಹೀಗೆ ಅಭಿವ್ಯಕ್ತಿಸುತ್ತವೆ.

ದಿನಾ ಸಾಯುವ ಕರ್ಮ ಗಾಂಧಿಗೆ
ಕೊಲ್ಲುವ ಕರ್ಮ ನಮಗೆ ತಪ್ಪಿದ್ದಲ್ಲ
ದೇಶಕ್ಕಾಗಿ ಇದು ಹೆಚ್ಚಲ್ಲ (ದೇಶಭಕ್ತನ ಭಕ್ತಿಗೀತೆ - ೫೫)

ಸಾಯಲೇಬೇಕಾಗಿತ್ತು ಸತ್ತಿರಿ ಗಾಂಧೀಜಿ, ಹುತಾತ್ಮರ
ಅಜೆಂಡಾದಂತೆ ಮಾಡುವುದು ಮಾಡಿ ಸತ್ತು ಹುತಾತ್ಮರಾದಿರಿ
ಇಲ್ಲದಿದ್ದರೆ ಈಗಿದ್ದ ಮರ್ಯಾದೆಯೂ
ಇರುತ್ತಿರಲಿಲ್ಲ (ಗಾಂಧೀಜಿ - ಪುಟ ೬೮)

ಇಂದು ಜಗತ್ತೇ ಒಂದು ಮಾರುಕಟ್ಟೆಯಾಗಿರುವಾಗ ಗಾಂಧೀ ತತ್ವಗಳು ತನ್ನ ಕಾಂತಿಯನ್ನು ಕಳೆದುಕೊಂಡಿವೆ. ಯಂತ್ರ ಸಂಸ್ಕೃತಿ ಗಾಂಧಿ ಮೇಲೆ ಮಾಡುತ್ತಿರುವ ದಾಳಿಯನ್ನು ನಾವು ಪರೋಕ್ಷವಾಗಿ ಸ್ವೀಕರಿಸುತ್ತಿದ್ದೇವೆ. ಕಂಬಾರರು ದೇಸೀ ಸಂಸ್ಕೃತಿಯ ಅಂತರಂಗದಲ್ಲೇ ಗಾಂಧೀತತ್ವಗಳನ್ನು ಅಡಗಿಸುತ್ತಾರೆ ಎನಿಸುತ್ತದೆ. 'ವ್ಯಾಪಾರ ಸಂಸ್ಕೃತಿ' ಕಂಬಾರರನ್ನು ಕಾಡಿರುವ ಮತ್ತೊಂದು ಭೂತ. ನವವಸಾಹತುಶಾಹಿಯ ರೂಪಾದ ಬಹುರಾಷ್ಟ್ರೀಯ ಕಂಪನಿಗಳು ಇಂದು ಹೊಸದಾದ ಶ್ರೇಣೀಕೃತ ರಾಜಕಾರಣವನ್ನು ಮಾಡುತ್ತಿವೆ. ಮಾತಿನಿಂದ - ಮನೆಯವರೆಗೂ ಇದನ್ನು ಗಮನಿಸಬಹುದು. ಅಮೇರಿಕದ ಒಳಸಂಚನ್ನು ಭಾರತದ ಮನಸ್ಸುಗಳು ಉದಾರವಾಗಿ ಸ್ವೀಕರಿಸಿವೆ. ಬಹುರಾಷ್ಟ್ರೀಯ ಕಂಪನಿಗಳಿಂದ ಉದ್ಭವಿಸಿರುವ ಸಮಸ್ಯೆಗಳನ್ನು ನಮ್ಮ ಜನಪದ ಲೋಕ ಸಂಘರ್ಷವಾಗಿ, ಸವಾಲಾಗಿ ಸ್ವೀಕರಿಸಿದೆ. ಮುಗ್ಧತೆಯಿಂದ ಒಪ್ಪಿಕೊಂಡಿದ್ದೇ ನಾವಿಂದು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ.

ಅಂಥವನು ಪಾಪ ಸೀರಲಿಬ್ಬಿದ್ದ ಮ್ಯಾಲೆ ಇದ್ದಿಲಾದನಂತೆ
ಅವನ ಮೂಳೆಗಳಿಂದ ಟಾಲ್ಕಂ ಪೌಡರು ಮಾಡುವ
ಕಂಪನಿಗಳೆಷ್ಟೋ ಹುಟ್ಟಿವೆಯಂತೆ ಅಮೆರಿಕಾದಲ್ಲಿ
ನಮ್ಮವರೂ ಹಿಂದೆ ಬಿದ್ದಿಲ್ಲ

ಪಳೆಯುಳಿಕೆಯ ಮ್ಯಾಲೆ ಹೌಸಿಂಗ್‌ಬೋರ್ಡ್
ಮನೆ ಕಟ್ಟಿಸುವ ನೀಲಿ ನಕ್ಷೆ ತಯಾರಿಸಿರುವರಂತೆ
ವ್ಯವಹಾರವಾಗಲೇ ಕುದುರಿದೆಯಂತೆ
ಅಮೆರಿಕದವರೊಡಿಗೆ. (ಚಂದ್ರಾಮ ಸತ್ತ - ಪುಟ ೭೬)

ಇದಲ್ಲದೆ ಅಮೆರಿಕಾದ ಭೋಗ ಸಂಸ್ಕೃತಿಯಿಂದ ಕನಸುಗಳು ಮಾರುಕಟ್ಟೆಯ ಮಾರುವ ವಸ್ತುಗಳಾಗಿವೆ. ಒಟ್ಟಿನಲ್ಲಿ ಕಂಬಾರರ ಇದುವರೆಗಿನ ಕಾವ್ಯವನ್ನು ಗಮನಿಸಿ ಹೇಳುವುದಾದರೆ, 'ಎಲ್ಲಿದೆ ಶಿವಾಪುರ' ಅವರ ಕಾವ್ಯವನ್ನು ಅಖಂಡತೆಯಿಂದ ಇಬ್ಭಾಗದೆಡೆಗೆ ಸಾಗುತ್ತಿರುವುದು ಬಲವಾಗಿದೆ.

ಕಂಬಾರರು 'ಎಲ್ಲಿದೆ ಶಿವಾಪುರ'ದಲ್ಲಿ ಬಳಸಿರುವ ಭಾಷೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳಲೇಬೇಕು. 'ಹೇಳತೇನ ಕೇಳ' ಭಾಷೆಯು ಹಾಡಿನ, ಲಾವಣಿ ರೂಪದ ಭಾಷೆಯಾದರೆ ಇಲ್ಲಿ ಭಾಷೆ ಇನ್ನಷ್ಟು ಸಡಿಲಗೊಂಡಿದೆ. ಭಾಷೆಯ ಸ್ಥಿತ್ಯಂತರದೊಂದಿಗೆ ಆಲೋಚನಾ ವಿಧಾನಗಳು ಪಲ್ಲಟಗೊಂಡಿವೆ. ಭಾಷೆ ಮತ್ತು ಸಂವಹನವು ಇಲ್ಲಿ ಮುಖ್ಯ ಪಾತ್ರವಹಿಸಿದೆ.

ಕಂಬಾರರು ಒಂದು ರೀತಿಯಲ್ಲಿ ಸಿದ್ಧಶೈಲಿಯನ್ನು ಅನುಸರಿಸುತ್ತಲೇ ಭಾಷೆಯಲ್ಲಿ ಹೊಸತನವನ್ನು ಕಂಡಿದ್ದಾರೆ ಎನ್ನಬಹುದು. ಆಕಾಶ-ಬಯಲು ಎಂಬ ಭಾಗವು ಮಾತ್ರ ಹಳೆಯ ರೊಮ್ಯಾಂಟಿಕ್ ಮಾದರಿಯನ್ನು ಹಿಡಿದಿದೆ. ಈ ಭಾಗದಲ್ಲಿ ಹೊಸ ಕಂಬಾರರನ್ನು ಹುಡುಕುವುದು ಕಷ್ಟ. ಶಿವಾಪುರದಲ್ಲಿನ ಎಲ್ಲಾ ಪದ್ಯಗಳು ಹೊಸತನದಿಂದ ಬಿಡಿಸಿಕೊಳ್ಳುವುದರಿಂದಲೇ ಇದಕ್ಕೆ ಮಹತ್ವ ಬಂದಿದೆ.



ಕನ್ನಡ ಅಧ್ಯಾಪಕ
ವಿವೇಕಾನಂದ ಪದವಿ ಕಾಲೇಜು
ಬೆಂಗಳೂರು
ಮೊಬೈಲ್ : ೯೮೮೬೨೭೯೪೪೧


ಹಸುವಿನ ಮೊಲೆಗೆ ಹುಲಿಮರಿಯ ಬಾಯಿ

ಡಾ. ಕೆ. ಸಿರಿವಾರೆಡ್ಡಿ

೧

ಧರ್ಮ, ರಾಜಕೀಯ, ವಿಜ್ಞಾನ-ತಂತ್ರಜ್ಞಾನಗಳು, ಅಭಿವೃದ್ಧಿ ಯೋಜನೆಗಳು, ಮಾಧ್ಯಮಗಳ ಮೇಲಾಟದಿಂದಾಗಿ ಇಡೀ ಪರಿಸರ ಹಿಂಸಾತ್ಮಕವಾಗಿ ಮಾರ್ಪಟ್ಟಿದೆ. ಅಂದರೆ ರಾಜಕೀಯ-ಧಾರ್ಮಿಕ ಬಂಡಾಟಗಳು, ತಂತ್ರಜ್ಞಾನದ ಒತ್ತಡ, ಆಧುನಿಕ ಅರ್ಥಶಾಸ್ತ್ರದ ಕುಟಿಲೋಪಾಯಗಳ ಲೆಕ್ಕಾಚಾರಗಳಿಂದ ಅಖಂಡ ಪರಿಸರದ ದಮನೀಯ ಸ್ಥಿತಿಯಿಂದಾಗಿ ಮಾರಣಾಂತಿಕ ಭಯ ಎಲ್ಲೆಲ್ಲೂ ಆವರಿಸುತ್ತಿದೆ. ಜೀವ ಕೇಂದ್ರಿತ ಬದುಕಿನ ನೆಮ್ಮದಿ ಕದಡಿಹೋಗಿದೆ. ಪಶ್ಚಿಮದ ವಿವೇಕರಹಿತ ಅಭಿವೃದ್ಧಿಯ ಅನುಕರಣೆ ನಮ್ಮಂತಹ ರಾಷ್ಟ್ರಗಳನ್ನು ಶೋಚನೀಯ ಸ್ಥಿತಿಗೆ ತಳ್ಳುತ್ತಿದೆ. ಇವುಗಳಲ್ಲಿ ಯಾವುದನ್ನೂ ಕುರಿತು ಮಾತನಾಡುವುದು ಕಷ್ಟ. ಹಾಗೇನಾದರೂ ಚಕಾರವೆತ್ತಿದರೆ ಜೀವಕ್ಕೆ ಕಂಟಕವಾಗಬಹುದು. ಹಾಗಾಗಿ ವ್ಯಕ್ತಿನಿಷ್ಠ ಅಭಿವ್ಯಕ್ತಿಗೆ ಈ ಕಾಲ ತುಂಬ ಮಾರಕವಾಗಿದೆ.

ಸಾಮಾಜಿಕ ಆರೋಗ್ಯವನ್ನು ಕಾಯಬೇಕಾದ ಸಾಂಸ್ಕೃತಿಕ ವರ್ಗ ರಾಜಕೀಯ ಮತ್ತು ಅಧಿಕಾರಶಾಹಿ ಒಡ್ಡಿದ ಕುಣಿಗಳಲ್ಲಿ ಸಿಕ್ಕಿಕೊಂಡಿದೆ. ಅಂದರೆ ಆಯಕಟ್ಟಿನ ಜಾಗಗಳಲ್ಲಿ ಸ್ಪರ್ಧೆಯೋಪಾದಿಯಲ್ಲಿ ಲೇಖಕ ವರ್ಗ ಸೆಣಸಾಡುತ್ತಿದೆ. ಈ ಸೆಣಸಾಟದಿಂದಾಗಿ ಸಾಂಸ್ಕೃತಿಕ ಸಂಘರ್ಷವಾಗಲಿ, ಜಿಜ್ಞಾಸೆಯಾಗಲಿ ಒಬ್ಬರು ಮತ್ತೊಬ್ಬರನ್ನು ನಂಬುವ ಸ್ಥಿತಿಯಾಗಲೀ ಇಲ್ಲವಾಗಿದೆ. ಹೀಗಾಗಿ ಸಾಂಸ್ಕೃತಿಕ ವಲಯ ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ತಾನೇ ದ್ರೋಹ ಬಗೆದುಕೊಂಡಿದೆ. ಪರಿಣಾಮವಾಗಿ ಸಾಂಸ್ಕೃತಿಕ ವಲಯ ಒಂದು ಬಗೆಯಲ್ಲಿ ಗರಬಡಿದ ಸ್ಥಿತಿಗೆ ಮುಟ್ಟಿದೆ.



ಇಂಥ ಪರಿಸರದಲ್ಲಿಯೂ ಇದ್ದು ಅದರ ಲಾಭ ನಷ್ಟಗಳನ್ನು ಅನುಭವಿಸುತ್ತ ಇದರ ನಡುವೆಯೂ ಪ್ರತಿನಿಷ್ಠ ನೆಲೆಗಳಲ್ಲಿ ಅಲ್ಲದಿದ್ದರೂ ಸಾಂಸ್ಕೃತಿಕವಾಗಿ ಚಿಂತಿಸುವವರು ಬರೆಯುತ್ತಿರುವವರು ಕೆಲವರು ಇದ್ದಾರೆ ಎಂಬುದೇ ಸಮಾಧಾನದ ವಿಷಯವಾಗಿದೆ ಇದರ ಜತೆಯಲ್ಲಿಯೇ ಪ್ರಸ್ತುತ ಸಂದರ್ಭದಲ್ಲಿ ಏರ್ಪಟ್ಟಿರುವ ಸಮಸ್ಯೆಗಳಿಗೆ, ದಮನಿತ ನೆಲೆಗಳಿಗೆ ಪ್ರತಿಕ್ರಿಯಿಸುತ್ತಿದ್ದಾರೆ. ತಮ್ಮ ತಮ್ಮದೇ ಆದ ಸಾಂಸ್ಕೃತಿಕ ಜವಾಬ್ದಾರಿಯಿಂದ, ಲೋಕದೃಷ್ಟಿಯಿಂದ, ತನ್ನ ಪರಿಸರಕ್ಕೆ ಎದುರಾಗಿರುವ ಆತಂಕಕಾರಿ ನೆಲೆಗಳಿಗೆ ಪ್ರತಿರೋಧ ಮಾರ್ಗಗಳನ್ನು ಕೆಲವರಾದರೂ ಶೋಧಿಸುತ್ತಿದ್ದಾರೆ. ಹಿರಿಯ ಹಾಗೂ ಯುವ ಬರಹಗಾರರ ಅನೇಕ ಕೃತಿಗಳಲ್ಲಿ ಹಲವು ಬಗೆಯ ಪ್ರತಿರೋಧ ಮಾರ್ಗಗಳನ್ನು, ಲೋಕದೃಷ್ಟಿಯನ್ನು ಹುಡುಕಿಕೊಳ್ಳಬಹುದಾಗಿದೆ.

ಬ್ರಿಟಿಶ್ ವಸಾಹತುಶಾಹಿ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ಪರಿಸರ ನಡೆಸಿದ ಅನುಸಂಧಾನ ಮತ್ತು ಪ್ರತಿರೋಧವನ್ನು ಬಿಎಂಶ್ರೀ, ಬೇಂದ್ರೆ, ಕುವೆಂಪು, ಕಾರಂತ, ಅಡಿಗ ಮೊದಲಾದವರ ಕೃತಿಗಳಲ್ಲಿ ಕಾಣುತ್ತೇವೆ. ಅದರೂ ಸ್ವಾತಂತ್ರ್ಯಪೂರ್ವದ ಪ್ರತಿರೋಧದ ನೆಲೆಗಳಿಗೂ ಪ್ರಸ್ತುತ ಜಾಗತೀಕರಣದ ನೆಲೆಗಳಿಗೂ ವ್ಯತ್ಯಾಸವಿದೆ. ನವೋದಯ ಕಾಲದಲ್ಲಿ ಕಂಡ ಮೂಡಣದ ಬೆಳಗು ವಸಾಹತುಶಾಹಿ ಸಂಸ್ಕೃತಿಗೆ ಮುಖಾಮುಖಿಯಾದದ್ದು ಸಾಮಾನ್ಯ ಸಂಗತಿಯಲ್ಲ ಅಥವಾ ರಮ್ಯವೂ ಅಲ್ಲ. ಅದೊಂದು ಸಾಂಸ್ಕೃತಿಕ ಪ್ರತಿರೋಧ ಮತ್ತು ನವೋದಯದ ಲೋಕದೃಷ್ಟಿಯೂ ಆಗಿದೆ. ಈ ಲೋಕದೃಷ್ಟಿ ಒಬ್ಬೊಬ್ಬ ಲೇಖಕರದೂ ಭಿನ್ನವಾಗಿದ್ದು ಆಯಾ ಲೇಖಕರ ಶೋಧವಾಗಿದೆ. ಇಂಥ ಲೋಕದೃಷ್ಟಿ, ಜಾಗತೀಕರಣ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವ ಮಾದರಿಗಳಲ್ಲಿ ಚಂದ್ರಶೇಖರ ಕಂಬಾರರ ಇತ್ತೀಚಿನ 'ಎಲ್ಲಿದೆ ಶಿವಾಪುರ' ಕೃತಿಯಲ್ಲಿ ನಿಚ್ಚಳವಾಗಿ ಪ್ರಕಟವಾಗಿದೆ.

೨

ಕಂಬಾರರ ಕಾವ್ಯದ ಬೆಳವಣಿಗೆಯೆಂದರೆ ನಿರಂತರವಾಗಿ ನಡೆಸಿದ ಶಿವಾಪುರದ ಶೋಧ. ಅವರದೇ ಮಾತನ್ನು ಉದ್ಧರಿಸುವುದಾದರೆ, ''ನಾನು ಕಾವ್ಯದಲ್ಲಿ ಉಪಯೋಗಿಸುವುದು ಸಾಂಕೇತಿಕ ಶಿವಾಪುರವನ್ನು. ಅಂದಿನ ಕೂಡಲ ಸಂಗಮದ ಶಿವಾಪುರ ಈಗಿನ ಘೋಡಗೇರಿ, ಹಾಗೂ ನಾವು ಕಟ್ಟಬೇಕೆಂಬ ಕನಸಿನ ಶಿವಾಪುರ- ಈ ಮೂರೂ ಸೇರಿದ ಸಾಂಕೇತಿಕ ಶಿವಾಪುರದ ಶೋಧನೆ ನನ್ನ ಕವಿತೆ.'' (ಎಲ್ಲಿದೆ ಶಿವಾಪುರ, ಪುಟ-viii). ಕಂಬಾರರ ಸೃಷ್ಟಿಕ್ರಿಯೆ ಅಭಿವ್ಯಕ್ತಿ ಪಡೆಯುವುದೇ ಶಿವಾಪುರದ ಸಮೃದ್ಧ ಪರಿಸರದಲ್ಲಿ. ಈ ಸಮೃದ್ಧಿಯ ಸುಂದರ ಪರಿಸರದ ನೆನಪುಗಳು, ಕಲ್ಪನೆ, ಕನಸುಗಳು, ಅಪಘಾತಗಳು, ಅವರ ಈವರೆಗಿನ ಕಾವ್ಯ, ಕಾದಂಬರಿ, ನಾಟಕಗಳಲ್ಲಿ ಅಭಿವ್ಯಕ್ತಿಗೆ ಒಳಗಾಗಿವೆ. ಈ ಶಿವಾಪುರ ಕಂಬಾರರು ಈ ಮೇಲೆ ಕಾಣಿಸಿದ ಆಚೆಗೂ ವಿಸ್ತರಿಸುವ ಸಂವೇದನೆಯ ಪೆಚ್ಚುಗಾರಿಕೆಯಾಗಿದೆ. 'ಎಲ್ಲಿದೆ ಶಿವಾಪುರ' ಎಂದರೆ ಅದು ನಮ್ಮೆಲ್ಲರಲ್ಲೂ ಇದೆ ಎಂದರ್ಥ. ಇದು ಕಂಬಾರರ ಅಂತರಂಗದ ಆದರ್ಶ ಗ್ರಾಮವೂ ಆಧುನಿಕ ಭಾರತವೂ ಆಗಿದ್ದು, ಅದೊಂದು ಆಧುನಿಕ ಪುರಾಣದ ನೆಲೆಗೇರಿದೆ. ಈ ಶಿವಾಪುರ ಜಾಗತಿಕ ಗ್ರಾಮದ ರಾಕ್ಷಸೀ ದಾಹಕ್ಕೆ ಬಲಿಯಾಗುತ್ತಿದೆ.

ಪರಕೀಯ ಸಂಸ್ಕೃತಿಯ ಬಗ್ಗೆ ಕಂಬಾರರ ಕಾವ್ಯದ ಲೋಕದೃಷ್ಟಿ ಪ್ರತಿಕ್ರಿಯಿಸುತ್ತದೆ. ಶಿವಾಪುರ, ಘಟಪ್ರಭಾ ನದಿ, ಪರಾಂಬಿ ಮರ, ನನ್ನವ್ವ, ನನ್ನಪ್ಪ, ಕರಿಮಾಯಿ, ಕುರುಬರಣ್ಣ- ಹೀಗೆ ಎಲ್ಲವೂ ಅವರ ಸೃಷ್ಟಿಶೀಲ ಕೃತಿಗಳಲ್ಲಿ ಮತ್ತೆ ಮತ್ತೆ ಕಾಣಿಸುವ ಚಿತ್ರಗಳೂ ರೂಪಕಗಳೂ ಆಗಿವೆ. ಪ್ರತಿಬಾರಿಯೂ ಹೊಸತೊಂದು ಚಿಂತನೆಯನ್ನೂ ಧ್ವನಿಯನ್ನೂ ಪ್ರಕಟಿಸುವ ಪುರಾಣಗಳಾಗಿ, ಕಥನಗಳಾಗಿ, ಜೀವನವಾಗಿ

ಮೈ ತಳೆಯುತ್ತವೆ. ಈ ಸಂಕಲನದ ಕವಿತೆಯ ಹೆಸರುಗಳು ಈ ಹಿಂದಿನ ಕಂಬಾರರ ಕಾವ್ಯದ ಪರಿಚಯ ಇರುವವರಿಗೆ ದಿಕ್ಕು ತಪ್ಪಿಸುವ ಅವಕಾಶವನ್ನೂ ಹೊಂದಿದೆ. ಏಕೆಂದರೆ ಇಲ್ಲಿನ ಕೆಲವು ಕವಿತೆಗಳ ಹೆಸರುಗಳು ಮೇಲ್ನೋಟಕ್ಕೆ ಹಿಂದಿನ ಕೆಲವು ಕವಿತೆಗಳ ಪುನರಾವರ್ತನೆಯಾಗಿದೆಯೆಂದು ಕಾಣುತ್ತದೆ. ಆದರೆ ಇವನ್ನು ಕುತೂಹಲದಿಂದ ಪರಿಶೀಲಿಸಿದರೆ ಸಂಪೂರ್ಣವಾಗಿ ಬೇರೆಯದೇ ಆದ ಕಾವ್ಯ ದರ್ಶನವಾಗುತ್ತದೆ. 'ಅಕಾಲ'ದಲ್ಲಿ ನಿರಂತರವಾಗಿ ಸುರಿದ ಮಳೆಯಿಂದ ಆಶ್ರಯ ಪಡೆಯಲು ನಡೆಸಿದ 'ಆಸರೆ'ಯ ಹುಡುಕಾಟವೇ ಇಲ್ಲಿದೆ. ಇದು ಕಂಬಾರರ ಆತ್ಮಕಥನವೂ ಆಗಿರುವ ಹಾಗೆಯೇ ನಮ್ಮ ಆತ್ಮಕಥನವಾಗಿಯೂ ಪ್ರಕಟವಾಗಿಗೊಳ್ಳುವುದು ಈ ಕೃತಿಯ ಕಾವ್ಯಶಕ್ತಿಯ ಅನನ್ಯತೆಯಾಗಿದೆ. ಹಾಗಾಗಿ ಈ ಸಂಕಲನ ಎತ್ತುವ ಪ್ರಶ್ನೆ ಮತ್ತು ಹುಡುಕಾಟಗಳು ನಮ್ಮ ಪ್ರಶ್ನೆಗಳೂ ಹುಡುಕಾಟಗಳೂ ಆಗಿವೆ.

೨

ಕವಿ, ನಾಟಕಕಾರ, ರಾಜಕಾರಣಿಯಾದ ಕಂಬಾರರ ಹಲವು ವರ್ಷಗಳ ನಂತರ ಪ್ರಕಟಗೊಂಡ ಈ ಸಂಕಲನ ಪ್ರಸ್ತುತ ಕನ್ನಡ ಕಾವ್ಯ ಸಂದರ್ಭದಲ್ಲಿ ಜಾಗತೀಕರಣದ ಉಸಿರು ಕಟ್ಟಿಸುವ ಪರಿಸರದಲ್ಲಿ 'ತನ್ನ' ಅಸ್ತಿತ್ವವನ್ನು ಕಾವ್ಯಾತ್ಮಕವಾಗಿ ಹುಡುಕಾಟ ನಡೆಸಿದೆ.

ಜಂಬೂ ದ್ವೀಪದ ಪೈಕಿ ಮ್ಯಾಗಡೆ ಮಲೆನಾಡ
ಸೂಸಿ ಹರಿದಾಳಲ್ಲಿ ಘಟಪ್ರಭಾ
ಆ ದಂಡಿ ಆರ್‍ಯಾಣಾ, ಈ ದಂಡಿ ಶಿವಪುರ
ಕೆಂಪುಹಂಚಿನ ಊರು ಬಲು ಶೋಭಾ

ತೂಗು ತೊಟ್ಟಿಲವಾಗಿ ಬೆಳ್ಳಿ ಬಟ್ಟಲವಾಗಿ
ಕೈಕಾಲ ಮುರದಬಿದ್ದ ಲಕ್ಷ್ಮೀ ಜಾಗ

ಊರಾಗೂರ ಅದರಾಗ ಇನ್ನಾವೂರ
ಚೆಂದ ಶಿವಾಪೂರ ರಾಜೇಕ

ಹಸರುಶಾಂತಿ ಪಸರೀಸಿ ಮೈ ಚಾಚಿ ಮಲಗ್ಯಾದ
ನದಿಯ ಎದೆಯಾಗುನು ಅದೆ ನೆರಳಾ
ಹೊಳೆಯ ದಂಡೆಯ ಆಳ ನೂರಾರು ಆಲಂಬಿ
ಬುಡದಾಗ ಕರ್ರೆವ್ವ ಊರ್‍ಯಾಳ್ತಾ

'ಹೇಳತೇನ ಕೇಳ' ಕಾವ್ಯ ಭಾಗದಲ್ಲಿ ಕಾಣುವ ಶಿವಾಪುರಕ್ಕೆ ಭೌಗೋಳಿಕ ಗುರುತುಗಳಿವೆ. ಬದುಕಿನ ಸಂಭ್ರಮ, ಸಮೃದ್ಧಿಯಿದೆ. ಆಸರೆಯಿದೆ. ಪರಂಪರೆಯ ಆಲ, ಕರ್ರೆವ್ವ, ಕರಿಯಜ್ಜನ ರಕ್ಷೆಯಿದೆ. ಆದರೆ ಪ್ರಸ್ತುತ ಸಂಕಲನದ ಶಿವಾಪುರದಲ್ಲಿ ಇವೆಲ್ಲವೂ ತನ್ನ ಚಹರೆಗಳನ್ನು ಕಳೆದುಕೊಂಡಿದೆ. ಅದರ ಹುಡುಕಾಟವೇ ಕೇಂದ್ರಬಿಂದುವಾಗಿ ಹೊರಹೊಮ್ಮಿದೆ. ಪ್ರಸ್ತುತ ಪಶ್ಚಿಮ ಹುಲಿರಾಯ ಕುರಿಯ ವೇಷವ ಧರಿಸಿ ನಮ್ಮೊಳಗೆ ಅಡಕವಾಗಿದದ್ದರಿಂದ, ನಮ್ಮೊಳಗೆ ಅನೇಕ ಸಂದೇಹಗಳಿಗೆ ಎಡೆಮಾಡಿಕೊಟ್ಟಿದೆ. ಕುರಿ ಯಾರು ಹುಲಿ ಯಾರು ಎಂಬ ಗೊಂದಲಕ್ಕೆ ಅವಕಾಶ ಉಂಟು ಮಾಡಿದೆ. ಇದು ಸ್ಪಷ್ಟವಾದರೂ ಆಗದಂತೆ ನಟಿಸಿ ಸ್ವತಃ ವಂಚನೆ ಮಾಡಿಕೊಳ್ಳುವ ಹಂತ ತಲುಪಿರುವ ನಾಜೂಕುತನಕ್ಕೆ ನುಡಿಗೊಟ್ಟಿದೆ. ಅಂತರಂಗ ಬಹಿರಂಗ ಏಕತ್ರಗೊಂಡು ಹುಲಿಯ ವೇಷ ಧರಿಸಿರುವುದನ್ನು ಕಾಣಿಸಿದೆ. ದೇಶದ ಹೊರಗಿನ ಶತ್ರು

ಒಳಗಿನವನಾಗಿ ಮಾರ್ಪಟ್ಟಿರುವುದನ್ನು ಮಾರ್ಮಿಕವಾಗಿ ಅಭಿವ್ಯಕ್ತಿ ಪಡೆದಿದೆ. ಇಂಥ ಸಂದಿಗ್ಧ ಮತ್ತು ವಿನಾಶದ ಪರಿಸರದಲ್ಲಿಯೂ 'ಈ ನೆಲ ನಿಮ್ಮದೇ ಕಟ್ಟಿರಯ್ಯಾ ದೇಶ ಕೋಶ ಸೀಮೆ' ಎಂಬ ಆಶಾವಾದವನ್ನು ಹೊಮ್ಮಿಸಿದೆ.

ನಮ್ಮ ಊರಿಗೆ ಹೋಗಿದ್ದಾಗ
ಅಕಾಲ ಮಳೆ ಸುರಿಯುತ್ತಿತ್ತು ಒಂದೆ ಸಮ
ನಡುವ್ರ ನಿಂತ ಮ್ಯಾಲೆ ಊರೊಳಗೆ ಹೋದರಾಯ್ತೆಂದು
ಅಗಸೆ ಬದಿಯ ಯಕ್ಷಿಯ ಗುಡಿಯಲ್ಲಿ
ಆಸರಗೆ ನಿಂತೆ.

ಸದಾ ಹರಿವ ನದಿಯಲ್ಲಿ ಚರಿತ್ರೆ ಹರಿದಿದೆ. ಇಲ್ಲಿ ಅನೇಕ ಘಟನೆಗಳು ಘಟಿಸಿವೆ. ನವಚರಿತ್ರೆ ನಿರ್ಮಾಣವಾಗಿದೆ. ಅದರ ಕಥನವನ್ನು ಕಟ್ಟುವುದೆ ಇಲ್ಲಿ ಮುಖ್ಯ ನೆಲೆಯಾಗಿದೆ. ಯಕ್ಷಿ ಗುಡಿಯ ಶಿಥಿಲಾವಸ್ಥೆ ಶಿವಾಪುರದ ಅವಸ್ಥೆಯನ್ನು ಧ್ವನಿಸುತ್ತದೆ. ಇದು ಭಾರತದ ಗ್ರಾಮ ಜೀವನದ ಶಿಥಿಲಾವಸ್ಥೆಯ ಜೀವನವನ್ನೂ ಸಂಕೇತಿಸುತ್ತದೆ. ಗ್ರಾಮ ಸಮಾಜದ ಬದುಕು ರಾಜಕೀಯ ಚದುರಂಗದಾಟದ ಕುತಂತ್ರಗಳಿಂದ ಆಪತ್ತಿಗೆ ಒಳಗಾಗಿದೆ. ಅದರಿಂದ ಹೊರಬರಲು ಸ್ಥಳೀಯ ಲೋಕದೃಷ್ಟಿಯಿಂದ ಪ್ರತಿರೋಧ ಮಾರ್ಗಗಳನ್ನು ಕಂಬಾರರ ಕಾವ್ಯ ಜಗತ್ತು ಕಂಡುಕೊಳ್ಳುತ್ತದೆ. ಇಂಥ ಅವಸ್ಥೆಯಿಂದ ಉಂಟಾದ ನೋವಿನ ಭಾರವನ್ನು ಇಳಿಸಲು ನಡೆಸುವ ಹುಡುಕಾಟದ ನೆಲೆ ಕಾವ್ಯಾಭಿವ್ಯಕ್ತಿಯೆ ಆಗಿದೆ. ''ಮುಂದಿನ ದಿನಗಳಲ್ಲಿ ದಮನಿತ ಜ್ಞಾನ ಪರಂಪರೆಗಳು ಬಂಡೇಳುತ್ತವೆ'' ಎಂಬ ಚಿಂತಕ ಫೂಕೋನ ಮಾತು ಕಂಬಾರರ ಕಾವ್ಯ ಮೈ ತಳೆದಿರುವ ಶೋಧದ ನೆಲೆಗಳ ಇಂದಿನ ಸಂದರ್ಭದಲ್ಲಿ ನೆನಪಾಗುತ್ತದೆ.

ಸಾಮ್ರಾಜ್ಯಶಾಹಿ ದಾಹದಿಂದಾಗಿ ನಮ್ಮ ಪರಿಸರಕ್ಕಾದ ಲಾಭವೆಂದರೆ ಹದ, ಹೊಳಪುಗಳಿಲ್ಲದ, ನೀರಸ, ಗುಣಗಳಿಲ್ಲದ, ಯಾಂತ್ರಿಕ ಬದುಕಿನ ಸ್ಥಿತಿಯಾಗಿದೆ.

ಮರಗಟ್ಟಿ ರೊಬಟ್ಟಾದವರು.
ಹೃದಯ ಮಿಡಿಯುವುದಕ್ಕೆ ಬಟನೊತ್ತಿಕೊಂಬವರು!

★

ಜಂಗು ತಿಂದ ಇಂದ್ರಿಯಗಳ
ಸಾಣೆ ಹಿಡಿದು ಹದನವಾಗಿಸಿಕೊಂಬಾತ

★

ಈಗ ಉಳಿದವನು ಸೆಲ್ಲಾರಿದ ಮುದುಕ. (ಪು-೫)

ಇಂಥ ಯಾಂತ್ರಿಕ ಜೀವನ ಕ್ರಮದ ಚಿತ್ರಗಳು ಈ ಸಂಕಲನದ ಅನೇಕ ಕವನಗಳಲ್ಲಿ ದಟ್ಟವಾಗಿ ಕಾಣಿಸುತ್ತವೆ. ಹೊಸಬಗೆಯ ನುಡಿಗಟ್ಟು ಮತ್ತು ಭಾಷಾ ಪ್ರಯೋಗಗಳ ಮೂಲಕ ಇದನ್ನು ಸಾಧಿಸಲಾಗಿದೆ. ಈ ಮೇಲೆ ಸೂಚಿಸಿದಂತೆ ತನ್ನ ಸ್ಥಳೀಯ ಚೈತನ್ಯಭರಿತ ಜಾನಪದ ಪುರಾಣಗಳನ್ನು, ದೇವರುಗಳನ್ನು ತನ್ನ ಪ್ರತಿರೋಧದ ನೆಲೆಯಾಗಿ ಬಳಕೆಯಾಗಿದೆ. ಪಶ್ಚಿಮದ ಯೋಜನಾ ಕ್ರಮಕ್ಕೆ ಸ್ಥಳೀಯ ದ್ರವ್ಯದಿಂದಲೇ ಪ್ರತಿಯಾದ ಬಲವನ್ನು ಕಟ್ಟಿರುವುದು ಈ ಸಂಕಲನದ ರೂಪಕ ಜಗತ್ತಿನ ಶಕ್ತಿಯಾಗಿದೆ.

ಸ್ಥಳೀಯ ಜ್ಞಾನ, ಪುರಾಣ, ನೆನಪು, ಆಲೋಚನಾ ಕ್ರಮವನ್ನು ಪಶ್ಚಿಮದ ಅಹಂಕಾರಕ್ಕೆ ಮುಖಾಮುಖಿಯಾಗಿಸುವುದು ಮತ್ತು ನಮ್ಮ ಕೊರತೆಗಳನ್ನು ತುಂಬಿಕೊಳ್ಳಲು ನಮ್ಮದೇ ದೇವರು, ರಾಕ್ಷಸರು, ದೆವ್ವ, ಭೂತಗಳನ್ನೆ ಹುಡುಕಿಕೊಳ್ಳುವುದು ಇಲ್ಲಿ ಕಾಣುವ ಲೋಕದೃಷ್ಟಿಯೂ ಆಗಿದೆ.

ಎಷ್ಟು ತಿಳಿಯಾಗಿತ್ತು ನಮ್ಮೂರ ಹೊಳೆ ಆಗ!

★

ಈ ಮಧ್ಯೆ ನಡೆದ ಕರ್ಮಂಗಳ ಕಥೆಯನೇನ ಕೇಳುವಿರಯ್ಯ?
ಹೇಳಲಿಕ್ಕಿದೆ ಬೇಕಾದಷ್ಟು
ಈಗಿಷ್ಟು ತಿಳಿಯಿರಿ ಸಾಕು:
ನಮ್ಮ ನದಿಯ ಯೌವನವಾಗಲೇ ದುಂದು ವೆಚ್ಚವಾಗಿ
ತಂಗುಳಾಗಿದೆ ನೀರು

★

ಅವಳ ಭಾವ ದರ್ಪಣದಲ್ಲಿ
ನಮ್ಮ ಮುಖ ಮೂಡುವುದಿಲ್ಲ

★

ಮೊದಲಿನಬ್ಬರವಿಲ್ಲ ಧುಮುಕುವ ರಭಸವಿಲ್ಲ (ಘಟಪ್ರಭಾ ನದಿ, ಪು-೯)

ಶಿವಾಪುರದಂತೆಯೆ ಘಟಪ್ರಭೆಯೂ ತನ್ನ ಜವರೆ ಕಳೆದುಕೊಂಡ ಸ್ಥಿತಿಯನ್ನು ಈ ಮೇಲಿನ ಚಿತ್ರದಲ್ಲಿ ಕಾಣುತ್ತೇವೆ. ''ಹೇಳತೇನ ಕೇಳ' ಕವನದ ಘಟಪ್ರಭೆ ತನ್ನ ಯೌವನದ ದುಂದು ವೆಚ್ಚದಿಂದಾಗಿ ಮುದಿಗೊಂಡಿದ್ದಾಳೆ. ಭಾರತದ ಯಾವುದೇ ನದಿಯ ಸ್ಥಿತಿ ಇದಾಗಿದೆ. ಈ ಹಿಂದಿನ ಜಲತಾಣಗಳ ಅವನತಿಯನ್ನು ಈ ಕವಿತೆ ಕಟ್ಟಿಕೊಡುತ್ತದೆ. ಇಂಥ ಅವನತಿಯ ಚಿತ್ರಗಳು, ಆ ಬಗೆಗಿನ ವಿಷಾದ ಹಾಲಂಬಿ ಮರ ೧ ಮತ್ತು ೨ ಕವಿತೆಗಳಲ್ಲಿ ಮತ್ತೂ ತೀವ್ರವಾಗಿ ಮಡುಗಟ್ಟಿದೆ. ಒಂದು ಸಂಸ್ಕೃತಿಯ ಜೀವಧಾತುಗಳಾದ ನದಿ, ಅರಣ್ಯಗಳು ಮಾಯವಾಗುತ್ತಿರುವ ಸಂದರ್ಭದ ದುರಂತ ಚಿತ್ರಗಳ ಸರಮಾಲೆಯನ್ನೆ ಈ ಸಂಕಲನದಲ್ಲಿ ಕಾಣುತ್ತೇವೆ.

ಈ ಅನಾದಿ ಮರದ ವಯಸ್ಸನ್ನ ಅಳತೆ ಮಾಡಿ
ಹೇಳಬಲ್ಲವರನ್ನೂ ಹುಟ್ಟಿಲ್ಲ ಈ ಸೀಮೆಯೊಳಗೆ.

★

ಕಾಲನ ಎಲ್ಲ ವರಸೆಗಳನ್ನ ಅವನೆಲ್ಲ ಗಾಳಿ ಬಿರುಗಾಳಿಗಳನ್ನ

★

ಅಡ್ಡಾದಿಡ್ಡಿ ಬೆಳೆದಾ ಟೊಂಗೆ ಟಿಸಿಲು, ಇಳಿಬಿದ್ದ ಬಿಳಲು
ಗಂಟುಗೆಲ್ಲುಗಳಿಂದ ಎದುರಿಸಿ ಗೆದ್ದು
ಶ್ರೀಹಸಿರ ನಗುತ, ಸಾವಿರ ವರ್ಷ ಕೂತಿದ್ದ
ಮರವಿದು!

ಎಲ್ಲವನ್ನು ಹಣವನ್ನಾಗಿ ಮಾರ್ಪಡಿಸುವ ಈ ಕಾಲದಲ್ಲಿ ಸಂಸ್ಕೃತಿಯ ಪ್ರಶ್ನೆಗಳು ಹಿಂದೆ ಸರಿದದ್ದರಿಂದ

ಪರಂಪರೆಯು ಸತತ ನಿರಂತರತೆಗೆ ಧಕ್ಕೆಯಾಗಿದೆ. ಸಾವಿರ ವರ್ಷಗಳ ಒಂದು ಮರವೆಂದರೆ ಅದೊಂದು ಸಂಸ್ಕೃತಿಯ ಜೀವಾಳವಾಗಿದೆ. ನದಿಗಳಿಗೆ ಅಡ್ಡಲಾಗಿ ಕಟ್ಟಲಾಗುವ ಬೃಹತ್ ಅಣೆಕಟ್ಟುಗಳ ನಿರ್ಮಾಣ, ಹೆದ್ದಾರಿಗಳ ನಿರ್ಮಾಣ, ವಿಮಾನ ನಿಲ್ದಾಣಗಳ ನಿರ್ಮಾಣಕ್ಕಾಗಿ ಮತ್ತು ಗಣಿಗಾರಿಕೆಗಾಗಿ ಗ್ರಾಮ ಸಮಾಜದ ಕೃಷಿ ಭೂಮಿ ದುರ್ಬಳಕೆಯಾಗಿದೆ. ಜಾಗತಿಕ ಗ್ರಾಮದ ರಾಕ್ಷಸೀ ಹಸಿವಿಗೆ ಈ ಎಲ್ಲವೂ ಉಣಿಸಾಗುತ್ತಿದೆ. ರೊಬೆಟ್ಟಾದವರಿಗೆ, ಇಂದ್ರಿಯಗಳ ಸಾಣೆ ಹಿಡಿದವರಿಗೆ, ಸ್ಥಳೀಯ ಗ್ರಾಮಗಳ ಸಂಚಿಕೆ, ಸಂಬಂಧಗಳ ನೋವು ತಿಳಿಯುವುದಿಲ್ಲ, ಅರ್ಥವೂ ಆಗುವುದಿಲ್ಲ. ಕೆಂಡದ ಮಳೆಗೂ ಜಗ್ಗದ ಸ್ಥಳೀಯ ಪರಂಪರೆಯನ್ನು ಸಾಮ್ರಾಜ್ಯಶಾಹಿಯ ಮಳೆಯ ನೆರಳು ತತ್ತರಿಸುವಂತೆ ಮಾಡಿದೆ. ಅಂಥ ಅನುಭವದಲ್ಲಿಯೆ ''ವಾರಂಟಿ ಮರದಲೆ ಕಣ್ಣೊರೆಸಿಕೊಂಡು ಹೊಸ ಹಾಡಿಗೆ ದನಿಗೂಡುತ್ತದೆ'' ಎಂಬ ಆಶಯ ಈ ಕಾವ್ಯದ್ದಾಗಿದೆ. ಆದರೂ ''ಊರ ನೆತ್ತಿಯ ಮ್ಯಾಲೆ ಈಗಲೂ ಅಪರಿಚಿತ ಹದ್ದಿನ ನೆರಳು ಹಾರಾಡುತ್ತಿದೆ!'' ಎಂಬ ಭೀತಿ ಇದ್ದೇ ಇದೆ.

ಭಯ ಭೀತ ಶಿಥಿಲತೆಗಳ ನಡುವೆಯೂ ಮರ ಚಿಗುರುವುದು, ಹೊಸ ಹಾಡಿಗೆ ದನಿ ಕೊಡುವುದು ಒಂದು ಸಂಸ್ಕೃತಿಯ ಜೀವಂತಿಕೆಯಾಗಿದ್ದು ಪ್ರಾಕೃತಿಕ ವರವಾಗಿದೆ. ಇಂಥ ನೆಲೆಗಳು ಇಲ್ಲಿನ ಅನೇಕ ಕವಿತೆಗಳಲ್ಲಿ ರೂಹು ಪಡೆದಿವೆ.

೪

ಸಾಮ್ರಾಜ್ಯಶಾಹಿಗಳ ಅಹಂಕಾರದಿಂದ ಚರಿತ್ರೆಯಲ್ಲಿ ಅನಿವಾರ್ಯವಾಗಿ ನಡೆಯುವ ಯುದ್ಧಗಳ ಬಗೆಗಿನ ವ್ಯಂಗ್ಯ 'ಹಂಪಿಯ ತುದಿಯಿರದ ದಾರಿ' ಕವಿತೆಯಲ್ಲಿ ಪ್ರಕಟವಾಗುತ್ತದೆ. ಅನರ್ಥಕಾರಿ ಯುದ್ಧಗಳಿಂದ ಹಾಳಾದ ಚರಿತ್ರೆಯ ಗರ್ಭದಿಂದಲೇ ಹೊಸ ನಾಡೊಂದನ್ನು ಕಟ್ಟುವ ಆಶಯ ಗೂಡುಕಟ್ಟುತ್ತದೆ. 'ಬಂಡೆಯಿದೆ ಮಂಟಪ ಕಟ್ಟಿರಿ, ಶಿಲೆಯಿವೆ ಮೂರ್ತಿಯ ಕೆತ್ತಿರಿ, ಚೆಲ್ಲಾಡಿವೆ ಶಬ್ದ ಭಾಷೆಯ ಕಟ್ಟಿ, ಮಂತ್ರದಲ್ಲಿ ಮಲಗಿದ್ದವರನ್ನು ಎಬ್ಬಿಸಿರಯ್ಯ' ಎಂದು ಕಾಲನ ಬಿರುಗಾಳಿಗೆ ಈ ಕಾವ್ಯ ಮುಖಾಮುಖಿಯಾಗುತ್ತದೆ. 'ಜಿಜ್ಞೋಳೆ ಗೌರಮ್ಮ', 'ಅಂಗಳದ ಮರ', 'ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ', 'ದೇಶಭಕ್ತನ ಭಕ್ತಿಗೀತೆ', 'ಏ ಕುರುಬರಣ್ಣ' ಕವಿತೆಗಳಲ್ಲಿ ಭಾರತದ ರಾಜಕೀಯ ವಿಡಂಬನೆ, ಕಮಲದ ಕಂಪನಿಯವರು ಸನಾತನ ಸಂಸ್ಕೃತಿಯನ್ನು ಆಧುನಿಕಗೊಳಿಸುವ ಹುನ್ನಾರಗಳು ವ್ಯಂಗ್ಯಕ್ಕೆ ಗುರಿಯಾಗಿವೆ.

'ಗಾಂಧೀಜಿ ಸ್ವರ್ಗದಿಂದ ಇಳಿದು ಬಂದಾಗ', 'ದೇಶಭಕ್ತನ ಭಕ್ತಿಗೀತೆ' ಕವಿತೆಗಳಲ್ಲಿ ಹಿಂಸೆಯ ಹಲವು ಮಾದರಿಗಳನ್ನು ಕಾಣುತ್ತೇವೆ. ಹಿಂಸೆಯಿಂದ ನಮ್ಮ ದೇಶದ ಭೂಪಟವೇ ಬದಲಾಗಿ ಛಿದ್ರಗೊಂಡಿದೆ.

ನೆಲದಲ್ಲಿ ಹುಲ್ಲು ಹುಟ್ಟಿಲ್ಲ!
ಬಾನಲ್ಲಿ ಚಿಕ್ಕೆ ಮೊಳೆತಿಲ್ಲ!
ಭೂಮಿ ಆಕಾಶ,
ಕಲಬೆರಕೆಯಾಗಿವೆ
ಹಗಲುರಾತ್ರಿ!
ಎಷ್ಟೊಂದು ಕೆಂಪು ಚುಕ್ಕೆಗಳು
ಈ ದೇಶದ ನಕಾಶದಲ್ಲಿ!

ಗಾಂಧಿ ಮತ್ತೊಮ್ಮೆ ಬಂದಾಗ ಕಂಡ ಈ ಮೇಲಿನ ಚಿತ್ರ ಸಮಕಾಲೀನ ವಾಸ್ತವತೆಯನ್ನು ಕಟ್ಟಿಕೊಡುತ್ತದೆ. ಪ್ರಸ್ತುತ ಪರಿಸರ, ಹಿಂಸೆಯ ಕಾರಣದಿಂದಾಗಿ ಬಂಜೆಗೊಂಡಿದೆ.

ದಿನಕ್ಕೊಬ್ಬ ಗಾಂಧಿ, ಗಾಂಧಿಗೊಬ್ಬ ಗೋಡ್ಸೆಯ ಹುಡುಕಿ
ಸಿಕ್ಕದಿದ್ದಲ್ಲಿ ನಾನೊ ಇಲ್ಲವೆ ಅವನೊ ಗೋಡ್ಸೆಗಳಾಗಿ
ಗುಂಡು ಹಾರಿಸಬೇಕು

★

ದಿನಾ ಸಾಯುವ ಕರ್ಮ ಗಾಂಧಿಗೆ
ಕೊಲ್ಲುವ ಕರ್ಮ ನಮಗೆ ತಪ್ಪಿದ್ದಲ್ಲ
ದೇಶಕ್ಕಾಗಿ ಇದು ಹೆಚ್ಚಲ್ಲ (ಪು-೫೫)

ಧರ್ಮ, ದೇಶ, ಭಾಷೆ-ಹೀಗೆ ಭಕ್ತಿಯ ಹೆಸರಿನಲ್ಲಿ ದಿನನಿತ್ಯದ ಹಿಂಸೆಯಿಂದ ಪಾರಾಗಲಾರದ ಅವಸ್ಥೆಯನ್ನು ಇಲ್ಲಿ ಕಾಣುತ್ತೇವೆ. ಗಾಂಧಿಯ ಸಾವಿನಿಂದ ಕೊಚ್ಚಿಕೊಳ್ಳುವುದನ್ನು ಬಿಟ್ಟು ನಾವು ಏನನ್ನು ಕಲಿಯಲಿಲ್ಲ ಎಂಬುದು ಇಲ್ಲಿನ ತುಡಿತವಾಗಿದೆ.

'ನಿವೃತ್ತರು' ಕವಿತೆಯಲ್ಲಿ ಬದುಕಿನ ಅಂಚಿಗೆ ಸರಿದವರ ಮನೋಸ್ಥಿತಿಯನ್ನು ರೂಪಕಗೊಳಿಸಲಾಗಿದೆ. ಎಲ್ಲ ಬಗೆಯ ತಿರಸ್ಕಾರಗಳಿಗೆ ಗುರಿಯಾಗುವ, ಅದರಿಂದ ಏರ್ಪಡುವ ಒಳತೋಟಿಯ ವೇದನೆಯನ್ನು ಕಾವ್ಯವಾಗಿಸಿರುವ ಕ್ರಮ ಮಾರ್ಮಿಕವಾಗಿದೆ. 'ಹೆಣ್ಣು' ಕವನ ವಾಚ್ಯದಲ್ಲಿಯೇ ಬೆಳೆಯುತ್ತಾ ಹೋಗಿ ಒಮ್ಮೆಗೆ ಅರ್ಥ ಸೋಟಗೊಳ್ಳುತ್ತದೆ.

ಅಮೆರಿಕಾದ ದಬ್ಬಾಳಿಕೆ, ಸಾಮ್ರಾಜ್ಯಶಾಹಿ ಧೋರಣೆ, ಅನೈತಿಕ ಒಪ್ಪಂದಗಳಿಂದ ನಡೆಸುವ ವಂಚನೆ, ಅಬಲ ರಾಷ್ಟ್ರಗಳ ಮೇಲೆ ನಡೆಸುವ ಯಾಜಮಾನ್ಯ, ಸಹಾಯ ಹಸ್ತಗಳ ಆಮಿಷಗಳಿಂದ ಅಮೆರಿಕ ಮಾಡುವ ಮೋಸ, ತಾನು ಮಾಡಿದೆಲ್ಲ ಸರಿಯೆಂಬ ಅಹಂಕಾರ, ರಾಷ್ಟ್ರ ರಾಷ್ಟ್ರಗಳ ನಡುವೆ ಯುದ್ಧಗಳನ್ನು ಹಚ್ಚುವ ಕುತಂತ್ರಗಳು ಅಮೆರಿಕ ಎಂಬ ಭಾಗದಲ್ಲಿನ ಕವನಗಳಲ್ಲಿದೆ.

ಮರಳುಗಾಡಲ್ಲಿ ಉಪ್ಪು ನೀರು ಮಾರುವವರು
ಕುಡಿದಷ್ಟು ಧಗೆ ಹೆಚ್ಚು
ಧಗೆ ಹೆಚ್ಚಿದಷ್ಟೂ ನೀರು ಕುಡಿ.
ಇಗೊ ಪೆಟ್ಟಿಗೆ ಖಾಲಿ ಇದೆ,
ಬಟನೊತ್ತಿ ಒಳಗೆ ನಡೆ. (ಪು-೭೮)

'ಕನಸು ಮಾರುವ ಮಾರ್ಕೆಟ್ಟು!' ಎಲ್ಲರ ರಾಷ್ಟ್ರಗಳಿಗೂ ಕೊಡುತ್ತಿರುವ ಅಮೆರಿಕದ ಸಹಾಯ ಹಸ್ತದ ವಿಡಂಬನೆಯಾಗಿದೆ. ಆಧುನಿಕ ಅಭಿವೃದ್ಧಿ ವಿದ್ಯಮಾನಗಳ ಗಿಲೀಟುತನದ ವ್ಯಂಗ್ಯ ಇಲ್ಲಿದೆ.

'ಅಮೆರಿಕದ ರಾಜ', 'ಅಮೆರಿಕದ ರಾಣಿಗೆ', 'ನ್ಯೂಯಾರ್ಕಿನ ನಲವತ್ತೆರಡನೇ ರಸ್ತೆಯ ಹೋಟೆಲಲ್ಲಿ ರಾತ್ರಿ ಕುಣಿದ ಕಾಮಕಸ್ತೂರಿ' ಕವಿತೆಗಳಲ್ಲಿ ಅಮೆರಿಕದ ರಾಕ್ಷಸೀ ಮಾಯಾಜಾಲ, ತಂತ್ರಗಳು ಬಯಲಾಗಿವೆ. 'ಹೊಸನಾತ ಹೊಸನಾತವೆಂದು ಹಲುಬುತ್ತ' ವಿಶ್ವವೇ ನವರಾಕ್ಷಸೀ ದಾಪಕ್ಕೆ ಗುರಿಯಾಗುತ್ತಿರುವ ಚಿತ್ರಗಳು ಇಲ್ಲಿವೆ. ಇವು ಇಡೀ ವಿಶ್ವ ಮಾರಣಾಂತಿಕ ಹಂತಕ್ಕೆ ತಲುಪಿರುವುದನ್ನು ಧ್ವನಿಸುತ್ತವೆ.

ಎಲ್ಲೋ ಕುಂತು ಎಲ್ಲರ ಉಸಾಬರಿ ಮಾಡುವ ಜಗದ್ರಕ್ಷಕಿ
ಇವಳು ಮಾಡಿದ್ದೆಲ್ಲ ಕಾನೂನು ಸಮ್ಮತ
ಆಯ್ಕೆಗಳ ನಮಗೆ ನೀಡಿದ ದಯಾಳು ತಾಯಿ

★

ಜಗದೆಲ್ಲ ಪಾಪಗಳಿಗೆ ಅಂತಿಮ ರೂಪ ಕೊಡುವಾತ
ಗಾಳಿಗೆ ವಿಷ ಕುಡಿಸಿ ಮೋಜು ತಗೊಂಬಾತ
ವಾಯುಮಂಡಳ ಪ್ರಕ್ಷುಬ್ಧಗೊಳಿಸುವಾತ
ಸ್ಪೇಸಿನ ಸರೋವರವ ಕದಡುವಾತ (ಪು-೮೨)

ಅಮೆರಿಕ ತನ್ನ ಮಾಯಾಜಾಲದ ಬಲೆ ಹೆಣೆದು ಜಗತ್ತನ್ನೆಲ್ಲ ತನ್ನ ಆಹಾರವನ್ನಾಗಿ ಮಾಡಿಕೊಳ್ಳುತ್ತದೆ. 'ಜಾಗತಿಕ ಗ್ರಾಮ'ವನ್ನು ಸಮೂಹ ಹತ್ಯೆಗೆ ತಳ್ಳಿ ತಾನು ಆತ್ಮಹತ್ಯೆಗೆ ಗುರಿಯಾಗುವ ದಾರ್ಶನಿಕತೆ ಈ ಕವನಗಳಲ್ಲಿ ಪ್ರಕಟಗೊಳ್ಳುತ್ತದೆ.

ಒಟ್ಟಿನಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿ ಬಗೆಗಿನ ವ್ಯಂಗ್ಯ-ಪ್ರತಿರೋಧ, ಸ್ಥಳೀಯ ಭಾಷೆ, ಸಂಸ್ಕೃತಿಗೆ ಒದಗಿರುವ ದುಸ್ಥಿತಿ, ಆಧುನಿಕ ಅಭಿವೃದ್ಧಿಯಿಂದಾಗಿ ಪ್ರಕ್ಷುಬ್ಧಗೊಂಡಿರುವ ಪರಿಸರ, ಇತಿಹಾಸ ಮತ್ತು ಪರಂಪರೆಯ ಪ್ರಶ್ನೆಗಳು, ರಾಜಕೀಯ ದೊಂಬರಾಟ, ಕಳಂಕಿತ ಚರಿತ್ರಹೀನರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಬಿಂಬಿಸುತ್ತಿರುವ ಮೂಲಭೂತ ವಾದಿಗಳ ವಿಡಂಬನೆ, ಗಾಂಧೀಜಿಯ ವಿಚಾರಗಳು ದಿಕ್ಕುಗೆಟ್ಟ ಸ್ಥಿತಿಯ ವಿಶ್ಲೇಷಣೆ, ದೇಶ, ಭಾಷೆಗಳ ಸಮಸ್ಯೆ ಕುರಿತ ಹುಸಿಪ್ರೇಮ, ಹಿಂಸೆ, ಭಯ, ನಿರಾಸೆ, ಆತಂಕಗಳ ನಡುವೆಯೂ ಕಾಣುವ ಚೈತನ್ಯಶೀಲತೆ ಮತ್ತು ಆಶಾವಾದ, ವ್ಯಕ್ತಿಗತ ಪಶ್ಚಾತ್ತಾಪದ ನೆಲೆ, ದೃಢ ವಾಸ್ತವಗಳನ್ನು ನವ ಜನಪದ ಪುರಾಣಗಳಾಗಿ ಪರಿವರ್ತಿಸುವ ಕ್ರಮ, ದರ್ಪ ದೌರ್ಜನ್ಯಗಳಿಂದ ಏನನ್ನೂ ಪಡೆಯಲಾರದ ಮತ್ತು ಗೆಲ್ಲಲಾರದ ದರ್ಶನ ಈ ಸಂಕಲನದ ವೈಚಾರಿಕ ತಳಹದಿಯಾಗಿದೆ.

ಕಾವ್ಯದಲ್ಲಿ ಪ್ರಕಟಗೊಳ್ಳುವ ನಾಟಕೀಯ ಗುಣ ಮತ್ತು ನಿರೂಪಣ ಕ್ರಮ, ಛಂದೋಲಯಗಳಲ್ಲಿ ಕಂಡುಕೊಂಡಿರುವ ಹೊಸತನ, ಹೊಸಪದ-ನುಡಿಗಟ್ಟುಗಳ ನಿರ್ಮಾಣ, ಕಾವ್ಯವನ್ನು ಹೃದಯಕ್ಕೆ ದಾಟಿಸುವ ತಂತ್ರ, ನವಪುರಾಣಗಳ ಕಥನ ಶೈಲಿ, ಸಮಕಾಲೀನ ಸಂಕಟಗಳನ್ನು ಕಾವ್ಯದಲ್ಲಿ ಧ್ವನಿತವಾಗುವಂತೆ ಮಾಡುವ ರೀತಿ, ಇಂಗ್ಲಿಶ್ ಮತ್ತು ಕನ್ನಡ ಮೂಲದ ಧಾತುಗಳನ್ನು ಕಾವ್ಯಭಾಷೆಯಾಗಿ ಟಂಕಿಸುವ ವಿಧಾನ, ಪ್ರತಿಮೆ ಮತ್ತು ರೂಪಕಗಳಲ್ಲಿ ನಾವಿನ್ಯತೆ, ಮ್ಲೇಂಛ ಹುಡುಗಿ ಮಾದೇವಿ ಮತ್ತು ಕೌಜಲಗಿ ನಿಂಗವ್ವರಂಥ ಜನಪದರ ಬದುಕನ್ನು, ಲೋಕದೃಷ್ಟಿಯನ್ನು ಕಾವ್ಯವಾಗಿಸುವಲ್ಲಿನ ತಾಜಾತನಗಳಿಂದ ಈ ಕೃತಿ ಮಹತ್ವದಿಂದ ಕೂಡಿದೆ. ಹಾಗಾಗಿ ಈ ಎಲ್ಲ ಅನನ್ಯತೆಗಳಿಂದ ನಮ್ಮ ಕಾಲದ ಮುಖ್ಯ ಕೃತಿಯಾಗಿ ಓದುಗರ ಮನಸ್ಸನ್ನು ಆವರಿಸುವ ಶಕ್ತಿಯನ್ನು ಪಡೆದಿದೆ.

'ಹಸುವಿನ ಮೊಲೆಯ ಹುಲಿಮರಿಯ ಬಾಯಿಗಿಡುವ' ಕಾಣ್ಕೆ ಕಂಬಾರರಿಗೆ ಪ್ರಸ್ತುತ ಸಂಕಲನದಲ್ಲಿ ಸಿದ್ಧಿಸಿದೆ.

★

ಉಪ ಪ್ರಾಧ್ಯಾಪಕ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ-೫೮೩ ೨೭೬



ಎಂ.ಎಸ್.ಮೂರ್ತಿ ಅವರ ಕಲಾಕೃತಿ

ಸಂಚಯ
ಗ್ಯಾಲರಿ

SANCHAYA (Bi-Monthly), MAG(2) PRB-DECL : 309/94-95

ಸುತ್ತಲೂ ತೂಗಿಬಿಟ್ಟ ಖಾಲಿ ಗೂಡಿನಲೆಲ್ಲ
ಎಂತೆಂಥ ತೆನೆ
ಮುಗಿಲು ನಗುತಿದೆ ದೂರದೂರಿನ ಕರೆಗೆ
ಹೇಳುವುದು ಹೇಗವ್ವಾ
ಮೌನವನು ಮೌನವೇ ನುಂಗುವಾಗ

ಎನ್.ಕೆ. ಹನುಮಂತಯ್ಯ

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 19